# ಕೇರಳ ಪಾಠಾವಳಿ
# KERALA READER

## ಕನ್ನಡ
## KANNADA

## ಮೂಲ ಪಠ್ಯ
## BASIC TEXT

ತರಗತಿ

VIII

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು:
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)**
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - VIII (Basic Text)

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2025
Printed at : KBPS Kakkanad, Kochi
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸಮಾನವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷಾಶೈಲಿಯನ್ನು ಬೆಳೆಸಿಕೊಳ್ಳಲು ಭಾಷೆಯನ್ನು ಕಲಿಯಬೇಕು.

ಭಾಷಾ ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕವು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತದೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತದೆ, ಹಿತೈಷಿಗಳಂತೆ ಇರುತ್ತದೆ ಎನ್ನಬಹುದು. ಪಠ್ಯಪುಸ್ತಕವು ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡುತ್ತದೆ ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
# KANNADA - VIII BT

**Advisor**

| | |
|---|---|
| Sri. Shivashankara P. | Asst. Professor, GPM College, Manjeshwar |

**Chairman**

| | |
|---|---|
| Smt. Sujatha S. | HOD & Asst. Professor, Government College, Kasaragod |

**Experts**

| | |
|---|---|
| Dr. Shrikrishna Bhat | Rtd. Professor, Government College, Kasaragod |
| Dr. Shreedhara N | Asst. Professor, Government College, Kasaragod |
| Sri. Ramanna D | Rtd. HM, GHSS Delampady |

**Participants**

| | |
|---|---|
| Smt. Bhagyalakshmi | HM GHSS Paivalike. |
| Sri. Vishalaksha Puthrakala | Rtd HST SGKHS Kudlu. |
| Smt. Kalavathi B | HST SAPHSS Agalpady. |
| Smt. Shwetha Kumari M | HST SDPHSS Dharmathadka. |
| Smt. Raina Evet D'Souza | HST GHSS Paivalike Nagar. |
| Smt. Swathi Kumari M | HST SVVHSS Kodlamogaru. |
| Dr. Shreesha Kumar P | HST GVHSS Karadka. |
| Sri. Prashantha Holla N | HST SDPHSS Dharmathadka. |

**Artists**

| | |
|---|---|
| Sri. Prakash P. | Specialist Drawing Teacher, BRC Manjeshwar |
| Sri. Madhusudhanan K V | Drawing Teacher, CKNS GHSS Pilicode |
| Sri. Satheesh | Specialist Drawing Teacher, BRC Kumbala |

**Academic Co-ordinator**

**Dr. Sahaya Dhas D.**

Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


**ಘಟಕ 1 : ಆರೋಗ್ಯ ಸಂಪತ್ತು** 7 - 36

- ನೆಗಡಿ — ಲಲಿತ ಪ್ರಬಂಧ — ತೀ.ನಂ. ಶ್ರೀಕಂಠಯ್ಯ
- ಕುಡಿಯಬೇಡ — ಕವನ — ಕೊಂಚಾಡಿ ಸೀತಾರಾಮ ಭಟ್ಟ
- ಭ್ರಮಾಧೀನ — ಕತೆ — ಡಾ. ಸಿ.ಆರ್. ಚಂದ್ರಶೇಖರ್
- ನಾ ಕಂಡ ಆಸ್ಟ್ರೇಲಿಯಾ — ಪ್ರವಾಸ ಕಥನ — ಡಾ. ಕೆ. ಕಮಲಾಕ್ಷ

**ಘಟಕ 2 : ರಕ್ಷೆ - ಸುರಕ್ಷೆ** 37 - 56

- ಯೋಧನಿಗೊಂದು ನಮನ — ಕವನ — ಗಣೇಶ್ ಕುತ್ಯಾಡಿ
- ಸಮುದ್ರ ತೀರದ ಒಂದು ಘಟನೆ — ಕತೆ — ಡಾ. ಸುಧಾ ರಾವ್
- ಇದು ಮಾಹಿತಿ ಯುಗ. ಮಾಹಿತಿ ಕಳ್ಳರಿದ್ದಾರೆ. ಎಚ್ಚರಿಕೆ! — ಅಂಕಣ ಬರಹ — ಡಾ. ಯು.ಬಿ. ಪವನಜ

**ಘಟಕ 3 : ಜೀವನ ಜ್ಯೋತಿ** 57 - 84

- ಭೀಮನುದಿಸಿದನು ಭಾರತದ ಬೆಳಕಾಗಿ — ಕಥನ ಕವನ — ರಾಧಾಕೃಷ್ಣ ಕೆ. ಉಳಿಯತ್ತಡ್ಕ
- ನಾಯಿ ಮಲ್ಲಿಗೆ — ಕತೆ — ಕೆ.ಎಸ್. ನರಸಿಂಹಸ್ವಾಮಿ
- ಶಿಲುಬೆ — ನಾಟಕ — ವೇಣುಗೋಪಾಲ ಕಾಸರಗೋಡು

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.



# 1. ಆರೋಗ್ಯ ಸಂಪತ್ತು

ಆರೋಗ್ಯ ನಮಗೆ ದೇವರು ಕೊಟ್ಟ ಕೊಡುಗೆ. ಆರೋಗ್ಯವು ಮಾನವನ ದೈಹಿಕ ಮತ್ತು ಮಾನಸಿಕ ಸ್ಥಿತಿಯ ಮೇಲೆ ಪ್ರಭಾವ ಬೀರುತ್ತದೆ. ಹಣ, ಆಸ್ತಿ, ಸಂಪತ್ತಿಗಿಂತ ಆರೋಗ್ಯ ಸಂಪತ್ತು ಅಮೂಲ್ಯವಾದುದಾಗಿದೆ. ಆರೋಗ್ಯ ಸರಿಯಿಲ್ಲದಿದ್ದರೆ ಹಣವಿದ್ದರೂ ಪ್ರಯೋಜನವಿಲ್ಲ. ಈ ಹಿನ್ನೆಲೆಯಲ್ಲಿ 'ಆರೋಗ್ಯ ಸಂಪತ್ತು' ಎನ್ನುವ ಘಟಕವನ್ನು ಸಿದ್ಧಪಡಿಸಲಾಗಿದೆ. ಪ್ರವೇಶ ಚಟುವಟಿಕೆಯಾಗಿ 'ಆಹಾರ ದಿಢೀರ್! ಆರೋಗ್ಯ ಢಮಾರ್! ಹುಷಾರ್!!!' ಎನ್ನುವ ಲೇಖನವನ್ನು ನೀಡಲಾಗಿದೆ.

ಘಟಕದ ಆರಂಭದಲ್ಲಿ ತೀ. ನಂ. ಶ್ರೀಕಂಠಯ್ಯ ಅವರ 'ನೆಗಡಿ' ಎಂಬ ಲಲಿತಪ್ರಬಂಧವು ಸಾಮಾನ್ಯವಾಗಿ ಶೀತ, ನೆಗಡಿಯಾದಾಗಿನ ಅವಾಂತರಗಳನ್ನು ಬಹಳ ರಸವತ್ತಾಗಿ ತಿಳಿಸುತ್ತದೆ. ಕೊಂಚಾಡಿ ಸೀತಾರಾಮ ಭಟ್ಟ ಅವರು 'ಕುಡಿಯಬೇಡ' ಎಂಬ ಕವನದಲ್ಲಿ ಕುಡಿತದ ಕೆಡುಕುಗಳ ಕುರಿತು ವಿವರಿಸಿದ್ದಾರೆ. ಇಂದು ಯುವಜನಾಂಗ ದಾರಿತಪ್ಪಿ ನಡೆದು ಹಾಳುಮಾಡಿಕೊಳ್ಳುವ ವಿಚಾರವನ್ನು ಡಾ. ಸಿ. ಆರ್ ಚಂದ್ರಶೇಖರ್ ಅವರು 'ಭ್ರಮಾಧೀನ' ಕಥೆಯ ಮೂಲಕ ಎಳೆ ಎಳೆಯಾಗಿ ಚಿತ್ರಿಸಿದ್ದಾರೆ. ಮನುಷ್ಯನ ಆರೋಗ್ಯ ಪರಿಪೂರ್ಣವಾಗಿರಲು ಶುಚಿತ್ವ ಅತಿ ಅಗತ್ಯ. ಅಂತಹ ಶುಚಿತ್ವಕ್ಕೆ ಆಸ್ಟ್ರೇಲಿಯನ್ನರು ನೀಡುವ ಪ್ರಾಶಸ್ತ್ಯ ಮತ್ತು ಅಲ್ಲಿನ ಜನಜೀವನವನ್ನು ಡಾ.ಕೆ.ಕಮಲಾಕ್ಷರು ಬರೆದ 'ನಾ ಕಂಡ ಆಸ್ಟ್ರೇಲಿಯಾ' ಎಂಬ ಪ್ರವಾಸ ಕಥನದಿಂದ ತಿಳಿಯಬಹುದಾಗಿದೆ.

ಒಟ್ಟಿನಲ್ಲಿ ಈ ಘಟಕವು ಆರೋಗ್ಯಪೂರ್ಣ ಬದುಕು ನಮ್ಮದಾಗಬೇಕು ಎಂಬ ಆಶಯವನ್ನು ಮನದಟ್ಟಾಗಿಸುತ್ತದೆ. ಆಹಾರ ಕೆಟ್ಟರೆ ಆರೋಗ್ಯ ಕೆಡುತ್ತದೆ. ಆರೋಗ್ಯ ಕೆಟ್ಟರೆ ಜೀವನ ದುಸ್ತರ. ಹಣ ಎಷ್ಟೇ ಇದ್ದರೂ ಆರೋಗ್ಯಕ್ಕಿಂತ ಮಿಗಿಲಾದ ಸಂಪತ್ತು ಬೇರೊಂದಿಲ್ಲ ಎಂಬುದನ್ನು ಈ ಘಟಕವು ತಿಳಿಯಪಡಿಸುತ್ತದೆ.

# ಆಹಾರ ದಿಢೀರ್! ಆರೋಗ್ಯ ಢಮಾರ್! ಹುಷಾರ್!!!

ಇತ್ತೀಚೆಗೆ ಗೆಳೆಯರೊಬ್ಬರು ಅಮೆರಿಕದಿಂದ ಕುಟುಂಬ ಸಮೇತ ಬಂದಿದ್ದರು. ಅವರ ಮಕ್ಕಳು ಅಮೆರಿಕದಲ್ಲಿ ಹುಟ್ಟಿ ಬೆಳೆದವರು. ನಾವು ಅವರನ್ನು ಎಂ.ಟಿ.ಆರ್ ಗೆ ಕರೆದುಕೊಂಡು ಹೋಗಿ ರವೆ ಇಡ್ಲಿ ಕೊಡಿಸಿದಾಗ ಮಕ್ಕಳು ಮುಖ ಕಿವುಚಿಕೊಂಡರು. ನಿಮಗೆ ಯಾವ ತಿಂಡಿ ಇಷ್ಟವೆಂದು ಕೇಳಿದಾಗ ಅವರು ಒಕ್ಕೊರಳಿನಿಂದ ನಮಗೆ ಬರ್ಗರ್ ಇಷ್ಟ ಎಂದರು. ನಮ್ಮೊಂದಿಗೆ ಇದ್ದ ಹಿರಿಯರೊಬ್ಬರು ಮಕ್ಕಳಲ್ಲಿ ನೀವು 'ಸೂಪರ್ ಸೈಜ್ ಮೀ' ಎಂಬ ಚಲನಚಿತ್ರವನ್ನು ನೋಡಿದ್ದೀರಾ? ದಿಢೀರ್ ಆಹಾರವನ್ನು ಇಷ್ಟಪಡುವವರೆಲ್ಲರೂ ಅದನ್ನು ನೋಡಲೇಬೇಕು! ಎಂದರು. ನಾವು ಅದೇನು ಸಿನಿಮಾ ಅದರ ಬಗ್ಗೆ ಹೇಳಿ ಸಾರ್! ಎಂದು ಕೇಳಿದಾಗ ಹಿರಿಯರು 'ಸೂಪರ್ ಸೈಜ್ ಮೀ' ಬಗ್ಗೆ ತಿಳಿಸಿಕೊಟ್ಟರು.

'ಸೂಪರ್ ಸೈಜ್ ಮಿ' ಎಂಬ ಅರ್ಥಪೂರ್ಣ ಚಲನಚಿತ್ರವನ್ನು ಕೆಲವು ವರ್ಷಗಳ ಹಿಂದೆ ಮಾರ್ಗನ್ ಸ್ಪರ್ಲಾಕ್ ಎಂಬವರು ನಿರ್ಮಿಸಿದ್ದರು. ಈ ಚಿತ್ರ ಪ್ರಶಂಸೆಗಳನ್ನೂ ಪ್ರಶಸ್ತಿಗಳನ್ನೂ ಗಳಿಸಿತ್ತು. ನ್ಯೂಯಾರ್ಕಿನ ಯುವಕರಿಬ್ಬರು ತಮ್ಮ ಬೊಜ್ಜು ದೇಹಕ್ಕೆ ಮ್ಯಾಕ್ಡೊನಾಲ್ಡ್ ಉಪಾಹಾರ ಗೃಹಗಳ ಆಹಾರವೇ ಕಾರಣವೆಂದು ದಾವೆ ಹೂಡಿದ್ದ ಸುದ್ದಿಯನ್ನು ಕೇಳಿ ಮಾರ್ಗನ್ ಗೆ ಕುತೂಹಲ ಉಂಟಾಯಿತು. ಮಾರ್ಗನ್ ಇದರ ಬಗ್ಗೆ ಅಧ್ಯಯನ ನಡೆಸಿ ಅದನ್ನೇ ಚಲನಚಿತ್ರವನ್ನಾಗಿಸಬೇಕೆಂದು ತೀರ್ಮಾನಿಸಿದರು .

ಒಂದು ಸಂಜೆ ಅವರು ತೂಕ, ರಕ್ತದೊತ್ತಡ ಮುಂತಾದ ತಪಾಸಣೆಗಳನ್ನು ಮಾಡಿಸಿಕೊಂಡರು. ಅನಂತರ ಮುಂದಿನ ಮೂವತ್ತು ದಿನಗಳ ಕಾಲ ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟ ಎಲ್ಲವೂ ಮ್ಯಾಕ್ ಡೊನಾಲ್ಡ್ ನಲ್ಲಿ ಮಾಡಿದರು. ವಿಶೇಷವಾದ ತಿಂಡಿ ತಿನಿಸುಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ಎಲ್ಲರಿಗೂ ಸರಬರಾಜು ಮಾಡುವ, ತಿಂಡಿಪಟ್ಟಿಯಲ್ಲಿರುವ ಆಹಾರವನ್ನೇ ತೆಗೆದುಕೊಳ್ಳುತ್ತಿದ್ದರು. ಬೇಕೆನಿಸಿದಾಗ "ಸೂಪರ್ ಸೈಜ್ ಮೀ" ಎಂಬ ವಿಶೇಷ ಊಟವನ್ನು ತೆಗೆದುಕೊಳ್ಳುತ್ತಿದ್ದರು. ಒಂದು ತಿಂಗಳ ಕೊನೆಯಲ್ಲಿ ಅವರ ಆರೋಗ್ಯದಲ್ಲಿ ಆಶ್ಚರ್ಯ ಮತ್ತು ಆತಂಕ ಹುಟ್ಟಿಸುವ ಅಂಶಗಳು ಕಂಡು ಬಂದವು. ಮೊದಲವಾರದ ಅಂತ್ಯದಲ್ಲಿ ಒಂಬತ್ತು ಪೌಂಡ್ ಹೆಚ್ಚಾಗಿದ್ದ ಅವರ ತೂಕ ಒಂದು ತಿಂಗಳಲ್ಲಿ ಇಪ್ಪತ್ನಾಲ್ಕು ಪೌಂಡ್ ಹೆಚ್ಚಾಗಿತ್ತು. ಅವರ ಕೊಲೆಸ್ಟ್ರಾಲ್ ಶೇಕಡ ಮೂವತ್ತೂರರಷ್ಟು ಹೆಚ್ಚಾಗಿತ್ತು. ತಿಂಗಳ ಕೊನೆಯಲ್ಲಿ ವೈದ್ಯರು ಅವರ ಲಿವರ್ ಹಾನಿಯಾಗುವ ಮಟ್ಟವನ್ನು ಮುಟ್ಟಿದೆ ಎಂದು ಎಚ್ಚರಿಸಿದರು.

ಒಂದು ತಿಂಗಳ ಈ ಪ್ರಯೋಗವನ್ನು ಅವರು ನಿಲ್ಲಿಸಿದರು. ಆದರೆ ಅವರ ಆರೋಗ್ಯ ಮೊದಲಿನ ಮಟ್ಟಕ್ಕೆ ಬರಲು ಹದಿನಾಲ್ಕು ತಿಂಗಳುಗಳು ಬೇಕಾದವು.

'ಸೂಪರ್ ಸೈಜ್ ಮೀ' ಚಿತ್ರ ಅಮೆರಿಕದಾದ್ಯಂತ ಜನರ ಗಮನ ಸೆಳೆಯಿತು. ಜನರು ಆರೋಗ್ಯಕರವಾದದ್ದನ್ನು ತಿನ್ನೋದಕ್ಕಿಂತ ಹೆಚ್ಚಾಗಿ ಆಹಾರ ತಯಾರಕರು, ಟಿ.ವಿ., ಪತ್ರಿಕೆಗಳು ಮುಂತಾದ ಮಾಧ್ಯಮಗಳ ಮೂಲಕ ಮಾಡುತ್ತಿರುವ ರಂಗುರಂಗಿನ ಪ್ರಚಾರಕ್ಕೆ ಮರುಳಾಗುತ್ತಿದ್ದಾರೆ ಎಂಬುದನ್ನು ಅರಿತರು. ಈ ಚಿತ್ರ ಬಹಳ ಜನಪ್ರಿಯವಾಯಿತು. ಆದರೆ ಮ್ಯಾಕ್ ಡೊನಾಲ್ಡ್‌ನ ವ್ಯಾಪಾರವೇನೂ ಕಡಿಮೆಯಾಗಲಿಲ್ಲ. ಆದರೆ ಅವರು ಅತಿ ಹೆಚ್ಚು ಕ್ಯಾಲರಿಯ ತಿಂಡಿ ತಿನಿಸುಗಳಾದ 'ಸೂಪರ್ ಸೈಜ್ ಮೀ' ಮುಂತಾದವುಗಳ ತಯಾರಿಕೆಯನ್ನು ನಿಲ್ಲಿಸಿದರು. ಒಂದಷ್ಟು ಆರೋಗ್ಯಕರ ತಿಂಡಿ ತಿನಿಸುಗಳನ್ನು ಬಳಕೆಗೆ ತಂದರು. ದಿಢೀರ್ ತಿಂಡಿಗಳು ಬಾಯಿಗೆ ರುಚಿಕರವಾಗಿರುತ್ತವೆ. ಯಾವಾಗಲೋ ಒಮ್ಮೆ ಅವನ್ನು ಸವಿಯುವುದು ತಪ್ಪೇನು ಅಲ್ಲ. ಆದರೆ ಅದನ್ನೇ ನಮ್ಮ ದಿನನಿತ್ಯದ ಆಹಾರಗಳನ್ನಾಗಿ ಮಾಡಿಕೊಂಡರೆ ದಿಢೀರ್ ಆಹಾರದಿಂದ ಆರೋಗ್ಯ ಢಮಾರ್! ಆಗಬಹುದು. ಹುಷಾರ್ ! ಅಂತರ್ಜಾಲದಲ್ಲಿ ಸೂಪರ್ ಸೈಜ್ ಮೀ ಎಂದು ಒತ್ತಿದರೆ ಇನ್ನೂ ಹೆಚ್ಚಿನ ಮಾಹಿತಿ ಸಿಗಬಹುದು! ಎಂದರು ಹಿರಿಯರು.

- ಎಸ್. ಷಡಕ್ಷರಿ

- ಮೇಲಿನ ಲೇಖನವು ನೀಡುವ ಸಂದೇಶವೇನು? ನಿಮ್ಮ ಅನಿಸಿಕೆಗಳೊಂದಿಗೆ ಬರೆಯಿರಿ.

# ನೆಗಡಿ

- ತೀ. ನಂ. ಶ್ರೀಕಂಠಯ್ಯ



'ಒಂದು, ಎರಡು, ಮೂರು, ನಾಲ್ಕು, ಐದು...... ಇಲ್ಲ, ಇನ್ನೂ ಮುಗಿದಿಲ್ಲ!-ಆರು, ಏಳು, ಎಂಟು, ಒಂಬತ್ತು - ಅಬ್ಬಬ್ಬಾ! - ಹತ್ತು, ಇನ್ನೂ ಒಂದು!.... ಈಗ ಶಾಂತವಾಯಿತು!'

ಇದೇನು ಎಣಿಕೆ? ಮನೆಯಲ್ಲಿರುವ ಹುಡುಗರು ಹಿರಿಯರು ಎಲ್ಲರಿಗೂ ಈ ಬೆರಗೇಕೆ? ಹೊರಗಿನಿಂದ ಯಾರಾದರೂ ಸಂಸ್ಥಾನಾಧಿಪತಿಗಳು ಆಗಮಿಸಿದಾಗ ಆಗುವ ಗುಂಡುಗಳನ್ನು ಹೀಗೆ ಲೆಕ್ಕ ಹಾಕುತ್ತಿದ್ದಾರೆಯೇ?

ಅಲ್ಲ, ಅಲ್ಲ ನನಗೆ ನೆಗಡಿ ಹಿಡಿದಾಗ ಬಾಂಕರಿಸುವ ಸೀನುಗಳ ಲೆಕ್ಕ ಇದು. ಹೊರಗಿನ ಪ್ರಭುಗಳ ಆಗಮನ ನಿರ್ಗಮನ ಕಾಲಗಳಲ್ಲಿ ಮಾತ್ರ ಗುಂಡಿನ ಮರ್ಯಾದೆ ನಡೆಯುವುದು ಸಂಪ್ರದಾಯ. ಆದರೆ ಈ ನನ್ನ ಪಟ್ಟದ ದೊರೆಗೆ ಅಷ್ಟರಲ್ಲೇ ತೃಪ್ತಿಯಿಲ್ಲ. ಇಷ್ಟೇ ಗುಂಡುಗಳೆಂಬ ಕ್ಲುಪ್ತವೂ ಇಲ್ಲ. ಸ್ವೇಚ್ಛೆಯಾಗಿ ಸ್ವತಂತ್ರವಾಗಿ ಎಣಿಕೆಯನ್ನು ಅಣಕಿಸಿ ಸೀನುಗಳು ಹೊರಬಿದ್ದು ಮನೆತುಂಬ ಪ್ರತಿಧ್ವನಿಸುತ್ತವೆ, ನಾಭಿಯಿಂದ ನೆತ್ತಿಯವರೆಗೆ ಅಂಗಾಂಗಗಳನ್ನು ಅಲ್ಲಾಡಿಸುತ್ತವೆ. ಡೈನಮೈಟುಗಳು ಸಾಲಾಗಿ ಸಿಡಿದಾಗ ಬಂಡೆಗಳು ಬಿರಿದು ಮಣ್ಣೆಲ್ಲ ಎರಚಾಡಿ ಉತ್ಕಂಪಿಸುವ ಭೂಭಾಗದಂತೆ ನಾನಿದ್ದರೆ, ನಮ್ಮ ಮನೆ ಮಂದಿಯೆಲ್ಲರೂ ಸೀನಿನ ತುಂತುರುಗಳು ಎಟುಕದಷ್ಟು ದೂರದಲ್ಲಿ ನಿಂತು ಸ್ವಲ್ಪವೂ ಅಂಜಿಕೆಯಿಲ್ಲದೆ ಉತ್ಸಾಹದಿಂದ ಸೀನುಗಳನ್ನು ಎಣಿಸಲು ತೊಡಗುತ್ತಾರೆ. ಈ ಸಲ ಇಷ್ಟೇ ಬರುತ್ತವೆ ಎಂದು ನನಗೆ ತಿಳಿಯದಂತೆ ಒಬ್ಬರೊಡನೊಬ್ಬರು ಪಂತಗಳನ್ನು ಕೂಡ ಕಟ್ಟುತ್ತಾರೋ ಏನೋ. ನನಗೆ ಮೈ ಕೈ ನೋವೆಂದರೆ ಆತಂಕಪಡುವ ಕೈಹಿಡಿದಾಕೆ ಕೂಡ ಈ ಪ್ರಸಂಗದಲ್ಲಿ ಮಿಕ್ಕವರ ಜೊತೆಗೇ ಸೇರಿಬಿಡುತ್ತಾಳೆ. ರೇಗಿ ಪ್ರಯೋಜನವಿಲ್ಲ. ಗಂಟಲು ಚೆನ್ನಾಗಿ ಕಟ್ಟಿಕೊಂಡಿರುವುದರಿಂದ ಗಟ್ಟಿಯಾಗಿ ಆರ್ಭಟಿಸಲು ಕೂಡ ಆಗುವುದಿಲ್ಲ. ಹೋಯಿತು, ಈ ನೆಗಡಿ ಸೀನುಗಳಿಂದ ದರ್ಪಹೋಯಿತು, ಗೌರವ ಹೋಯಿತು!

ಇದೊಂದು ದೊಡ್ಡ ಕೊರಗು ನನಗೆ. ನೆಗಡಿ ಎಂಥ ಪ್ರಬಲವಾದ ವ್ಯಾಧಿ! ಇದು ಹಿಡಿದರೆ ಸಾಕು; ಮೂಗು ಆನೆಯ ಸೊಂಡಿಲಿನಷ್ಟು ಭಾರವಾಗುತ್ತದೆ. ಕಣ್ಣು ಉರಿಗೆಂಡವಾಗಿ, ಅಂಗುಳು ಹುರಿಹೆಂಚಾಗಿ, ಗಂಟಲು ಶ್ಲೇಷ್ಮದ ಕೆಸರಿನಲ್ಲಿ ಅಡಗಿಹೋಗುತ್ತದೆ. ಎದೆಯಂತೂ ಉಕ್ಕಿನ ಯಂತ್ರದಲ್ಲಿ ಅದುಮಿದಂತಾಗುತ್ತದೆ. ನೆತ್ತಿ ಕತ್ತಿನ ಮೇಲೆ ನಿಂತಿರುವಂತೆಯೇ ತೋರುವುದಿಲ್ಲ. ದೇಹದ ಊರ್ಧ್ವಭಾಗದಲ್ಲೆಲ್ಲಾ ಈ ರೋಗದ ಅಸಂಖ್ಯಾತ ಕ್ರಿಮಿಸೇನೆ,

ಬೀಡುಬಿಟ್ಟಿರುತ್ತದೆ. ಹೀಗಿದ್ದರೂ ನೆಗಡಿ ಬಂದವನ ವಿಷಯದಲ್ಲಿ ಯಾರಿಗಾದರೂ ಸಹಾನುಭೂತಿಯುಂಟೆ ಒಬ್ಬನಿಗೆ ಸ್ವಲ್ಪ ಜ್ವರ ಬಂದರೆ ಸಾಕು; ಬೆಚ್ಚಗೆ ಹಾಸಿಗೆ ಹಾಸಿ ಹೊದಿಸಿ, ಬಾಯಿಗೆ ಸವಿಯಾಗುವಂತೆ ಹಾಲು ಗಂಜಿಗಳನ್ನು ಹವಣಿಸಿ, ಔಷಧಿಗಾಗಿ ಮನೆಯವರೆಲ್ಲ ಪರದಾಡುವವರೇ, ಸಾಧಾರಣವಾಗಿ ಮನೆಯ ಹತ್ತಿರ ಸುಳಿಯದ ಮಿತ್ರರೆಲ್ಲ ಹುಡುಕಿಕೊಂಡು ಬಂದು ಹತ್ತಿರ ಕುಳಿತು ಈ ಮಾತು ಆ ಮಾತು ಆಡಿ ಬೇಸರ ಕಳೆಯುವವರೇ. ಆದರೆ ಜ್ವರಕ್ಕಿಂತ ಹತ್ತುಪಾಲು ಬಿರುಸಾಗಿ ನೆಗಡಿ ದೇಹವನ್ನು ಕಿತ್ತು ತಿನ್ನುತ್ತಿದ್ದರೂ ನಿಮ್ಮ ವಿಷಯದಲ್ಲಿಯಾರಿಗೂ ಲಕ್ಷ್ಯವಿಲ್ಲ. 'ಒಂದು ಕಡ್ಡಿ ಸೌದೆಯೂ ಇಲ್ಲ. ಅಂದರೆ, ಡಿಪೋಕ್ಕೆ ಹೋಗಿ ವಿಚಾರಿಸಿಕೊಂಡು ಬರಬಾರದೆ?' ಎಂದು ನಿಮ್ಮ ಅರ್ಧಾಂಗಿಯೇ ಆಜ್ಞಾಪಿಸುತ್ತಾಳೆ. ಮೊದಲೇ ನೆಗಡಿ, ತಲೆಭಾರ, ಮೇಲೆ ಸೋನೆ ಬೇರೆ ಬೀಳುತ್ತಿದೆಯಲ್ಲ ಎಂದು ನೀವು ಒಂದೆರಡು ಸಲ ಕೆಮ್ಮಿ ಗಗ್ಗರದನಿಯಿಂದ ಹೇಳಿದರೆ, 'ಅಯ್ಯೋ, ನಿಮ್ಮ ನೆಗಡಿ ತಪ್ಪಿದ ದಿನ ಯಾವುದು? ತಲೆಯ ಮೇಲೆ ಒಂದು ಟವಲು ಹಾಕಿಕೊಂಡು ಹೋಗಿಬನ್ನಿ; ಬೇಕಾದರೆ ಶಾಲನ್ನೇ ಹೊದ್ದುಕೊಳ್ಳಿ. ಆಮೇಲೆ ಕಷಾಯ ಕಾಸಿಕೊಡುತ್ತೇನೆ; ಎಲ್ಲಾ ಸರಿ ಹೋಗುತ್ತದೆ' ಎಂದು ತಾತ್ಸಾರವಾಗಿ ಅನ್ನುತ್ತಾಳೆ. ಅಲ್ಲಿಗೇ ನಿಲ್ಲಿಸದೆ, 'ಇಷ್ಟಕ್ಕೂ ನಿಮ್ಮದೇ ಅಪಥ್ಯ. ತಿಳಿದೂ ತಿಳಿದೂ ಕ್ಷೌರ ಮಾಡಿಕೊಂಡು ನೆತ್ತಿಗೆ ಸ್ನಾನ ಮಾಡಿದಿರ. ಒಂದು ದಿನ ಮುಖ ಕೆತ್ತಿಕೊಳ್ಳದಿದ್ದರೆ ಏನು ಉಳಿದು ಹೋಗುತ್ತಿತ್ತು? ಮಜ್ಜಿಗೆ ಹಾಕಿಸಿಕೊಳ್ಳಬೇಡಿ ಅಂತ ನಿನ್ನೆಯ ರಾತ್ರಿ ನಾನು ಎಷ್ಟು ಒರಲಿಕೊಂಡರೂ ಕೇಳಿದಿರಾ? ಎಳೆಯ ಮಕ್ಕಳ ಹಾಗೆ ಹಠ ಮಾಡಿದಿರಿ. ಈಗ ಅನುಭವಿಸಿ' ಎಂದು ಹಂಗಿಸಿ ಅಟ್ಟಿಬಿಡುತ್ತಾಳೆ. ಆಕೆಗೆ ಯಾವಾಗಲೂ ನನ್ನ ಮಜ್ಜಿಗೆ ಮೇಲೆಯೇ ಕಣ್ಣು. ಅನ್ನಕ್ಕೆ ಹಾಲು ಕಲಸಿಕೊಂಡರೆ ಒಂದು ತುತ್ತೂ ನನ್ನ ಗಂಟಲಲ್ಲಿ ಇಳಿಯುವುದಿಲ್ಲವೆಂದು ಆಕೆ ಬಲ್ಲಳು. ಅದಕ್ಕೇ ನೆಗಡಿಯ ಸುಳಿವನ್ನು ಕಂಡಕೂಡಲೆ ಎಲ್ಲಕ್ಕೂ ಮುಂದಾಗಿ ಮಜ್ಜಿಗೆಯನ್ನು ತಪ್ಪಿಸಿಬಿಡುತ್ತಾಳೆ. ಹಾಲನ್ನವನ್ನು ಔಷಧಿಯಂತೆ ಊಡಿಸುತ್ತಾಳೆ. ಇಷ್ಟೇ ಅಲ್ಲ. ಉರಿ ಬೇಸಗೆಯಲ್ಲಿ ಕೂಡ, ಒಂದು ಲೋಟ ನೀರುಮಜ್ಜಿಗೆಯನ್ನೋ ನಿಂಬೆಹಣ್ಣಿನ ಪಾನಕವನ್ನೋ ಮಾಡಿಕೊಡೆಂದು ನಾನು ಕೇಳಿದರೆ, 'ಸಾಕು ಸುಮ್ಮನಿರಿ. ಹಾಗೆಲ್ಲ ಚಪಲಪಡಬಾರದು. ನೆಗಡಿ ಬಂದುಬಿಟ್ಟೀತು!' ಎಂದು ನಸುನಗುತ್ತಾ ನಿಷೇಧಿಸಿಬಿಡುತ್ತಾಳೆ.

ನೆಗಡಿಗೆ ಇಂಥ ಕಾಲ, ಇಷ್ಟು ಸಲ ಎಂಬ ಕಟ್ಟುಪಾಡು ಯಾವುದೂ ಇದ್ದಂತೆ ನನ್ನ ಅನುಭವಕ್ಕೆ ಬಂದಿಲ್ಲ. ಚಳಿಗಾಲದಲ್ಲಿ, ಅದರಲ್ಲೂ ತುಂತುರು ಹನಿ ಬೀಳುವಾಗ, ಇದರ ಉರುಬು ಹೆಚ್ಚು ಎಂದು ಹೇಳುವವರುಂಟು.. ನವಂಬರ್ ತಿಂಗಳ ಮೊದಲನೆಯ ವಾರದಲ್ಲಿ ನೆಗಡಿ ಭೇಟಿ ಕೊಡದಿದ್ದರೆ, ಋತುಧರ್ಮವೇ ಬದಲಾದಂತೆ ಆತಂಕಪಡುವವರೂ ಉಂಟು. ಆದರೆ, ನನ್ನ ನೆಗಡಿ ಹೀಗೆ ತನ್ನ ಸವಾರಿಗೆ ಪರಿಮಿತಿಗಳನ್ನು ಕಲ್ಪಿಸಿಕೊಂಡಿಲ್ಲ. ಆದ ಕಾರಣವೇ ಒಮ್ಮೊಮ್ಮೆ ನನ್ನ ಪ್ರಶಂಸೆಯನ್ನು ಕೂಡ ಗಳಿಸಿದೆ.

ಹೀಗೆ ನನ್ನ ನೆಗಡಿ ಸರ್ವತಂತ್ರ ಸ್ವತಂತ್ರವಾದರೂ ಅದಕ್ಕೆ ಸಮಯಜ್ಞಾನವಿಲ್ಲವೆಂದೂ ನಾನು ಹೇಳಲಾರೆ. ಏಕೆಂದರೆ ನಾನು ಎಲ್ಲಾದರೂ ಭಾಷಣ ಮಾಡುವಂತೆ ಏರ್ಪಾಡಾದರೆ, ಆಹ್ವಾನಪತ್ರಿಕೆಯನ್ನು ನೋಡಿಕೊಂಡು ಬಂದಂತೆ ಒಪ್ಪತ್ತು ಮುಂಚೆಯೇ ಬರುತ್ತದೆ. ತಂದೆ ಎಲ್ಲಿಗಾದರೂ ಹೊರಟಾಗ ಮಗು ಚಂಡಿಹಿಡಿದು ಹೆಗಲೇರುವಂತೆ, ಇದೂ ನನ್ನ ಮೂಗನ್ನು ಸೇರಿ ಜೊತೆಗೆ ಹೊರಡುತ್ತದೆ. ಒಂದು ಸಲವಂತೂ ಇದರ ಜಾಗರೂಕತೆ ನನ್ನನ್ನು ದಿಗ್ಭ್ರಮೆಗೊಳಿಸಿತು. ಒಬ್ಬನ ಜೀವಮಾನದಲ್ಲಿ ಒಂದೆರಡು ಬಾರಿ ಮಾತ್ರ ಒದಗಬಹುದಾದ ವಿಶೇಷ ಸಂದರ್ಭ ಅದು. ವ್ಯವಸ್ಥಾಪಕರು ಯಾವ ಕಾರಣದಿಂದಲೋ ನನ್ನಲ್ಲಿ ಅಕ್ಕರೆ ತೋರಿಸಿ, ಭಾಷಣ ಮಾಡಬೇಕೆಂದು ಕೋರಿದ್ದರು. ನಾನೂ ಔತ್ಸುಕ್ಯದಿಂದಲೇ ಒಪ್ಪಿಕೊಂಡಿದ್ದೆ. ಆ ಮಹಾಸಮಾರಂಭದಲ್ಲಿ ನನ್ನ ಅಲ್ಪವಾದ ವಾಗ್ವಿಭವವನ್ನು ಕೈಯಲ್ಲಾದಷ್ಟು ಆಕರ್ಷಕವಾಗಿ ಪ್ರದರ್ಶಿಸಬೇಕೆಂದು ಸಂಕಲ್ಪಿಸಿದ್ದೆ. ಆದರೆ ಮುಹೂರ್ತಕ್ಕೆ ಸರಿಯಾಗಿ ಒಂದು ದಿನ ಮುಂಚೆ ನೆಗಡಿ ನನ್ನ ಮೂಗನ್ನು ತಟ್ಟಿತು. ಗಂಟಲನ್ನು ಕಟ್ಟಿತು. ಭಾಷಣದ ದಿನ ಬೆಳಗ್ಗೆ ಧ್ವನಿ ಕೂತುಹೋಗಿತ್ತು ಎನ್ನುವುದಕ್ಕಿಂತ ಹೂತುಹೋಗಿತ್ತು ಎಂದರೆ ಸತ್ಯಕ್ಕೆ ಹತ್ತಿರವಾಗಬಹುದು! ಕಲ್ಲು ಬಸವನ ಬಾಯ ಧಾರೆಯಂತೆ ಮೂಗಿನಿಂದ ನೀರು ಸಂತತವಾಗಿ ಒಸರುತ್ತಿದೆ; ನನ್ನ ಕರವಸ್ತ್ರಗಳ ಸರಬರಾಯಿ ಮುಗಿಯಿತೇ ಹೊರತು ಅದರ ಹೊನಲು ತಗ್ಗಲಿಲ್ಲ. ಏನು ಮಾಡುವುದು? ನೆಗಡಿಗೆ ರಾಮಬಾಣ ಯಾವುದೂ ಇಲ್ಲವೆಂದು ನಾನು ಚೆನ್ನಾಗಿ ಬಲ್ಲೆ. ಯಾವ ತಾರಕನನ್ನೂ ಶರಣು ಕಾಣದೆ, ತನ್ನ ಕರ್ಮವನ್ನು ತಾನು ಅನುಭವಿಸಿಯೇ ಸವೆಯಿಸಬೇಕಾದಂತೆ, ಕನಿಷ್ಠಪಕ್ಷ ಮೂರುದಿನವಾದರೂ ಅದರ ಬಿರುಬೇಗೆಯಲ್ಲಿ ಪರಿತಪಿಸಲೇಬೇಕೆಂದೂ ನಾನು ಬಲ್ಲೆ. ಆದರೂ ಆಪತ್ಕಾಲದಲ್ಲಿ ಕಂಡ ಕಂಡ ಶಿಲೆಗೆಲ್ಲ ಕೈಮುಗಿಯುವಂತೆ, ನಾನು ಕೇಳಿ ಕೇಳಿದ ಚಿಕಿತ್ಸೆಗಳನ್ನೆಲ್ಲಾ ನಡೆಸಿದೆ. ನೆಗಡಿ ಅಜೀರ್ಣದಿಂದ ಪ್ರಬಲಿಸುತ್ತದೆ, ಇದಕ್ಕೆ ಉಪವಾಸ ಒಳ್ಳೆಯದು ಎಂದು ಯಾರೋ ಹೇಳಿದರು. ಪ್ರಾಚೀನ ಕಾಲದಲ್ಲಿ ಸಮರದ ಹಿಂದಿನ ರಾತ್ರಿ ಯುದ್ಧವೀರರು, ದರ್ಭಶಯ್ಯೆಯಲ್ಲಿ ನಿರಾಹಾರವ್ರತ ಹಿಡಿದು ಮಲಗುತ್ತಿದ್ದಂತೆ ನಾನೂ ಬರಿಯ ಹೊಟ್ಟೆಯಲ್ಲಿ ಹೊರಳಾಡಿದೆ. ಆದರೆ ಯಾವ ಗುಣವೂ ಕಾಣಲಿಲ್ಲ. ಒಣ ಅವಲಕ್ಕಿಯನ್ನು ತಿಂದರೆ ನೆಗಡಿಯನ್ನು ಹೀರುತ್ತದೆ ಎಂದು ಮಾರನೆಯ ಬೆಳಗ್ಗೆ ಬೇರೊಬ್ಬರು ಸಲಹೆ ಕೊಟ್ಟರು. ಹಾಗೇ ಆಗಲೆಂದು ಬಹುಶಃ ಕಳೆದಿರುಳಿನ ಉಪವಾಸದ ಪ್ರೇರಣೆಯೂ ಕೊಂಚ ಸೇರಿ - ಒಂದು ಹಿಡಿ ಅವಲಕ್ಕಿಯನ್ನು ಈ ದುರ್ಭಿಕ್ಷ ಕಾಲದಲ್ಲೂ ಹೇಗೋ ಸಂಗ್ರಹಿಸಿ, ಪರಿಕರವೇನೂ ಇಲ್ಲದೆಯೆ ಅಗಿದು ನೋಡಿದೆ. ಅತ್ತ ವೈದ್ಯರ ಬಳಿ ಹೋಗಿ ಬಾಯನ್ನು ಬಳ್ಳದಗಲಕ್ಕೆ ತೆರೆದು ನುಂಗಲಾರದ ಉಗುಳಬಾರದ ದ್ರಾವಕವನ್ನು ಗಂಟಲೊಳಕ್ಕೆ ಲೇಪನ ಮಾಡಿಸಿಕೊಂಡೆ; ಬೂದಿಬಣ್ಣದ ಕಹಿ ಒಗಚಿನ ಘಾಟುನೀರನ್ನು ತೀರ್ಥದಂತೆ ಪ್ರಾಶನ ಮಾಡಿದೆ. ಮನೆಗೆ ಬಂದು ನಿಗಿನಿಗಿ ಉರಿಯುವ ಕೆಂಡದ ಮುಂದೆ ಕುಳಿತು ಕಂಠನಾದ ಹದವಾಗಲೆಂದು ಮನಸ್ಸಿನಲ್ಲೇ ಹರಸಿಕೊಂಡು, ಮುಖವನ್ನು ತಮಟೆಯಂತೆ ಕೆಂಚಗೆ ಕಾಯಿಸಿದೆ. ಮತ್ತೆ ಅದೇ ಕೆಂಡಕ್ಕೆ ಅರಿಶಿನದ ಪುಡಿಯನ್ನೂ ಉದುರಿಸಿ ರಾಗಿಯ ಹಿಟ್ಟನ್ನು ಬೆರೆಸಬೇಕಾಗಿತ್ತು; ಆದರೆ ಚಿನ್ನ ಕೊಟ್ಟರೂ

ಅದು ಸಿಕ್ಕುವಂತಿರಲಿಲ್ಲ! ತಲೆಗೆ ಕಂಬಳಿ ಕವಿಚಿಕೊಂಡು, ಮೇಲಕ್ಕೆ ಅಡರುವ ಧೂಮಸ್ತೋಮವನ್ನು ಮೂಗು ಬಾಯಿಗಳು ಮುಷ್ಕರ ಹಿಡಿಯುವ ತನಕ ಹೀರಿ ಹೀರಿ ಕ್ರಿಮಿಗಳ ಉಚ್ಚಾಟನೆಯಾಗಲೆಂದು ಮಂತ್ರ ಜಪಿಸಿದೆ. ಕಡೆಗೆ ಒಬ್ಬ ಹಿತಶತ್ರುವಿನ ಬೋಧನೆಗೆ ಕಿವಿಗೊಟ್ಟು ಒಂದೆರಡು ಚಿಟಿಕೆ ನಸ್ಯವನ್ನೂ ಏರಿಸಿದೆ. ಮೊದಲಿಗಿಂತ ನಾಲ್ಕು ಪಾಲು ಹೆಚ್ಚಾಗಿ ಸೀನು ಬಂದಿತು; ಮೂಗು ಇನ್ನಷ್ಟು ಹೊಲಸಾಯಿತು!

ಇಷ್ಟೆಲ್ಲ ಸಾಧನೆ ಮಾಡಿದರೂ ಫಲ ಮಾತ್ರ ಗೋಚರವಾಗಲಿಲ್ಲ. ಆದರೂ ನಾನು ಎದೆಗುಂದದೆ, ಆ ದಿನ ಸಂಜೆ ಅಂಗಿಗಳ ಮೇಲೆ ಅಂಗಿಗಳನ್ನು ತೊಟ್ಟು ಕೊರಳಿಗೆ ಉಣ್ಣೆಯ ಪಟ್ಟಿಯನ್ನು ಅಳವಡಿಸಿ, ನೆತ್ತಿಯ ಮೇಲೆ ಪೇಟವನ್ನು ಒತ್ತಿ ಧರಿಸಿ, ಗಂಟಲ ಗುಳಿಗೆಗಳನ್ನು ಚಪ್ಪರಿಸುತ್ತಾ ವೇದಿಕೆಯನ್ನೇರಿ ಮಹಾಸಭೆಯನ್ನು ಎದುರಿಸಿ ನಿಂತೆ. ಮುಂದುಗಡೆಯೇ ಧ್ವನಿವರ್ಧಕ ಮಿನುಗುತ್ತಾ ಭರವಸೆ ಕೊಡುತ್ತಿತ್ತು. ಬಾಯಿ ತೆರೆದೆ; ನಾಲಗೆಯಾಡಿಸಿದೆ. ಆದರೆ ಧ್ವನಿ ಹೊರಡಲೇ ಇಲ್ಲ. ಚಲನಚಿತ್ರ ಮಂದಿರದಲ್ಲಿ ಒಮ್ಮೊಮ್ಮೆ ಧ್ವನಿಭಾಗ ಒಂದೆರಡು ಕ್ಷಣ ಕಡಿದುಹೋಗಿ ಪಾತ್ರಗಳ ಮೂಗುಸನ್ನೇ ಮಾತ್ರ ಕಾಣಿಸಿದಾಗಿನ ಅನುಭವ ನನ್ನ ಶ್ರೋತೃಗಳಿಗೆ ಲಭಿಸಿರಬೇಕು. ಯಂತ್ರವೇ ಕೆಲಸ ಮಾಡುತ್ತಿಲ್ಲವೇನೋ ಎಂದು ವ್ಯವಸ್ಥಾಪಕರು ಬೆದರಿ ಧಾವಿಸಿ ಬಂದರು. ಅಷ್ಟು ಹೊತ್ತಿಗೆ ನನ್ನ ಧ್ವನಿ ನೆಗಡಿಯ ಹಿಡಿತದಿಂದ ತುಸು ಬಿಡಿಸಿಕೊಂಡು ಗುರುತೇ ತಿಳಿಯದಷ್ಟು ಬಡವಾಗಿ ಜಡವಾಗಿ ಗುಹೆಯೊಳಗಿನ ನರಳಿಕೆಯಂತೆ ಹೊರಕ್ಕೆ ಬಂದಿತ್ತು. ಅದನ್ನು ಕೇಳಿ ನನಗೆ ಜಿಗುಪ್ಸೆಯಾಯಿತು. ಆಲೋಚಿಸಿದ್ದ ಉತ್ಕೃಷ್ಟ ಭಾವಗಳೆಲ್ಲ ಎಲ್ಲಿಗೋ ಪಲಾಯನ ಮಾಡಿದ್ದವು. ಜಲಪಾತದಂತೆ ಧುಮುಕಬೇಕಾಗಿದ್ದ ನನ್ನ ವಾಗ್ವಾಹಿನಿ ಬೇಸಗೆ ದಿನದ ನಲ್ಲಿಯ ನೀರಿನಂತೆ ತೊಟ ತೊಟ ಎಂದು ಕ್ಷೀಣವಾಗಿ ಜಿನುಗುತ್ತಿತ್ತು. ಹಾಗೂ ಹೀಗೂ ಮೂರು ನಾಲ್ಕು ನಿಮಿಷ ಮೊಂಡುತನದಿಂದ ಮಾತಾಡಿದೆ; ಕಡೆಗೆ ಸೋಲನ್ನೊಪ್ಪಿ ಮುಕ್ತಾಯಕ್ಕೆ ಸಂದುಬಿಟ್ಟೆ. ಅಲ್ಲಿಂದೀಚೆಗೆ ಬುದ್ಧಿ ಕಲಿತಿದ್ದೇನೆ. ಭಾಷಣ ಮಾಡಲು ಯಾರಾದರೂ ಕರೆದಾಗ, 'ನನ್ನ ನೆಗಡಿ ಒಪ್ಪಿಗೆ ಕೊಟ್ಟರೆ-' ಎಂದು ಒಂದು ನಿಬಂಧನೆಯನ್ನು ಸೇರಿಸಲು ಮರೆಯುವುದಿಲ್ಲ.

ಆ ಅಶರಣತೆಗೆ ಪರಿಹಾರವೆ ಇಲ್ಲವೇ? ವೈದ್ಯವಿದ್ಯೆ ಇಷ್ಟು ಮುಂದುವರಿದಿರುವಾಗ, ನಿನ್ನೆ ಮೊನ್ನೆಯ ತನಕ ಹೆಸರೇ ಕೇಳದಿದ್ದ ಅಪೂರ್ವ ರೋಗಗಳಿಗೆಲ್ಲ ಚಿಕಿತ್ಸಾ ಕ್ರಮಗಳು ಏರ್ಪಟ್ಟಿರುವಾಗ, ಜೀವಿಗಳ ಜನ್ಮಶತ್ರುವಾದ ಈ ನೆಗಡಿಗೇಕೆ ಇನ್ನೂ ಮದ್ದು ಸಿದ್ಧವಾಗಿಲ್ಲ? ಎಲ್ಲಕ್ಕೂ ಸೂಜಿಮದ್ದು ಚುಚ್ಚುವಂತೆ ಇದಕ್ಕೂ ಚುಚ್ಚಿ ಚರ್ಮದ ರಂಧ್ರಗಳನ್ನು ಹೆಚ್ಚಿಸುವ ವಿಧಾನವೂ ಅಲ್ಲಲ್ಲಿ ಬಳಕೆಗೆ ಬಂದಿದೆ. ಆದರೇನು? 'ನೆಗಡಿಗೆ ಚಿಕಿತ್ಸೆ ಮಾಡಿದರೆ ಒಂದು ವಾರದಲ್ಲಿ ಗುಣವಾಗುತ್ತದೆ; ಹಾಗೆಯೇ ಬಿಟ್ಟರೆ ಏಳು ದಿನ ಬೇಕಾಗುತ್ತದೆ' ಎನ್ನುವುದೇ ಇನ್ನೂ ಕೊನೆಯ ಮಾತಾಗಿ ಉಳಿದಿದೆ. ನೆಗಡಿ ಬಾರದಂತೆ ತಡೆಗಟ್ಟುವ ಮುಂಜಾಗರೂಕತೆಯ ಕ್ರಮವಂತೂ ಕನಸಿನ ಗಂಟೇ ಸರಿ.

ಕೈಲಾಸಶಿಖರದಲ್ಲೇನೋ ಪರಶಿವನು ಗಂಗಾಧರನೂ ಚಂದ್ರಶೇಖರನೂ ಆಗಿದ್ದರೂ ಫಾಲನೇತ್ರದ ಅಗ್ಗಿಷ್ಟಿಕೆಯನ್ನು ಸಂತತವೂ ಉರಿಸುತ್ತಾ ಶೀತಬಾಧೆಯನ್ನು ದೂರವಿರಿಸಿರಬಹುದು. ಆದರೆ ಮಾನವನ ದೇಹ ರಚನೆಯಲ್ಲಿ ಈ ವ್ಯಾಧಿಗೆ ಭದ್ರವಾದ ನೆಲಗಟ್ಟು ದೊರೆತಿದೆ.

ಗಾದೆಯ ಮಾತು ದಿಟ : 'ಮೂಗಿರುವ ತನಕ ನೆಗಡಿ ತಪ್ಪುವ ಹಾಗಿಲ್ಲ!'

## ಲೇಖಕರ ಪರಿಚಯ



ತೀ.ನಂ.ಶ್ರೀ ಎಂದೇ ಪರಿಚಿತರಾಗಿರುವ ತೀರ್ಥಪುರ ನಂಜುಂಡಯ್ಯ ಶ್ರೀಕಂಠಯ್ಯ ಅವರು ೧೯೦೬ ನವಂಬರ್ ೨೬ ರಂದು ಚಿಕ್ಕನಾಯಕನಹಳ್ಳಿಯ ಹತ್ತಿರದ ತೀರ್ಥಪುರದಲ್ಲಿ ಜನಿಸಿದರು. ಮೈಸೂರಿನಲ್ಲಿ ಪದವಿ ಪಡೆದಿದ್ದ ಇವರು ಕರ್ನಾಟಕದ ನಾನಾ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ದುಡಿದಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾಗಿಯೂ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸಿದ್ದಾರೆ.

ತೀ.ನಂ.ಶ್ರೀ.ಯವರ ಪ್ರಮುಖ ಕೃತಿಗಳೆಂದರೆ ಒಲುಮೆ, ಹೆಣ್ಣುಮಕ್ಕಳ ಪದಗಳು, ಬಿಡಿಮುತ್ತು, ಪಂಪ, ನಂಬಿಯಣ್ಣ ನ ರಗಳೆ, ರನ್ನನ ಗದಾಯುದ್ಧ ಸಂಗ್ರಹ, ಭಾರತೀಯ ಕಾವ್ಯ ಮೀಮಾಂಸೆ, ಕನ್ನಡ ಮಾಧ್ಯಮ ವ್ಯಾಕರಣ, ರಾಕ್ಷಸನ ಮುದ್ರಿಕೆ, ನಂಟರು ಮುಂತಾದವು. ಅವರು ಬರೆದಿರುವ ಭಾರತೀಯ ಕಾವ್ಯ ಮೀಮಾಂಸೆ ಕೃತಿಗೆ ಪಂಪ ಪ್ರಶಸ್ತಿ ದೊರೆತಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಮಿತಿಯ ಸಂಪಾದಕರಾಗಿಯೂ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ೧೯೬೬ ಸಪ್ಟೆಂಬರ್ ೭ರಂದು ಇಹಲೋಕ ತ್ಯಜಿಸಿದರು.

ತೀ.ನಂ.ಶ್ರೀ.ಯವರ 'ನೆಗಡಿ' ಪಾಠವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಸಂಪಾದಿಸಿದ ಹೊಸಗನ್ನಡ ಪ್ರಬಂಧ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ವಿಶದೀಕರಣ

**ದರ್ಭಶಯ್ಯೆ :** ದರ್ಭೆ ಎಂದರೆ ಧಾರ್ಮಿಕ ವಿಧಿ ವಿಧಾನಗಳಲ್ಲಿ ಬಳಸುವ ಒಂದು ಜಾತಿಯ ಹುಲ್ಲು. ದರ್ಭೆಯನ್ನು ಹರಡಿ ಅದರ ಮೇಲೆ ಮಲಗುವುದನ್ನು ದರ್ಭಶಯ್ಯೆ ಎನ್ನುವರು.

**ಡೈನಾಮೈಟ್ :** ನೈಟ್ರೋಗ್ಲಿಸರೀನ್, ಪುಡಿ ಮಾಡಿದ ಚಿಪ್ಪುಗಳು, ಜೇಡಿ ಮಣ್ಣಿನಂತಹ ಸ್ಥಿರೀಕಾರಕಗಳಿಂದ ತಯಾರಿಸಿದ ಸ್ಫೋಟಕ ವಸ್ತು.

### ಉತ್ತರಿಸಿರಿ

ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

1. ನೆಗಡಿ ಎಂಬ ಪ್ರಬಲ ವ್ಯಾಧಿ ಹಿಡಿದರೆ ಏನಾಗುತ್ತದೆ?
2. ನೆಗಡಿಯು ಲೇಖಕರಿಂದ ಪ್ರಶಂಸೆ ಗಳಿಸಲು ಕಾರಣವೇನು?
3. ನೆಗಡಿಗೆ ಸಮಯಜ್ಞಾನವಿಲ್ಲವೆಂದೂ ನಾನು ಹೇಳಲಾರೆ - ಲೇಖಕರ ಈ ಹೇಳಿಕೆಗೆ ಕಾರಣವೇನು?
4. ಲೇಖಕರು ಭಾಷಣ ಮಾಡುವಾಗ ಎದುರಿಸಿದ ಸಮಸ್ಯೆಗಳೇನು?
5. ವೈದ್ಯವಿದ್ಯೆ ಇಷ್ಟು ಮುಂದುವರಿದರೂ ನೆಗಡಿಗೆ ಇನ್ನೂ ಮದ್ದು ಸಿದ್ಧವಾಗಿಲ್ಲ ಎಂದು ಲೇಖಕರು ಹೇಳಲು ಕಾರಣವೇನು?

### ಟಿಪ್ಪಣಿ ಬರೆಯಿರಿ

ಪಾಠಭಾಗದಲ್ಲಿ ನಿಮಗೆ ಇಷ್ಟವಾದ ಭಾಗವನ್ನು ಆಯ್ಕೆ ಮಾಡಿ ಯಾಕೆ ಇಷ್ಟವಾಯಿತು ಎಂಬುದನ್ನು ಟಿಪ್ಪಣಿ ರೂಪದಲ್ಲಿ ಬರೆಯಿರಿ .

### ಲಿಖಿತ ಭಾಷಣ ತಯಾರಿಸಿರಿ

'ತ್ವರಿತ ಆಹಾರ (ಫಾಸ್ಟ್ ಫುಡ್), ಜಂಕ್ ಆಹಾರಗಳು ನಮ್ಮ ಆರೋಗ್ಯದ ಮೇಲೆ ಬೀರುವ ಪ್ರಭಾವಗಳು' ಎಂಬ ವಿಷಯದ ಕುರಿತು ಲಿಖಿತ ಭಾಷಣವನ್ನು ತಯಾರಿಸಿರಿ.

### ಜಾಹೀರಾತು ತಯಾರಿಸಿರಿ

ಆಯುರ್ವೇದ ಔಷಧೋತ್ಪನ್ನಗಳ ಪ್ರಚಾರಕ್ಕಾಗಿ ಪತ್ರಿಕೆಯಲ್ಲಿ ಪ್ರಕಟಿಸಲು ಒಂದು ಜಾಹೀರಾತು ತಯಾರಿಸಿರಿ.

### ಲೇಖನ ಚಿಹ್ನೆಗಳನ್ನು ಬಳಸಿರಿ

ಕೆಳಗೆ ಕೊಡಲಾದ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಗಳನ್ನು ಅಳವಡಿಸಿ ಬರೆಯಿರಿ.

ಊಟ ಬಲ್ಲವನಿಗೆ ರೋಗವಿಲ್ಲ ಆರೋಗ್ಯವೇ ಭಾಗ್ಯ ಮೊದಲಾದ ಮಾತುಗಳನ್ನು ಕೇಳಿದ್ದೀರಲ್ಲವೆ ಇದು ಆಹಾರದ ಆರೋಗ್ಯದ ಮಹತ್ವವನ್ನು ತಿಳಿಸುತ್ತದೆ ಯಾವುದನ್ನು ತಿಂದರೆ ಒಳ್ಳೆಯದು ಯಾವುದು ಹಾಳು ಎಷ್ಟು ತಿನ್ನಬೇಕು ಎನ್ನುವ ಪ್ರಜ್ಞೆ ನಮಗಿರಬೇಕು

### ಮಾಹಿತಿ ತಯಾರಿಸಿರಿ

'ಹಿತ್ತಲ ಗಿಡ ಮದ್ದಲ್ಲ' ಎಂಬ ಗಾದೆ ಮಾತನ್ನು ಕೇಳಿರುವಿರಿ. ನಮ್ಮ ಪರಿಸರದಲ್ಲಿ ಸಾಕಷ್ಟು ಔಷಧೀಯ ಸಸ್ಯಗಳಿದ್ದರೂ ಅವುಗಳನ್ನು ನಿರ್ಲಕ್ಷಿಸುತ್ತೇವೆ. ಈ ಹಿನ್ನೆಲೆಯಲ್ಲಿ ನಿಮ್ಮ ಸುತ್ತ ಮುತ್ತಲಿರುವ ಔಷಧೀಯ ಸಸ್ಯಗಳು ಮತ್ತು ಅವುಗಳ ಉಪಯೋಗದ ಮಾಹಿತಿಯನ್ನು ಹಿರಿಯರಿಂದ ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

* * *

# ಕುಡಿಯಬೇಡ

- ಕೊಂಚಾಡಿ ಸೀತಾರಾಮ ಭಟ್ಟ



ಹಗಲು ಬಿಸಿಲಿನಲ್ಲಿ ದುಡಿತ
ನಿನ್ನ ಖರ್ಚಿಗಿಲ್ಲ ಹಿಡಿತ
ಇರುಳು ಬಾರಿನಲ್ಲಿ ಕುಡಿತ
ಏರುಪೇರು ನಾಡಿ ಮಿಡಿತ
ಕುಂದುವುದು ಹೃದಯ ಬಡಿತ
ದೇಹಕಿದುವೆ ದೊಡ್ಡ ಹೊಡೆತ
ನಿನ್ನ ಸತಿ ಸುತರನೆಲ್ಲಾ
ಕಾಯ್ವರಾರಣ್ಣ ಸುಖದಿ ಬಾಳಬೇಕಣ್ಣಾ

ಮದ್ಯ ಕುಡಿದು ಬಸ್ಸನೇರೆ
ಬ್ರೇಕ್ ಕಾಲಿನಿಂದ ಜಾರೆ
ಬಸ್ಸಿನಿಂದ ನೀನು ಹಾರೆ
ತೋರ್ವರಾರು ಮುಂದೆ ದಾರಿ
ಪಯಣಿಗರು ಒಂದೇ ಬಾರಿ
ಯಮನ ಬಳಿಗೆ ಬೇಗ ಸಾರೆ
ಬಸ್ ಚಾಲಕಾ
ನಿಜವು ನೀನೇ ಹಂತಕ

ಸೇಂದಿ ಮದ್ಯ ಕುಡಿತದಿಂದ
ಆಯ್ತು ನಿನ್ನ ಬುದ್ಧಿ ಮಂದ
ಕಾಯ್ವರಾರು ಸತಿಯನಿಂದು
ಬಾಳಲೆಂತು ನಿನ್ನ ಕಂದ
ಮದ್ಯರಹಿತ ದುಡಿತದಿಂದ
ಹಸನು ಬಾಳ ಸಹಜಗುಟ್ಟ
ಅರಿಯಬೇಕಣ್ಣ
ನೀನು ಮರೆಯಬೇಡಣ್ಣ

ಕನಕ ಧನವವೆಲ್ಲ ಮಾಯ
ಆಸ್ತಿ ಪಾಸ್ತಿ ಮಂಗಮಾಯ
ಶಕ್ತಿಗುಂದೆ ನಿನ್ನ ಕಾಯ
ಪರಶಿವನು ನಿನ್ನ ಕಾಯ
ಮದ್ಯಕಿಂದೆ ಮುಚ್ಚು ಬಾಯ
ಸುಖದ ಬಾಳ್ವೆಗಿದುವೆ ನ್ಯಾಯ
ಕುಡಿಯಬೇಡಣ್ಣ ಮದ್ಯ
ಕುಡಿಯಬೇಡಣ್ಣ.

## ಕವಿ ಪರಿಚಯ



ಕೊಂಚಾಡಿ ಸೀತಾರಾಮ ಭಟ್ಟರು ೧೩.೦೬.೧೯೩೧ ರಂದು ಮಂಗಳೂರಿನ ಕೊಂಚಾಡಿಯಲ್ಲಿ ಜನಿಸಿದರು. ಬೈಂದೂರು ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ, ಮಂಗಳೂರಿನ ಇಂದಿರಾ ಗಾಂಧಿ ಹಿಂದಿ ಬಿ.ಎಡ್. ಕಾಲೇಜಿನ ಪ್ರಾಚಾರ್ಯರಾಗಿ, ಕರ್ನಾಟಕ ಸರಕಾರದ ಪಠ್ಯಪುಸ್ತಕ ರಚನಾ ಸಮಿತಿ ಮತ್ತು ಅನುವಾದ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರಿಗೆ ಕರಾವಳಿ ಸಾಹಿತ್ಯ ಪ್ರಶಸ್ತಿ, ಆರೂಢ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಲಭಿಸಿವೆ. ಉದಯವಾಣಿ, ಕಸ್ತೂರಿ, ಹೊಸದಿಗಂತ ಸೇರಿದಂತೆ ಅನೇಕ ಪತ್ರಿಕೆಗಳಲ್ಲಿ ಇವರ ಕವಿತೆಗಳು ಪ್ರಕಟಗೊಂಡಿವೆ. ಮುದ್ದುಮರಿ ಕವಿತೆ ಬರೆ, ಸಂಖ್ಯಾ ವಿನೋದ, ಹೊಂಬೆಳಕು, ಕವಿತೆ - ವನಿತೆ ಮೊದಲಾದ ಕೃತಿಗಳನ್ನು ಇವರು ರಚಿಸಿದ್ದಾರೆ. ೧೪.೦೭.೨೦೧೮ ರಂದು ಇವರು ನಿಧನ ಹೊಂದಿದರು.

ಪ್ರಸ್ತುತ ಕವನವನ್ನು ಅವರ 'ಹೊಂಬೆಳಕು' ಕವನಸಂಕಲನದಿಂದ ಆರಿಸಿಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಹೃದಯ ಬಡಿತ ಕುಂದಲು ಕಾರಣವೇನು?
2. ಬಸ್ ಚಾಲಕನನ್ನು ಹಂತಕ ಎಂದು ಕವಿ ಹೇಳಿರುವುದರ ಹಿನ್ನೆಲೆಯೇನು?
3. ಸೇಂದಿ ಮದ್ಯ ಕುಡಿತದ ಪರಿಣಾಮವೇನು?
4. ಮದ್ಯಕಿಂದೆ ಮುಚ್ಚುಬಾಯ ಎಂದು ಕವಿ ಹೇಳಲು ಕಾರಣವೇನು?

## ಆಶಯ ಬರೆಯಿರಿ

'ಕುಡಿಯಬೇಡ' ಕವನದ ಆಶಯ ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ನೀಡಿರುವ ಸಾಲುಗಳ ಸ್ವಾರಸ್ಯ ಬರೆಯಿರಿ.

* ಇರುಳು ಬಾರಿನಲ್ಲಿ ಕುಡಿತ
ಏರುಪೇರು ನಾಡಿಮಿಡಿತ

* ಶಕ್ತಿಗುಂದೆ ನಿನ್ನ ಕಾಯ
ಪರಶಿವನು ನಿನ್ನ ಕಾಯ

## ವಿಶೇಷತೆಯನ್ನು ಗುರುತಿಸಿರಿ

ಕೆಳಗಿನ ಸಾಲುಗಳ ವಿಶೇಷತೆಯನ್ನು ಬರೆಯಿರಿ.

* ಮದ್ಯರಹಿತ ದುಡಿತದಿಂದ
ಹಸನು ಬಾಳ ಸಹಜಗುಟ್ಟ
ಅರಿಯಬೇಕಣ್ಣ

## ಲಘುಟಿಪ್ಪಣಿ ಬರೆಯಿರಿ

'ಕುಡಿಯಬೇಡ' ಕವನದ ಆಧಾರದಲ್ಲಿ ಮದ್ಯಪಾನದ ದುಷ್ಪರಿಣಾಮಗಳ ಕುರಿತು ಲಘುಟಿಪ್ಪಣಿ ಬರೆಯಿರಿ.

## ಓದುಗರ ಓಲೆ ಬರೆಯಿರಿ

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನಗೈದು ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವವರ ಕುರಿತು ಜಾಗೃತಿ ಮೂಡಿಸಲು ದಿನಪತ್ರಿಕೆಯ ಓದುಗರ ಓಲೆಯಲ್ಲಿ ಪ್ರಕಟಿಸಲು ಒಂದು ಲೇಖನ ಬರೆಯಿರಿ.

* * *

# ಭ್ರಮಾಧೀನ

- ಡಾ. ಸಿ.ಆರ್. ಚಂದ್ರಶೇಖರ್

"ಯೋಗೀಶ ರಿಪೇರಿ ಆಗಲಾರದಷ್ಟು ಕೆಟ್ಟು ಹೋಗಿದ್ದಾನೆ ಕಣೋ..." ಅರವಿಂದ ನುಡಿದ.

"ಅವನು ಕೆಟ್ಟಿದ್ದಾನೆ ನಿಜ, ಆದರೆ ರಿಪೇರಿ ಆಗದಷ್ಟು ಕೆಟ್ಟಿದ್ದಾನೆ ಅಂತ ಹೇಗೆ ಹೇಳ್ತಿ" ಸುಧೀಂದ್ರ ಪ್ರಶ್ನಿಸಿದ.

"ನನ್ನ ಹತ್ತಿರ ಕೈಗಡ ಅಂತ ಮುನ್ನೂರು ರೂಪಾಯಿ ತೆಗೆದುಕೊಂಡು ಐದು ತಿಂಗಳಾಯ್ತು. ವಾಪಸ್ ಕೊಟ್ಟಿಲ್ಲ. ಕೇಳಿದ್ರೆ ಈ ಹೊತ್ತು, ನಾಳೆ ಅಂತ ತಾರಮ್ಮಯ್ಯ ಮಾಡ್ತಿದ್ದಾನೆ."

"ಅಂದರೆ ನಿನ್ನ ಸಾಲದ ಹಣವನ್ನು ಕೊಡ್ಲಿಲ್ಲ ಅಂತ ಅವನ ಮೇಲೆ ನಿನಗೆ ಕೋಪ ಅಲ್ಲವೇ?" ಸುಧೀಂದ್ರ ಅವನನ್ನು ಚುಚ್ಚಿದ.

"ಅಷ್ಟೇ ಅಲ್ಲವೋ, ಅವನು ಎಲ್ಲರ ಹತ್ತಿರ ಸಾಲ ಮಾಡಿಕೊಂಡಿದ್ದಾನೆ. ಹತ್ತಿರ ಹತ್ತಿರ ನಾಲ್ಕು ಸಾವಿರ ರೂಪಾಯಿಗಳನ್ನು ಅವನು ನುಂಗಿ ಹಾಕಿದ್ದಾನೆ ಅನ್ನಬಹುದು."

"ಹೌದಾ.... ಇದು ನಿನಗೆ ಹೇಗೆ ಗೊತ್ತಾಯ್ತು?"

"ಹೀಗೆ ನನ್ನ ಸಾಲದ ವಿಚಾರ ಅವರಿವರಲ್ಲಿ ಹೇಳಿಕೊಂಡಾಗ, ಅವರೆಲ್ಲ ಅಯ್ಯೋ, ಯೋಗೀಶನಿಗೆ ನಾವೂ ಸಾಲ ಕೊಟ್ಟು ಟೋಪಿ ಹಾಕಿಸಿಕೊಂಡಿದ್ದೇವೆ ಅಂತ ಹೇಳಿದ್ರು. ಅದಿರಲಿ ನೀನು ಅವನಿಗೆ ದುಡ್ಡು ಕೊಟ್ಟಿಲ್ಲ ತಾನೆ...?"

"ದುಡ್ಡು ಕೊಟ್ಟಿಲ್ಲ... ಆದರೆ ಕಳೆದ ವಾರ ನನ್ನ ಕ್ವಾರ್ಟ್ಸ್ ವಾಚ್ ಇತ್ತಲ್ಲ. ಅದನ್ನು ತೆಗೆದುಕೊಂಡು ಹೋದ. ಪರೀಕ್ಷೆ ಇದೆ, ನನ್ನದು ಕೆಟ್ಟು ಹೋಗಿದೆ ನಿನ್ನದು ಕೊಟ್ಟಿರು ಅಂತ ಹೇಳಿ ಇಸಿದುಕೊಂಡು ಹೋದ. ಈ ಹೊತ್ತಿನ ವರೆಗೆ ಅವನ ದರ್ಶನವಿಲ್ಲ..."

"ಆಯಿತು, ವಾಚನ್ನು ಮರೆತು ಬಿಡು. ಅದು ನಿನಗೆ ವಾಪಸ್ ಬರೋಲ್ಲ. ಅದು ಯಾವುದೋ ಮಾರವಾಡಿ ಅಂಗಡಿಯನ್ನು ಈಗಾಗಲೇ ಸೇರಿದೆ. ಅಥವಾ ಯಾವುದೋ ಬಾರ್, ಬೀಡಿ ಅಂಗಡಿ ಮಾಲೀಕನಿಗೆ ಸೇರಿರತ್ತೆ" ಅರವಿಂದ ನಕ್ಕ.

"ಛೇ... ಯೋಗೀಶ ಈ ಮಟ್ಟಕ್ಕೆ ಇಳೀತಾನೆ ಅಂತ ನಾನು ಅಂದ್ಕೊಂಡಿರಲಿಲ್ಲ. ಅವರಪ್ಪ ಅಷ್ಟು ಶ್ರೀಮಂತ. ಮಗನಿಗೆ ಖರ್ಚಿಗಾಗಿ ಸಾಲುವಷ್ಟು ಹಣ ಕಳಿಸೋದಕ್ಕೆ ಅವನಿಗೇನು ದಾಡಿ. ಜಿಪುಣ ಅಂತ ಕಾಣತ್ತೆ..."

"ಯೋಗೀಶನಿಗೆ ಎಷ್ಟು ದುಡ್ಡಿದ್ದರೂ ಸಾಲೋದಿಲ್ಲ ಸುಧೀಂದ್ರ. ಪಾಪ ಅವರಪ್ಪ ಕಳುಹಿಸೋ ದುಡ್ಡಿನಲ್ಲಿ ನಾಲ್ಕು ಜನ ಸುಲಭವಾಗಿ ಜೀವನ ಮಾಡಬಹುದು. ಆದರೆ ಯೋಗೀಶನಿಗೆ ಇರಬಾರದ ಚಟ ಇದೆ. ಮಾದಕ ವಸ್ತುಗಳನ್ನು ಸೇವಿಸೋ ಚಟಕ್ಕೆ ಬಿದ್ದಿದ್ದಾನೆ. ಅದರಲ್ಲೇ ಮುಳುಗಿ ತೇಲ್ತಿದ್ದಾನೆ. ಅವನಿಗೆ ಈಗ ಕೊಳಗ ಹಣ ಇದ್ದರೂ ಸಾಲೋದಿಲ್ಲ. ಇಷ್ಟರಲ್ಲೇ ಬುದ್ಧಿ ಕೆಟ್ಟು ಹುಚ್ಚ ಆಗ್ತಾನೆ. ಇಲ್ಲವೇ ಅವನಿಗೆ ಡ್ರಗ್ಸ್ ಸಪ್ಲೈ ಮಾಡುವವರ ಕೈಗೊಂಬೆಯಾಗಿ ಯಾರನ್ನಾದರೂ ಕೊಲೆ ಮಾಡಿ ಅಥವಾ ದರೋಡೆ ಮಾಡಿ ಜೈಲಿಗೆ ಹೋಗೋದಂತೂ ಗ್ಯಾರಂಟಿ."

"ನಾನು ಮೊದಲಿನಿಂದಲೂ ಹೇಳಿದೆ ಅವನಿಗೆ, ಬೇಡವೋ ಈ ಮಾದಕ ವಸ್ತುಗಳ ಸಹವಾಸ ಅಂತ. ಕೇಳಿದನಾ ಅವನು. ಈ ರೌಡಿ ಭೂಪತಿಯ ಸಹವಾಸ ಮಾಡಿ ಕುಲಗೆಟ್ಟು ಹೋದ... ಯೋಗೀಶ ಬೀರ್ ಬ್ರಾಂದಿ ಕುಡಿಯೋದನ್ನು ಕಂಡಿದ್ದೆ. ಈಗ ಏನು ಕುಡಿಯೋದನ್ನು ಕಲ್ತಿದ್ದಾನೆ?"

ಬ್ರಾಂದಿ, ವಿಸ್ಕಿ, ರಮ್ ಇರಲಿ, ಅಫೀಮು, ಗಾಂಜಾ ಮತ್ತು ಇತ್ತೀಚಿಗೆ ಬ್ರೌನ್ ಶುಗರ್ ಉಪಯೋಗಿಸಲು ಕಲ್ತಿದ್ದಾನೆ. ಅದಕ್ಕಾಗಿ ನೀರಿನಂತೆ ಹಣ ಖರ್ಚು ಮಾಡ್ತಾನೆ".

"ಬ್ರೌನ್ ಶುಗರ್ ಅಂದರೆ ಒಂದು ರೀತಿ ಪುಡಿ. ಸಿಗರೇಟಿನೊಂದಿಗೆ ಸೇರಿಸಿ ದಂ ಹೊಡಿಯೋದು ತಾನೇ."

"ಹೌದೋ"

"ಯೋಗೀಶ ಇಷ್ಟು ಹಾಳಾಗಿರೋದು ಅವನ ತಂದೆ ತಾಯಿ, ಮನೆಯವರಿಗೆ ಗೊತ್ತಿಲ್ಲವೇ, ಅನ್ಯಾಯವಾಗಿ ಹಾಳಾಗ್ತಾನಲ್ಲೋ."

"ತಂದೆಗೆ ಗೊತ್ತಾಗಿರಬಹುದು. ಆದರೆ ಯೋಗೀಶ ಅಡಿಕ್ಟ್ ಆಗಿದ್ದಾನೆ ಅನ್ನೋ ವಿಷಯ ಗೊತ್ತಿರಲಾರದು. ಕಳೆದ ವಾರ ಅವನ ತಂದೆ ಬಂದಿದ್ದರಲ್ಲ. ಸುಮಾರು ಅರ್ಧ ಗಂಟೆ ಕಾಲ ಕುಳಿತು ಬುದ್ಧಿ ಹೇಳ್ತಿದ್ದುದನ್ನು ಕಂಡೆ. ಯೋಗೀಶನಿಗೆ ಕೊಡ್ತಿದ್ದ ಪಾಕೆಟ್ ಮನಿಯನ್ನು ಕಡಿಮೆ ಮಾಡ್ತೀವಿ ಅಂತ ಹೆದರಿಸಿದರಂತೆ. ಆದರೆ ಆತ ಹಿಂದಿರುಗಿ ಬರಲಾಗದಂತ ದಾರಿಯಲ್ಲಿ ಹೋಗಿದ್ದಾನೆ..."

"ಈ ಡ್ರಗ್ಸ್‌ಗೆ ಅಡಿಕ್ಟ್ ಆಗೋದು ಎಂದರೇನೋ....ಆಗ ಏನು ತೊಂದರೆ ಆಗತ್ತೆ."

"ಮ್ಯಾಗಜಿನ್ ಒಂದರಲ್ಲಿ ಬಂದಿದ್ದ ಒಂದು ಲೇಖನದ ಪ್ರಕಾರ, ಯಾವಾಗ ಒಬ್ಬ ಮಾನಸಿಕವಾಗಿ ಮತ್ತು ದೈಹಿಕವಾಗಿ ಒಂದು ವಸ್ತುವಿನ ಸೇವನೆ ಬಗ್ಗೆ ಅವಲಂಬಿತನಾಗ್ತಾನೋ, ಒಂದು ದಿನ ಅದನ್ನು ಸೇವಿಸದೇ ಹೋದರೆ ಹುಚ್ಚನಂತೆ ಚಡಪಡಿಸುತ್ತಾನೋ, ವಿಪರೀತ ಮೈ ಕೈ ನೋವು, ನರಗಳ ಸೆಳೆತ, ಅದುರು, ನಿದ್ರೆ ಬರದಿರೋದು ಇತ್ಯಾದಿ ತೊಂದರೆಗಳು ಕಾಣಿಸಿಕೊಳ್ಳುತ್ತದೋ ಆಗ ಆತ ಆ ವಸ್ತುವಿಗೆ ಅಡಿಕ್ಟ್ ಆಗಿದ್ದಾನೆ ಅಂತ ಹೇಳಬಹುದಂತೆ. ಈ ರೀತಿ ಅಡಿಕ್ಟ್ ಆದ ವ್ಯಕ್ತಿ ತನ್ನ ಮೆಚ್ಚಿನ ಮಾದಕ ವಸ್ತುವಿನ ಸಂಪಾದನೆಗೆ ಏನು ಮಾಡುವುದಕ್ಕೂ ಸಿದ್ಧವಾಗ್ತಾನಂತೆ. ಕಳ್ಳತನ,

ಸುಳ್ಳು ಹೇಳೋದಕ್ಕೆ ಅಥವಾ ಮತ್ತೊಬ್ಬರನ್ನು ಕೊಲೆ ಮಾಡೋದಕ್ಕೂ ಹೇಸೋದಿಲ್ಲವಂತೆ. ಹೀಗೆ ತನ್ನ ಚಟಕ್ಕೆ ತಾನೇ ಗುಲಾಮನಾಗಿ, ಕೊನೆಗೆ ನಾಶವಾಗ್ತಾನಂತೆ...."

"ಅಬ್ಬಾ, ಕೇಳೋದಕ್ಕೇ ಭಯಂಕರವಾಗಿದೆ. ಇನ್ನು ಅನುಭವಿಸೋದಕ್ಕೆ ಎಷ್ಟು ಭಯಂಕರವಾಗಿರುತ್ತೊ ಏನೋ..."

"ದುಡ್ಡಿನ ಆಸೆಗೆ, ಕೇಡಿಗಳು ಈ ಮಾದಕ ವಸ್ತುವನ್ನು ಜನರಿಗೆ ಮೊದಲು ಫ್ರೀಯಾಗಿ ಅಥವಾ ಅಗ್ಗದ ದರದಲ್ಲಿ ಕೊಟ್ಟು ಅವರನ್ನು ಅಡಿಕ್ಟ್ ಮಾಡಿ, ಆಮೇಲೆ ಒಂದಕ್ಕೆ ಹತ್ತು, ಇಪ್ಪತ್ತರಷ್ಟು ಹಣವನ್ನು ವಸೂಲು ಮಾಡ್ತಾರಂತೆ. ಇಲ್ಲವೇ ತಾವು ಹೇಳಿದ ಅಪರಾಧದ ಕೆಲಸ ಮಾಡು ಅಂತ ಒತ್ತಾಯ ಮಾಡ್ತಾರಂತೆ. ಬೇರೆ ಮಾರ್ಗವಿಲ್ಲದೆ ಅಡಿಕ್ಟಾದವರು ಅವರ ಗುಲಾಮರಾಗ್ತಾರೆ."

"ಯೋಗೀಶನನ್ನು ನಾವು ರಕ್ಷಿಸಬೇಕು. ಅವನು ಹಾಳಾಗೋದಕ್ಕೆ ಬಿಡಬಾರದು. ಆದರೆ ನಾವು ಹೇಳೋ ಮಾತನ್ನು ಕೇಳ್ತಾನಾ. ಈ ಚಟ ಬಿಡಿಸೋದಕ್ಕೆ ಏನಾದರೂ ಚಿಕಿತ್ಸೆ ಇದೆಯಾ?"

"ನನಗೆ ಸರಿಯಾಗಿ ಗೊತ್ತಿಲ್ಲ. ಚಟ ಬಿಡೋದಕ್ಕೆ ದೃಢವಾದ ಮನಸ್ಸು ಬೇಕು. ನಮ್ಮ ಫ್ಯಾಮಿಲಿ ಡಾಕ್ಟರನ್ನು ವಿಚಾರಿಸ್ತೇನೆ. ಬಹುಶಃ ಮನಶಾಸ್ತ್ರಜ್ಞರು ಯೋಗೀಶನಿಗೆ ಸಹಾಯ ಮಾಡಬಲ್ಲರು ಅಂತ ಕಾಣುತ್ತೆ. ಪರಿಸ್ಥಿತಿ ಕೈಮೀರೋದರೊಳಗೆ ಏನಾದರೂ ಮಾಡಲೇಬೇಕು" ಎಂದು ಗೆಳೆಯರಿಬ್ಬರು ಮಾತಾಡಿಕೊಂಡು ಹೊರಟರು.

ಕೆಲವು ದಿವಸಗಳ ಅನಂತರ ಒಂದು ದಿನ ರಾತ್ರಿ ಒಂಬತ್ತೂವರೆ ಘಂಟೆ ಹೊತ್ತಿನಲ್ಲಿ ಅರವಿಂದ ಸುಧೀಂದ್ರನ ಮನೆ ಬಾಗಿಲನ್ನು ತಟ್ಟಿದ. ಬಾಗಿಲು ತೆರೆದ ಸುಧೀಂದ್ರನ ತಂದೆಗೆ ಅರವಿಂದನನ್ನು ನೋಡಿ ಆಶ್ಚರ್ಯವಾಯಿತು. "ಅಂಕಲ್, ಸುಧೀಂದ್ರ ಇದ್ದಾನಾ, ಅವನನ್ನು ಕರೀರಿ" ಎಂದು ಹೇಳಿದ. "ಯಾಕೆ ಅರವಿಂದ್, ಏನಾಯಿತು. ಇಷ್ಟು ಹೊತ್ತಿನಲ್ಲಿ ನೀವಿಬ್ಬರೂ ಏನು ಮಾಡಲಿದ್ದೀರಿ" ಎಂದು ಅವರು ವಿಚಾರಿಸಿದರು.

"ಅಂಕಲ್, ನಮ್ಮ ಕ್ಲಾಸ್ ಮೇಟ್ ಹಾಗೂ ಸ್ನೇಹಿತ ಯೋಗೀಶ ಅಂತ ಇದ್ದಾನೆ. ಈ ಹೊತ್ತು ಬೆಳಗಿನಿಂದ ಏನೋ ಒಂದು ರೀತಿ ಇದ್ದ. ಈಗ ಸಂಜೆಯಿಂದ ಎಲ್ಲರನ್ನೂ ಬೈಯುತ್ತಿದ್ದಾನೆ. ಹೊಡೆಯಲು ಹೋಗುತ್ತಾನೆ, ತನ್ನಷ್ಟಕ್ಕೆ ತಾನೇ ಗಟ್ಟಿಯಾಗಿ ಮಾತಾಡಿಕೊಳ್ಳುತ್ತಾನೆ. ತುಂಬಾ ಭಯ ಪಟ್ಟವನಂತೆ ಕಾಣುತ್ತಾನೆ. ಒಂದು ನಿಮಿಷ ಒಂದೆಡೆ ನಿಲ್ಲುವುದಿಲ್ಲ. ಬೋನಿನಲ್ಲಿ ಒಂದೇ ಸಮ ಅತ್ತಿಂದಿತ್ತ, ಇತ್ತಿಂದತ್ತ ಓಡಾಡುವ ಪ್ರಾಣಿಯ ಹಾಗೆ ಓಡಾಡುತ್ತಿದ್ದಾನೆ. ಅವನನ್ನು ನೋಡಿದರೆ ನಮಗೆಲ್ಲ ಭಯವಾಗ್ತಿದೆ. ಆತ ಯಾರ ಮಾತೂ ಕೇಳ್ತಿಲ್ಲ. ಬೆಳಗಿನಿಂದ ಏನೂ ತಿಂದಿಲ್ಲ. ಒಂದು ಗುಟುಕು ನೀರನ್ನೂ ಕುಡಿದಿಲ್ಲ. ಆಗಾಗ್ಗೆ ಸುಧೀಂದ್ರ ನೋಡು, ಅವರೆಲ್ಲ ಬರ್ತಿದ್ದಾರೆ. ನನ್ನ ಕೊಲ್ಲೋದಿಕ್ಕೆ ಚಾಕು ಚೂರಿ ಹಿಡಿದಿದ್ದಾರೆ. ನನ್ನನ್ನು ಕಾಪಾಡು ಅಂತ ಹೇಳ್ತಿರ್ತಾನೆ. ಸುಧೀಂದ್ರ ಮತ್ತು ಈತ ತುಂಬಾ ಕ್ಲೋಸ್ ಆಗಿದ್ದಾರೆ. ಆದ್ದರಿಂದ ಸುಧೀಂದ್ರ ಬಂದು ಮಾತಾಡಿದ್ರೆ, ಯೋಗೀಶ ಮಾತಾಡಬಹುದು. ಅವನ ಸ್ಥಿತಿ ಉತ್ತಮವಾಗಬಹುದು ಅಂತ ಓಡಿ ಬಂದೆ." ಅಷ್ಟರಲ್ಲಿ ಸುಧೀಂದ್ರ ರೆಡಿಯಾಗಿ ಬಂದ.



"ಈ ನಿಮ್ಮ ಯೋಗೀಶ ಏನಾದರೂ ಡ್ರಗ್ಸ್ ತೆಗೆದುಕೊಳ್ಳುತ್ತಾನೇನಯ್ಯ" ಅವನ ತಂದೆ ಪ್ರಶ್ನಿಸಿದರು. ಅವರ ಮಾತು ಕೇಳಿ ಅರವಿಂದ, ಸುಧೀಂದ್ರ ಇಬ್ಬರಿಗೂ ಆಶ್ಚರ್ಯವಾಯಿತು.

"ಯಾಕಪ್ಪ ಈ ಪ್ರಶ್ನೆ ಕೇಳಿದಿರಿ?"

"ಇತ್ತೀಚಿಗೆ ಕಾಲೇಜುಗಳಲ್ಲಿ, ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳು ಡ್ರಗ್ಸ್ ಸೇವನೆ ಮಾಡೋದು ಕಾಡ್ಗಿಚ್ಚಿನಂತೆ ಹರಡ್ತಾ ಇರೋದನ್ನು ಪೇಪರ್ ನಲ್ಲಿ ಓದ್ತಾ ಇಲ್ವವೇ.... ನಾನು ಕೆಮಿಸ್ಟ್. ಡ್ರಗ್ಸ್‌ಗೆ ಅಡಿಕ್ಟ್ ಆದವರು, ಒಂದು ಹಂತದಲ್ಲಿ ಬುದ್ಧಿ ಭ್ರಮಣೆಗೆ ತುತ್ತಾಗ್ತಾರೆ. ಆಗ ಅವರಿಗೂ, ಹುಚ್ಚು ಕಾಯಿಲೆ ಇರುವವರಿಗೂ ಯಾವ ವ್ಯತ್ಯಾಸವು ಇರೋಲ್ಲ. ಕೆಲವು ಸಲ, ಕಾಯಿಲೆಯವರಿಗಿಂತ ಇವರೇ ಹೆಚ್ಚು ಅಪಾಯಕಾರಿ ಆಗಬಲ್ಲರೂ ಅಂತ ಓದಿ ತಿಳಿದಿದ್ದೇನೆ. ಒಂದು

ದಿನ ಡ್ರಗ್ಸ್‌ಸೇವನೆ ಮಾಡದಿದ್ದರೆ 'ವಿತ್ ಡ್ರಾಯಲ್ ಸಿಂಪ್ಟಮ್ಸ್' ಅಂತ ಶಾರೀರಿಕ ಮತ್ತು ಮಾನಸಿಕ ರೋಗ ಚಿಹ್ನೆಗಳು ಕಾಣಿಸಿಕೊಳ್ಳುತ್ತವೆ. ಭಯ, ಭ್ರಮೆಗಳಿಂದ ಅವರಿಗೆ ಗೊಂದಲವಾಗಿ ಚಿತ್ರ ವಿಚಿತ್ರವಾಗಿ ನಡೆದುಕೊಳ್ತಾರೆ. ನಿಮ್ಮ ಯೋಗೀಶನ ಸ್ಥಿತಿ ನೋಡಿದರೆ ನನಗೆ ಹಾಗೇ ತೋರುತ್ತೆ".

"ನೀವು ಹೇಳೋದು ನಿಜವಿರಬೇಕು ಅಪ್ಪ, ಯೋಗೀಶ ಡ್ರಗ್ಸ್ ತೆಗೆದುಕೊಳ್ತಾನೆ. ಇತ್ತೀಚೆಗೆ ಅವನ ಈ ಚಟ ಹೆಚ್ಚಾಗಿತ್ತು. ನಮ್ಮ ಹತ್ತಿರವೆಲ್ಲಾ ಸಾಲ ಮಾಡಿದ್ದ. ನಾವು ಹೇಳಿದ್ದ ಬುದ್ಧಿ ಮಾತನ್ನು ಆತ ಕೇಳಲೇ ಇಲ್ಲ. ಈಗ ಏನು ಮಾಡೋದು."

"ಆತನನ್ನು ಬೇಗ ಮಾನಸಿಕ ಆಸ್ಪತ್ರೆಗೆ ಸೇರಿಸಿ, ಚಿಕಿತ್ಸೆ ಕೊಡಿಸಬೇಕು. ಇಲ್ಲದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ. ತಾಳಿ.... ಇಲ್ಲಿಂದಲೇ ನಾನು ಆಂಬುಲೆನ್ಸ್ ಗೆ ಫೋನ್ ಮಾಡುತ್ತೇನೆ. ಹಾಸ್ಟೆಲಿಗೆ ತಕ್ಷಣ ಬರುವಂತೆ ಹೇಳುತ್ತೇನೆ...." ಎಂದು ಒಳಹೋದರು.

ಅವರೆಲ್ಲ ಹಾಸ್ಟೆಲಿಗೆ ಬಂದಾಗ, ಯೋಗೀಶನ ರೂಮಿನ ಮುಂದೆ ವಿದ್ಯಾರ್ಥಿಗಳ ಒಂದು ಸಣ್ಣ ಗುಂಪೇ ಇತ್ತು. ಅರವಿಂದ ಅವರಲ್ಲಿ 'ಹೇಗಿದ್ದಾನೆ ಯೋಗೀಶ' ಎಂದು ವಿಚಾರಿಸಿದ. 'ಅಯ್ಯೋ ಅವನ ಹಾವಳಿ ತಡೆಯಲಾಗಲಿಲ್ಲ. ಹಾಸಿಗೆ ಹೊದಿಕೆ, ಬಟ್ಟೆ ಬರೆಯನ್ನೆಲ್ಲಾ ಎತ್ತಿ ಒಗೆಯಲು ಪ್ರಾರಂಭಿಸಿದ್ದ. ನಮ್ಮನ್ನೆಲ್ಲ ಹೊಡೆಯಲು ಬಂದಿದ್ದ. ಕೈಕಾಲು ಕಟ್ಟಿ ಉರುಳಿ ಹಾಕಿದ್ದೇವೆ' ಎಂದ. ಅವರಲ್ಲಿ ಒಬ್ಬ ಬಾಗಿಲು ತೆಗೆದು ಒಳ ಹೋದಾಗ, ಯೋಗೀಶ ನೆಲದ ಮೇಲೆ ಮಲಗಿದ್ದ. ಕಟ್ಟುಗಳನ್ನು ಬಿಚ್ಚಿಕೊಳ್ಳಲು ಪ್ರಯತ್ನಿಸುತ್ತಿದ್ದ. ತಲೆ ಕೆದರಿತ್ತು. ಕಣ್ಣುಗಳು ಕೆಂಪಾಗಿದ್ದವು. ಒಳ ಬಂದವರನ್ನು ನೋಡಿ 'ಏಯ್, ನನ್ನನ್ನು ಕೊಲ್ಲುತ್ತೀರಾ ನೀವು. ನಿಮ್ಮನ್ನು ಸಾಯಿಸಿ ಬಿಡುತ್ತೇನೆ.... ಹೋಗಿ.... ಇಲ್ಲಿಂದ ಹೊರಟು ಹೋಗಿ...' ಎಂದು ಕಿರುಚಿದ.

"ಯೋಗೀಶ.... ನಾನು ನಿನ್ನ ಸ್ನೇಹಿತ ಸುಧೀ ಬಂದಿದ್ದೇನೆ. ಏನಾಗ್ತಿದೆ ನಿನಗೆ?" ಸುಧೀಂದ್ರ ಅವನ ಹತ್ತಿರ ಹೋಗುತ್ತಿದ್ದಂತೆ, ನೆರೆದವರು ಬೆಚ್ಚಿ ಬೀಳುವಂತೆ ಯೋಗೀಶ ಕೂಗು ಹಾಕಿದ "ಬೇಡಾ....ಬೇಡಾ....ಹತ್ತಿರ ಬರಬೇಡ... ಅಯ್ಯೋ ನನ್ನನ್ನು ಕಾಪಾಡಿ. ಇವನು ನನ್ನ ಕತ್ತುಹಿಸುಕಲು ಬರುತ್ತಿದ್ದಾನೆ.... ಕಾಪಾಡಿ" ಎಂದು ಬಡಬಡಿಸತೊಡಗಿದ.

"ಈತ ಭ್ರಮಾಧೀನನಾಗಿದ್ದಾನೆ. ಇನ್ನು ತಡಮಾಡುವುದು ಬೇಡ... ನೋಡಿ.... ಆಂಬುಲೆನ್ಸ್ ಬಂತಾ?.. ಬಂದಿದ್ದರೆ ಇವನನ್ನು ಎತ್ತಿ ಸಾಗಿಸಿ" ಎಂದು ಆಣತಿ ಇತ್ತರು ಸುಧೀಂದ್ರನ ತಂದೆ. ಬಡಬಡಿಸುತ್ತಾ,ಕೂಗಾಡುತ್ತಾ, ಒದ್ದಾಟ ಮಾಡುತ್ತಿದ್ದ ಅವನನ್ನು ಆಂಬುಲೆನ್ಸ್‌ಗೆ ಸಾಗಿಸಿದರು. "ಮಾನಸಿಕ ಆಸ್ಪತ್ರೆಯ ತುರ್ತು ವಿಭಾಗಕ್ಕೆ ನಡಿಯಪ್ಪ" ಎಂದು ಡ್ರೈವರ್ ಗೆ ಹೇಳಿದರು.

ಆಸ್ಪತ್ರೆಗೆ ತಲುಪಿದಾಗ, ತುರ್ತು ವಿಭಾಗದ ವೈದ್ಯಾಧಿಕಾರಿಗೆ ಪರಿಸ್ಥಿತಿಯನ್ನು ವಿವರಿಸಲಾಯಿತು. ಅವರು ಯೋಗೀಶನನ್ನು ಪರೀಕ್ಷಿಸಿದರು. ಇದು ಮಾದಕ ವಸ್ತುವಿನ ಸೇವನೆಯ ಪರಿಣಾಮ. 'ಡ್ರಗ್ ವಿತ್‌ಡ್ರಾವಲ್ ಸ್ಟೇಜ್್'

ಎಂದು ನಿರ್ಧರಿಸಿ ಯೋಗೀಶನಿಗೆ ಶಮನಕಾರಿ ಸೂಜಿಮದ್ದನ್ನು ಕೊಟ್ಟರು. ಚಿಕಿತ್ಸೆಗಾಗಿ ಅಡ್ಮಿಟ್ ಮಾಡಿದರು.

"ಮಾದಕ ವಸ್ತುವಿನಿಂದ ದೂರವಿರುವುದೇ ಅತ್ಯಂತ ಸುರಕ್ಷಿತವಾದದ್ದು. ಜೇಡನ ಬಲೆಯ ಅಂದಕ್ಕೆ ಆಕರ್ಷಿತಗೊಂಡು ಸಾಯುವ ಹುಳು ನಮಗೆ ಪಾಠವಾಗಬೇಕು. ಮದ್ಯಪಾನವಾಗಲೀ ಮಾದಕ ವಸ್ತುವಾಗಲೀ ನೀಡುವ ಪ್ರಾರಂಭಿಕ ಸುಖದ ಆಕರ್ಷಣೆಗೆ ಒಳಗಾದರೆ, ನಮ್ಮ ಸ್ಥಿತಿ ದುರಂತವಾಗುತ್ತದೆ. ಶರೀರ ಮತ್ತು ಮನಸ್ಸು ಜರ್ಝರಿತವಾಗಿ ರೋಗಗ್ರಸ್ತವಾಗುತ್ತವೆ. ಹೀನಾಯ ರೀತಿಯ ಸಾವು ಬರುತ್ತದೆ. ಆದುದರಿಂದ ಹರೆಯದವರು ಮಾದಕ ವಸ್ತುಗಳ ಬಗ್ಗೆ ಎಚ್ಚರಿಕೆ ವಹಿಸುವುದು ಮತ್ತು ಈ ದಿಶೆಯಲ್ಲಿ ದೊಡ್ಡವರ ಮಾರ್ಗದರ್ಶನವನ್ನು ಪಾಲಿಸುವುದು ಅತ್ಯಗತ್ಯ." ವೈದ್ಯರ ಈ ಮಾತುಗಳು ಯೋಗೀಶನ ಕಿವಿಯಲ್ಲಿ ಅನುರಣಿಸುತ್ತಲೇ ಇತ್ತು.

## ಲೇಖಕರ ಪರಿಚಯ



ಡಾ. ಸಿ.ಆರ್. ಚಂದ್ರಶೇಖರ್ ಅವರು ೧೯೪೮ ಡಿಸೆಂಬರ್ ೧೨ರಂದು ರಾಮನಗರ ಜಿಲ್ಲೆಯ ಚನ್ನಪಟ್ಟಣದಲ್ಲಿ ಜನಿಸಿದರು. ಅವರ ಪೂರ್ಣ ಹೆಸರು ಚನ್ನಪಟ್ಟಣ ರಾಜಣ್ಣಾಚಾರ್ ಚಂದ್ರಶೇಖರ್. ಅವರ ತಂದೆ ಬಿ ಎಂ ರಾಜಣ್ಣಾಚಾರ್, ತಾಯಿ ಶ್ರೀಮತಿ ಎಸ್.ಪಿ. ಸರೋಜಮ್ಮ. ಸಿ.ಆರ್. ಚಂದ್ರಶೇಖರ್ ಅವರು ಪ್ರೌಢ ಶಿಕ್ಷಣವನ್ನು ಚನ್ನಪಟ್ಟಣ ತಾಲೂಕಿನಲ್ಲೂ ಪದವಿ ಹಾಗೂ ಉನ್ನತ ಶಿಕ್ಷಣವನ್ನು ಬೆಂಗಳೂರಿನಲ್ಲೂ ಪೂರೈಸಿದರು. ಬಳಿಕ ಬೆಂಗಳೂರಿನ ನಿಮ್ಹಾನ್ಸ್ ಮನೋವೈದ್ಯಕೀಯ ಸಂಸ್ಥೆಯಲ್ಲಿ ವೈದ್ಯ ಶಿಕ್ಷಣವನ್ನು ಪಡೆದು ಅದೇ ಸಂಸ್ಥೆಯಲ್ಲಿ ಹಿರಿಯ ಮನೋತಜ್ಞರಾಗಿ ೩೬ ವರ್ಷಗಳ ಸುದೀರ್ಘ ಸೇವೆಯನ್ನು ಸಲ್ಲಿಸಿ ೨೦೧೨ರಲ್ಲಿ ನಿವೃತ್ತರಾದರು. ಅವರು ರೋಗಿಗಳಿಗೆ ಉಚಿತ ಸಲಹೆ ಚಿಕಿತ್ಸೆಗಳನ್ನು ನೀಡುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಬೋಧನೆ, ತರಬೇತಿ, ಮಾರ್ಗದರ್ಶನಗಳನ್ನು ಕೊಡುತ್ತಿದ್ದರು. 'ಮಗು ಮನಸು ಮತ್ತು ಆರೋಗ್ಯ' 'ಅರ್ಥಪೂರ್ಣ ಬದುಕು' 'ಕೌನ್ಸಿಲಿಂಗ್ ಏನು, ಯಾರಿಗೆ ಹೇಗೆ ?......' ಮೊದಲಾಗಿ ೧೮೦ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಶ್ರೇಷ್ಠ ಮನೋವೈದ್ಯ ಪ್ರಶಸ್ತಿ, ಕರ್ನಾಟಕ ಚೇತನ ಪ್ರಶಸ್ತಿ, ಭಾರತ ಸರಕಾರದಿಂದ ಶ್ರೇಷ್ಠ ವೈದ್ಯ ಸಾಹಿತ್ಯ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಇತ್ಯಾದಿ ಅನೇಕ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

ಈ ಪಾಠಭಾಗವನ್ನು ಡಾ. ನಾ. ಸೋಮೇಶ್ವರ ಇವರು ಸಂಪಾದಿಸಿದ ಡಾ. ಸಿ.ಆರ್. ಚಂದ್ರಶೇಖರ್ ಅವರ 'ನಮ್ಮ ನಿಮ್ಮ ಮನಸ್ಸಿನ ನೋವಿನ ಕಥೆಗಳು' ಎಂಬ ಕೃತಿಯಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಮಾದಕ ವಸ್ತುಗಳ ಬಳಕೆಯಿಂದ ಯೋಗೀಶನ ವರ್ತನೆಯಲ್ಲಿ ಆದ ಬದಲಾವಣೆಗಳೇನು?
2. ಅಮಾಯಕರು ಮಾದಕ ವಸ್ತುವಿಗೆ ಹೇಗೆ ಬಲಿಯಾಗುತ್ತಾರೆ ?
3. 'ವಿತ್ ಡ್ರಾಯಲ್ ಸಿಮ್ಟಮ್ಸ್' ಎಂದರೇನು ?
4. ಮಾದಕ ವಸ್ತುಗಳ ವಿಪರೀತ ಬಳಕೆಯಿಂದ ಕೊನೆ ಗಳಿಗೆಯಲ್ಲಿ ಬುದ್ಧಿ ಭ್ರಮಣೆಗೆ ಒಳಗಾದ ಯೋಗೀಶನ ನಡವಳಿಕೆ ಹೇಗಿತ್ತು?
5. ವೈದ್ಯರ ಯಾವ ಮಾತುಗಳು ಯೋಗೀಶನ ಕಿವಿಯಲ್ಲಿ ಅನುರಣಿಸುತ್ತಿದ್ದವು?

## ಸಂದೇಶ ಬರೆಯಿರಿ

'ಭ್ರಮಾಧೀನ' ಕಥೆಯು ನೀಡುವ ಸಂದೇಶವನ್ನು ಬರೆಯಿರಿ.

## ಕರಪತ್ರ ತಯಾರಿಸಿರಿ

ವ್ಯಸನ ಮುಕ್ತ ಸಮಾಜದ ನಿರ್ಮಾಣಕ್ಕಾಗಿ ಜನಜಾಗೃತಿ ಮೂಡಿಸುವ ಒಂದು ಕರಪತ್ರ ತಯಾರಿಸಿರಿ.

## ಶಿಷ್ಟರೂಪದಲ್ಲಿ ಬರೆಯಿರಿ

ಕೆಳಗೆ ಕೊಡಲಾದ ಗ್ರಾಮ್ಯರೂಪದ ವಾಕ್ಯಗಳನ್ನು ಶಿಷ್ಟರೂಪಕ್ಕೆ ಪರಿವರ್ತಿಸಿ ಬರೆಯಿರಿ.

ಪ್ಯಾಟೇಲಿ ಹೆಂಗೆ ಬದ್ಕ್ ಬೇಕಂತ ನಿಂಗೆ ಗೊತ್ತಾಗಲ್ವೇನಪ್ಪ? ಮೊಬೈಲೇ ಬದ್ಕ್ ಅಲ್ಲ. ನಿನ್ ಬುದ್ಧಿ ನಿನ್ ಕೈಯಾಗಿರಲಿ. ಇಂಗೇ ಹಣ ಪೋಲು ಮಾಡಿದ್ರೆ ಗತಿ ಏನ್? ಇನ್ಮೇಲಾದ್ರೂ ಬದುಕೋದು ಎಂಗೆ ಅಂತ ಕಲಿತ್ಕೋ.

## ಗಾದೆಮಾತನ್ನು ವಿಸ್ತರಿಸಿ ಬರೆಯಿರಿ

'ಆರೋಗ್ಯವೇ ಭಾಗ್ಯ' ಎಂಬ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

## ಸ್ವಂತ ವಾಕ್ಯ ರಚಿಸಿರಿ

ಪಾಠಭಾಗದಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಪಟ್ಟಿ ಮಾಡಿ ಅದರ ಸಂವಾದಿ ಪದಗಳನ್ನು ಬರೆದು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿರಿ.

ಉದಾ: ಡಾಕ್ಟರ್ - ವೈದ್ಯರು

ಕೊರೊನಾ ಸಮಯದಲ್ಲಿ ಡಾಕ್ಟರುಗಳು ಸಲ್ಲಿಸಿದ ಸೇವೆ ಶ್ಲಾಘನೀಯವಾಗಿದೆ.

ಆಸ್ಪತ್ರೆಗಳಲ್ಲಿ ವೈದ್ಯರುಗಳು ಹಗಲಿರುಳೆನ್ನದೆ ರೋಗಿಗಳ ಶುಶ್ರೂಷೆ ಮಾಡುತ್ತಾರೆ.

## ಸಂಕ್ಷೇಪಿಸಿ ಬರೆಯಿರಿ

ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಸಂಕ್ಷೇಪಿಸಿ ಬರೆಯಿರಿ

ವ್ಯಕ್ತಿಯ ಭಾವನಾತ್ಮಕ ಮತ್ತು ಮಾನಸಿಕ ಯೋಗಕ್ಷೇಮವನ್ನು ವಿವರಿಸಲು ಮಾನಸಿಕ ಆರೋಗ್ಯವು ಒಂದು ಪ್ರಮುಖ ಪದವಾಗಿದೆ. ದೈಹಿಕ ಆರೋಗ್ಯದಂತೆಯೇ ಜೀವನದ ಪ್ರತಿಯೊಂದು ಹಂತದಲ್ಲೂ ಮಾನಸಿಕ ಆರೋಗ್ಯವು ಮುಖ್ಯವಾಗಿದೆ. ಮಗುವಿನ ಮಾನಸಿಕ ಆರೋಗ್ಯಕ್ಕೆ ಅಡಿಪಾಯವನ್ನು ಜೀವನದ ಮೊದಲ ಕೆಲವು ವರ್ಷಗಳಲ್ಲಿ ಹಾಕಲಾಗುತ್ತದೆ. ಕುಟುಂಬದ ಡೈನಾಮಿಕ್ಸ್, ಸಾಮಾಜಿಕ ಪರಿಸರ ಮತ್ತು ಹಿಂಸೆಗೆ ಒಡ್ಡಿಕೊಳ್ಳುವುದು ಸೇರಿದಂತೆ ಹಲವು ಅಂಶಗಳು ಮಗುವಿನ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರಬಹುದು. ಬಾಲ್ಯದಲ್ಲಿ, ಹಲವಾರು ವಿಷಯಗಳು ಮಗುವಿನ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಇವುಗಳಲ್ಲಿ ಆನುವಂಶಿಕ ಅಂಶಗಳು, ಪರಿಸರದ ಅಂಶಗಳು ಮತ್ತು ಒತ್ತಡ ಒಳಗೊಂಡಿರಬಹುದು. ಮಾನಸಿಕ ಆರೋಗ್ಯ ಸಮಸ್ಯೆಗಳಿರುವ ಮಕ್ಕಳಿಗೆ ಆರಂಭಿಕ ರೋಗನಿರ್ಣಯಗಳನ್ನು ಪರಿಶೀಲಿಸದೆ ಬಿಟ್ಟರೆ, ಮಾನಸಿಕ ಆರೋಗ್ಯ ಸಮಸ್ಯೆಗಳು ಮಗುವಿನ ಬೆಳವಣಿಗೆ, ಶಿಕ್ಷಣ ಮತ್ತು ಸಂಬಂಧಗಳ ಮೇಲೆ ಆಳವಾದ ಪರಿಣಾಮ ಬೀರುತ್ತವೆ. ಭಾರತದಲ್ಲಿ ಹೆಚ್ಚಿನ ಪೋಷಕರು

ತಮ್ಮ ಮಗುವಿನ ದೈಹಿಕ ಯೋಗಕ್ಷೇಮವನ್ನು ನೋಡಿಕೊಳ್ಳುವಲ್ಲಿ ಸಾಕಷ್ಟು ಶ್ರದ್ಧೆ ಹೊಂದಿದ್ದಾರೆ. ಅವರು ತಮ್ಮ ಚಿಕ್ಕ ಮಕ್ಕಳಿಗೆ ಪೌಷ್ಟಿಕ ಆಹಾರ, ಸರಿಯಾದ ಬಟ್ಟೆ, ಸ್ನೇಹಶೀಲ ಮನೆ ಮತ್ತು ಇತರ ಸೌಕರ್ಯಗಳನ್ನು ಒದಗಿಸಿ ಅವರನ್ನು ಆರೋಗ್ಯಕರವಾಗಿ ಮತ್ತು ಸಂತೋಷದಿಂದ ಇರಿಸುತ್ತಾರೆ. ಆದಾಗ್ಯೂ ದೈಹಿಕ ಯೋಗಕ್ಷೇಮವು ಮಗುವಿನ ಆರೋಗ್ಯ ಮತ್ತು ಸಂತೋಷದ ಏಕೈಕ ನಿರ್ಣಾಯಕವಲ್ಲ. ಅವರ ಭಾವನಾತ್ಮಕ ಯೋಗಕ್ಷೇಮವು ಹೊಸ ವಿಷಯಗಳನ್ನು ಕಲಿಯಲು, ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಮತ್ತು ಶೈಕ್ಷಣಿಕವಾಗಿ ಉತ್ತಮವಾಗಿ ಕಾರ್ಯನಿರ್ವಹಿಸಲು ಅವರಿಗೆ ಸಹಾಯ ಮಾಡುವಲ್ಲಿ ಅಷ್ಟೇ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಅದಕ್ಕಿಂತ ಹೆಚ್ಚಾಗಿ, ಭಾವನಾತ್ಮಕವಾಗಿ ಆರೋಗ್ಯಕರ ಮಗು ಭಾವನಾತ್ಮಕವಾಗಿ ಆರೋಗ್ಯಕರ ವಯಸ್ಕನಾಗಿ ಬೆಳೆಯುವ ಸಾಧ್ಯತೆಯಿದೆ. ಅವರು ಸಾಮರ್ಥ್ಯ, ಆತ್ಮವಿಶ್ವಾಸ ಮತ್ತು ಜೀವನದ ವಿವಿಧ ಕ್ಷೇತ್ರಗಳಲ್ಲಿ ಯಶಸ್ವಿಯಾಗುತ್ತಾರೆ.

* * *

# ನಾ ಕಂಡ ಆಸ್ಟ್ರೇಲಿಯಾ

ಡಾ.ಕೆ ಕಮಲಾಕ್ಷ



[ಆಸ್ಟ್ರೇಲಿಯಾದ ಜನರ ಮಾನವ ಪ್ರೀತಿ, ಸಾಮಾಜಿಕ, ಸಾಂಸ್ಕೃತಿಕ, ವ್ಯಾವಹಾರಿಕ ಬದುಕಿನ ರೀತಿ, ತಮಗೆ ಅಗತ್ಯವಿಲ್ಲದ, ಆದರೆ ಇತರರು ಬಳಸಬಹುದಾದ ದಿನಬಳಕೆಯ ವಸ್ತುಗಳ ವಿಲೇವಾರಿ ವಿಧಾನ, ಬದುಕಿನ ದೈನಂದಿನ ಸೂಕ್ಷ್ಮತೆ- ಶುಚಿತ್ವ, ಜನರ ಶಿಸ್ತುಬದ್ಧ ಜೀವನದ ನೆಲೆಗಟ್ಟು ಇತ್ಯಾದಿಗಳನ್ನು ಈ ಪ್ರವಾಸ ಕಥನದಲ್ಲಿ ಸೊಗಸಾಗಿ ನಿರೂಪಿಸಲಾಗಿದೆ.]

ಇಲ್ಲಿನ ಜನ ಸಜ್ಜನರು. ತಾವಾಯಿತು ತಮ್ಮ ಪಾಡಾಯಿತು. ಅಂತರ್ಮುಖಿಗಳು, ಹಸನ್ಮುಖಿಗಳು. ಐಹಿಕ ಬದುಕನ್ನು ಸುಖವಾಗಿ ಬದುಕುವುದು ಹೇಗೆ? ಎನ್ನುವುದೇ 'ಅಸ್ಸಿ' ಮನಸ್ಸು ಇರಬಹುದೇನೋ! ಶುಚಿ-ರುಚಿ, ಅಚ್ಚು ಕಟ್ಟುತನ, ಶಿಸ್ತುವ್ಯವಸ್ಥೆ, ಸುಗಮ, ಶಾಂತ ಬದುಕು ಇವೇ ಅವರ ಮೂಲಮಂತ್ರವಿದ್ದಾವು!

ವಿರಳರಾಗಿದ್ದ ಮೂಲನಿವಾಸಿಗಳ ಭೂಖಂಡಕ್ಕೆ ಹದಿನೆಂಟನೆಯ ಶತಮಾನ ಮೊದಲ್ಗೊಂಡು ಯುರೋಪ್, ಏಷ್ಯಾಖಂಡಗಳ ಜನ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಕಾರಣಗಳಿಗೆ ಬಂದವರು. ಕ್ಯಾಪ್ಟನ್ ಕುಕ್ ನ ಕಾರಣವಾಗಿ ಒಂದಷ್ಟು ಕಾಲ ಬ್ರಿಟಿಷ್ ವಸಾಹತುಶಾಹಿಗಳ ಪ್ರಾಬಲ್ಯವಿತ್ತು. ಅಪರಾಧಿಗಳು, ಯುದ್ಧ ಕೈದಿಗಳು, ಗಣಿಕಾರ್ಮಿಕರು, ಗುಲಾಮರು, ಪಶುಪಾಲಕರು, ಕುಶಲಕರ್ಮಿಗಳು, ಕಾರ್ಖಾನೆಗಳ ಕೂಲಿಗಳು ಇವರಿಂದ ಎದ್ದು ನಿಲ್ಲಲು ಆರಂಭಿಸಿದೆ ಈ ದೇಶ. ಇಂದು ವಿಶ್ವದ ಭೂಪಟದಲ್ಲಿ ಗಮನಾರ್ಹವಾದ ಭೂಖಂಡವೇ ಆಸ್ಟ್ರೇಲಿಯಾ.

ಪೆಮುಲ್‌ವೈಯಲ್ಲಿ ನಾನಿದ್ದ ಮನೆಯ ಸುತ್ತಮುತ್ತಲ ಬೆರಳೆಣಿಕೆಯ ಮಂದಿಯನ್ನಷ್ಟೇ ನನಗೆ ಕಿರುಪರಿಚಯ. ಶ್ರೀಲಂಕನ್ ದಂಪತಿಗಳು, ಮಲೇಶಿಯನ್ ದಂಪತಿಗಳು, ಒಬ್ಬ ಫಿಜಿಯನ್ ಹಿರಿಯಣ್ಣ ವಿದ್ಯಾನಂದ ಪ್ರಸಾದ್. ಅವರಿಗೆ ಎಂಬತ್ತಾರು ವರ್ಷ. ಮುಂಜಾನೆ ನಿಧಾನವಾಗಿ ಒಂದಿಷ್ಟು ದೂರ ವಾಕಿಂಗ್. ನಾಲ್ಕೈದು ಬಾರಿ ಅವರೊಂದಿಗೆ ಮಾತಾಡಿದ್ದೇನೆ. ಅವರ ಹಿರಿಯರು ಭಾರತದ ಗೋರಖ್ ಪುರದವರಂತೆ. ಇವರ ಹುಟ್ಟು, ಬೆಳವಣಿಗೆ, ಉದ್ಯೋಗ ಫಿಜಿಯಲ್ಲಿ. ಇವರ ಇಬ್ಬರು ಮಕ್ಕಳಲ್ಲಿ ಹಿರಿಯಾತ ನಮ್ಮ ನೆರೆಕರೆ. ಅವರ ಜೊತೆ ಇರುವುದು ವಿದ್ಯಾನಂದ್. ತುಂಬ ಮಾಗಿದ ಜೀವ. ನನ್ನಲ್ಲಿ ಯಾಕೋ ಅವರಿಗೆ ಸಹೋದರ ವಾತ್ಸಲ್ಯ. ತುಂಬಾ ಪ್ರೀತಿಯಿಂದ ಬದುಕಿನ ನಂಬಿಕೆಗಳ ಬಗ್ಗೆ, ಮೌಲ್ಯಗಳ ಬಗೆಗೆ ಮಾತನಾಡಿದ್ದಾರೆ. ಇಲ್ಲೇ ಕೆಲವು ಭಾರತೀಯರ ಮನೆಗಳೂ ಇವೆ. ಆದರೆ ಪರಸ್ಪರ ಸಂಪರ್ಕ, ಮಾತುಕತೆಗಳು ಕಡಿಮೆಯೇ. ವಾಕಿಂಗ್ ಹೋಗುವ ಕೆಲವರ ಮುಖಪರಿಚಯವಿದೆ. ಪರಸ್ಪರ ಶುಭ ಹಾರೈಕೆ ವಿನಿಮಯವಿದೆ, ಅಷ್ಟೇ. ಅವರ ಹಾರೈಕೆಯ ಸಂದರ್ಭದ ಮುಖಭಾವ ಮತ್ತು ದೇಹಭಾಷೆಗಳಲ್ಲಿ ಕಾಪಟ್ಯ ಕಂಡಿಲ್ಲ. ನಿರ್ಮಲ ಹೃದಯಿಗಳು.

ಒಂದು ಒಳ್ಳೆಯ ಸೆಕೆಂಡ್ ಹ್ಯಾಂಡ್ ಪುಸ್ತಕಗಳ ಅಂಗಡಿಯ ವಿವರವನ್ನು ವಿದ್ಯಾನಂದ ತಿಳಿಸಿಕೊಟ್ಟ ಪ್ರಕಾರ ನಾವು ಅಲ್ಲಿಗೆ ಹೋಗಿ ಪುಸ್ತಕಗಳನ್ನು ಖರೀದಿಸಿ ತಂದೆವು. ಅವು ಆಸ್ಟ್ರೇಲಿಯಾಕ್ಕೆ ಸಂಬಂಧಿಸಿದುದು. ಇಲ್ಲಿನ ಶಿಷ್ಟ ನಡವಳಿಕೆಗಳ ಬಗ್ಗೆ ಎರಡು ಮಾತು - ನಮ್ಮನ್ನು ಗಮನಿಸಿ, ಮುಖವೆತ್ತಿ ನೋಡುವ ವ್ಯಕ್ತಿಗಳಿಗೆ ಶುಭ ಹಾರೈಕೆಯ ಯಾವುದಾದರೂ ಒಂದು ಮಾತು ಹೇಳಬೇಕು. ಹಾಯ್ /ಹಾಯ್ ಮೇಟ್/ ಗುಡ್ ಮಾರ್ನಿಂಗ್/ ಗುಡ್ ಡೇ /ಹೆಲ್ಲೋ/ ಹೌ ಆರ್ ಯು? ಯಾವುದೂ ಆಗಬಹುದು. ಹಾಗೊಂದು ಹಾರೈಕೆಯ ಶಿಷ್ಟಾಚಾರವಿಲ್ಲದವರು ಯೋಗ್ಯರಲ್ಲವೆಂದೇ ಪರಿಗಣಿಸುತ್ತಾರಂತೆ. ಇದು ವಿದ್ಯಾನಂದಣ್ಣ ನನಗೆ ಹೇಳಿದ್ದು. ಅವರ ಫಿಜಿಯಲ್ಲಿ ಹಾಗಂತೆ. ನಿರ್ಮಲವಾದ ನಗು ಅಥವಾ ಮುಖಚರ್ಯೆಯ ಮೂಲಕ ಹಾರೈಕೆಗೆ ಇಲ್ಲಿನ ಸ್ತ್ರೀ ಪುರುಷರು ಪ್ರತಿಕ್ರಿಯೆ ತೋರುವುದು ನನ್ನ ಅನುಭವಕ್ಕೆ ಬಂದಿದೆ. ಕರ್ಣಶಕ್ತಿಯನ್ನು ನಿಷ್ಕ್ರಿಯಗೊಳಿಸುವ ಯಂತ್ರ ಅಳವಡಿಸಿಕೊಂಡವರಾಗಲಿ ಕರ್ತಾರನ ಸೃಷ್ಟಿಯಲ್ಲಿ ತಾವೇ ಅತ್ಯುತ್ಕೃಷ್ಟರೆಂಬ ಹುಂಬ ಜಂಭ ತಲೆಗಡರಿದವರಾಗಲಿ ಪ್ರತಿಕ್ರಿಯೆ ತೋರುವುದಿಲ್ಲ. ಇನ್ನೊಂದು ಸಂಗತಿ ಅಪರಿಚಿತರನ್ನು, ಭಿನ್ನಚಹರೆಯವರನ್ನು, ವಿಚಿತ್ರವೆಂದು ನಮಗನ್ನಿಸುವ ವೇಷಭೂಷಣದವರನ್ನು ಕಂಡರೆ ಅವರನ್ನು ವಿಚಿತ್ರ ಕುತೂಹಲದಿಂದ ಅಡಿಯಿಂದ ಮುಡಿಯವರೆಗೆ ಗಮನಿಸುವುದು ಶಿಷ್ಟಾಚಾರವಲ್ಲ. ಮನೆಗಳ ಒಳಗಾಗಲಿ, ಹೊರಗಾಗಲಿ, ಮಾತಿನಿಂದಾಗಲಿ, ಕೃತಿಯಿಂದಾಗಲಿ ದೊಡ್ಡದನಿಯಲ್ಲಿ ಜಗಳಾಡುವುದಾಗಲಿ, ಹೊಡೆದಾಡುವುದಾಗಲಿ ಸಲ್ಲದು. ಮಕ್ಕಳನ್ನೂ ಕೂಡ ಹೆತ್ತವರು, ಅಧ್ಯಾಪಕರು ದೈಹಿಕವಾಗಿ ದಂಡಿಸುವಂತಿಲ್ಲ. ವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಕೂಡಾ ಪರಸ್ಪರ ಬೈದಾಡುವ ಹೊಡೆದಾಡುವ ಸ್ವಾತಂತ್ರ್ಯವಿಲ್ಲ. ಹಾಗೇನಾದರೂ ನಡೆದರೆ ಹೆತ್ತವರು ಒಳ್ಳೆಯ ಮೊತ್ತದ ದಂಡಕ್ಕೆ

ಈಡಾಗುತ್ತಾರೆ. ದೊಡ್ಡ ಮೊತ್ತದ ದಂಡ ವಿಧಿಸುವುದು ಇಲ್ಲಿನ ಆಡಳಿತದ ಒಂದು ಪ್ರಬಲ ಅಸ್ತ್ರವೇ ಇರಬೇಕು. ರಸ್ತೆ ನಿಯಮಗಳು, ಶುಚಿತ್ವ ಕಾನೂನುಗಳ ಉಲ್ಲಂಘನೆಯ ವಿಚಾರದಲ್ಲೂ ಈ ಉಪಾಯದಿಂದಲೇ ತಪ್ಪಿತಸ್ಥರಿಗೆ ಬಿಸಿ ಮುಟ್ಟಿಸುತ್ತಾರಂತೆ. ಪ್ರತಿ ಮನೆಗಳ ಮುಂದೆ ಅಂಚೆ ಪೆಟ್ಟಿಗೆಗಳನ್ನು ಇರಿಸುತ್ತಾರೆ. ಅದರಲ್ಲಿ ಜಾಹೀರಾತುಗಳು, ನಿರ್ದಿಷ್ಟವಾಗಿ ವ್ಯಕ್ತಿಗಳಿಗೆ ಸಂಬಂಧಿಸಿದ ಪ್ರಕಟಣೆಗಳು ಇತ್ಯಾದಿಗಳನ್ನು ಹಾಕಬಾರದು. ಆ ಅಂಚೆ ಪೆಟ್ಟಿಗೆಗಳಲ್ಲೆ 'NO JUNK MAIL PLEASE ' ಎಂಬ ವಿನಂತಿ ಇರುತ್ತದೆ.

ಹಿರಿಯ ತಲೆಮಾರಿನ ಜನಕ್ಕೆ ಪರಸ್ಪರ ಪರಿಚಯ ಮಾಡಿಕೊಳ್ಳುವ, ಕ್ಷೇಮ ವಿನಿಮಯ ಮಾಡುವ ಸ್ವಭಾವ ಉಳಿದುಕೊಂಡಿದೆ. ಮಧ್ಯ ವಯಸ್ಕರು, ಯುವಜನರು ಮೊಬೈಲಲ್ಲೆ ಮೂಜಗ ಕಾಣುವವರು. ಕೆಲವರು ವಾಕಿಂಗ್ ಮಾಡುತ್ತಿರುವಾಗಲೇ ಕಪ್ ನಲ್ಲಿ ಹಾಕಿದ ಪಾನೀಯಗಳನ್ನು ಕುಡಿಯುತ್ತ ಸಾಗುವವರು, ಕುಡಿಯುತ್ತಾ ಸಾಗಿ ವಾಕಿಂಗ್ ಮಾಡುವವರು. ವಾಕಿಂಗ್ ಸಂದರ್ಭದಲ್ಲಿ ಮೊಬೈಲ್, ಪಾನೀಯ, ನಾಯಿಯ ಸಂಕಲೆ ಇವುಗಳಲ್ಲಿ ಯಾವುದಾದರೂ ಎರಡು ಹೆಚ್ಚಿನವರ ಕೈಯಲ್ಲಿರುತ್ತವೆ. ಇಲ್ಲಿನ ಹೆಚ್ಚಿನ ಜನ ಸುಂದರ ದೃಢಕಾಯದವರು. ತರುಣಿಯರಲ್ಲಿ ಕೆಲವರು ಸ್ವಲ್ಪ ಹೆಚ್ಚು ಶೋಕಿ ಜೀವಿಗಳು. ಕನಿಷ್ಠ ಬಟ್ಟೆಯಲ್ಲಿ ತಮ್ಮ ಸೌಂದರ್ಯವನ್ನು ಹೊಮ್ಮಿಸುವುದರಲ್ಲಿ ಅವರಿಗೆ ಹೆಮ್ಮೆ. ಅವರು ಶ್ವಾನ, ಮೊಬೈಲ್ ಹಸ್ತೆಯರು .






ಇಲ್ಲಿನ ಜನ ತಿಂಡಿತಿನಿಸುಪ್ರಿಯರು. ದೇಶಿ ವಿದೇಶಿ ತಿಂಡಿತಿನಿಸುಗಳು ಲಭ್ಯ. ಜತೆಗೆ ಭಾರತೀಯ ಆಹಾರಗಳು. ಮತ್ಸ್ಯ - ಮಾಂಸಾಹಾರಿ ಹೋಟೆಲುಗಳು ಇವೆ! ಅಡ್ಯಾರ್ ಆನಂದ ಭವನ ಕೂಡ ಇದೆ. ಎಲ್ಲ ಕಡೆ ಭಾರೀ ಜನಸಂದಣಿ. ಒಂದು ರುಚಿಕಟ್ಟಾದ ಪಾನಿಪುರಿ ಅಂಗಡಿಯ ಮುಂದೆ ಟೋಕನ್ ತೆಗೆದು ಕೂಡ ಗಂಟೆಗಟ್ಟಲೆ ಕಾದು ಕೊನೆಗೂ ಪಾನಿಪುರಿ ತಿಂದೇ ಬಂದ ಛಲ ನಮ್ಮದು. ಪಾರಮಟ್ಟದ ಆನಂದ ಭವನದಲ್ಲೂ ಹಾಗೆಯೇ. ಪಾರಮಟ್ಟದ ಹ್ಯಾರಿಸ್ ಪಾರ್ಕಿನ ಆಸುಪಾಸಿನಲ್ಲಿ ಮೂರು ನಾಲ್ಕು ಬೀದಿಗಳ ತುಂಬ ಆಸೇತು

ಹಿಮಾಚಲ ಪರ್ಯಂತದ ಜಿಹ್ವಾಚಪಲರನ್ನು ತಣಿಸಲು ಬೇಕಾದ ಹೋಟೆಲ್‌ಗಳಿವೆ, ಆಯ್ಕೆ ನಿಮ್ಮದು. ಎಲ್ಲಾ ಕಡೆ ಇದ್ದ ನೂಕುನುಗ್ಗಲು ಜನರ ಜಿಹ್ವಾಚಾಪಲ್ಯಕ್ಕೆ ಸಾಕ್ಷಿ. ಅಂತೆಯೇ ಅಲ್ಲೂ ಜನದಟ್ಟಣೆ. ಪಾನೀಯಗಳ ವೈವಿಧ್ಯಕ್ಕೂ ಏನೂ ಕೊರತೆಯಿಲ್ಲ. ಮದ್ಯ ಪಾನೀಯಗಳ ಲಭ್ಯತೆಗೂ ಯಾವುದೇ ಅಡ್ಡಿಯಿಲ್ಲ. ಮೈಮನಗಳನ್ನು ಆಕರ್ಷಿಸಿ ಮೋಹವೆಂಬ 'ಅರಿ'ಯನ್ನು ಪೂರ್ಣ ಪ್ರಮಾಣದಲ್ಲಿ ಉದ್ದೀಪಿಸಿ ನಿಮ್ಮ ಧನಲಕ್ಷ್ಮಿಯನ್ನು ಅಪಹರಿಸುವ ಸನ್ಯಾಸಿ ರಾವಣರಂಥ ಮಾಲ್ ಗಳು. ಮೂರು, ಐದು, ಏಳು ಉಪ್ಪರಿಗೆಗಳ ವಿಶಾಲ ಮಾಲ್‌ಗಳಿಗೆ ಪ್ರವೇಶಿಸಿದರೆ ಆ ಮೇನಕೆ ನಿಮ್ಮ ವ್ರತಭಂಗ ಮಾಡೋದು ಶತಸಿದ್ಧ. ಉದಾಹರಣೆಗೆ ಪಾರಮಟ್ಟದ ವೆಸ್ಟ್ ಫೀಲ್ಡ್ ಮಾಲ್. ಇಲ್ಲಿನ ನರನಾರಿ ಸ್ವರೂಪದರ್ಶನಕ್ಕೆ ಮಾಲ್ ಗಳು ಕೂಡ ಸೂಕ್ತ ದರ್ಪಣಗಳು. ಅಂಥ ಮಾಲ್‌ಗಳಲ್ಲಿ ನನ್ನಂಥ ಹಳ್ಳಿಗ ದಂಗೋ ದಂಗು! ಅಲ್ಲಿನ ವ್ಯವಸ್ಥೆ -ಅಚ್ಚುಕಟ್ಟುತನ -ವಿಸ್ತಾರ -ವೈವಿಧ್ಯಗಳಿಗೆ ಶರಣೋ ಶರಣು!

ಈ ಪ್ರದೇಶದಲ್ಲಿ ಭಾರತೀಯ ಆಸ್ತಿಕರಿಗೆ ಪರಿಚಿತವಾದ ಶ್ರೀ ಮುರುಗನ್ ದೇವಸ್ಥಾನ ಮತ್ತು ತಿರುಪತಿ ವೆಂಕಟೇಶ್ವರ ದೇವಾಲಯಗಳ ಉಪಾಹಾರ ಗೃಹಗಳಲ್ಲೂ ಹಲವಾರು ಬಗೆಯ ತಿಂಡಿ, ಪಾನೀಯಗಳಿಗೆ ತುಂಬ ಜನದಟ್ಟಣೆ. ದೇವಾಲಯಗಳ ವತಿಯಿಂದ ಭೋಜನ ಇಲ್ಲ. ಆನ್ ಲೈನ್ ಬುಕ್ಕಿಂಗ್ ಮೊದಲೇ ಮಾಡಿ ಅಲ್ಲಿ ಹೋಗಿ ತಾಸುಗಟ್ಟಲೆ ಕ್ಯೂ ನಿಂತು ಹಾಗೇ ಅಲ್ಲಿ ಹೊರಸುತ್ತಿನಲ್ಲಿ ಹಾಕಿರುವ ಮೇಜುಕುರ್ಚಿಗಳಲ್ಲಿ ಕುಳಿತು ಉಪಾಹಾರವನ್ನು ಸವಿಯಬಹುದು. ಕೆಲವೊಮ್ಮೆ ಅಲ್ಲಿಂದ ಪ್ಯಾಕ್ ಮಾಡಿಸಿಕೊಂಡು ತಂದು ನಿಮಗೆ ಇಷ್ಟವಿದ್ದಲ್ಲಿ ತಿನ್ನಬಹುದು. ಇಷ್ಟು ಸಾಲದ್ದಕ್ಕೆ ಟಿವಿ ಚಾನಲ್ ಗಳಲ್ಲಿ ತಿಂಡಿ ತಿನಿಸು ತಯಾರಿಯ ಬಗೆಗೆ ಡೆಮೋಗಳು ಇರುತ್ತವೆ; ನಾನಾ ದೇಶಗಳ ನಾನಾ ತಿಂಡಿ ತಿನಿಸು, ಸಿಹಿತಿಂಡಿ ವೈವಿಧ್ಯಗಳು, ಕ್ಷೀರೋತ್ಪನ್ನ ತಿನಿಸುಗಳ ತಯಾರಿಯ ಮಾಹಿತಿಗಳಿರುತ್ತವೆ. ಪರಮ ಯೋಗಿಗಂ ಇಂತುಟು ಜಿಹ್ವಾಮೋಹ ತರಿಸುವ ತಿಂಡಿ ತಿನಿಸುಗಳು!

ಇಲ್ಲಿನ ಮಾಲ್ ಗಳು - ಮಾರ್ಕೆಟ್ ಗಳಲ್ಲಿ ಹಾಲು, ಮೊಸರು, ತುಪ್ಪ, ಜೇನುತುಪ್ಪ, ಹಣ್ಣು -ತರಕಾರಿಗಳು ಯಥೇಷ್ಟ ಲಭ್ಯ. ನಮ್ಮಲ್ಲಿಗೆ ಹೋಲಿಸಿದರೆ ದುಬಾರೀ ಅಷ್ಟೆ. ಹಣ್ಣು, ತರಕಾರಿಗಳನ್ನು ಬೆಳೆಯುವ ಕೆಲವು ಫಾರ್ಮ್ ಗಳಲ್ಲಿ ಕೂಡ ಅವನ್ನು ಚಿಲ್ಲರೆಯಾಗಿಯೂ ಮಾರಾಟ ಮಾಡುತ್ತಾರೆ. ಹಾಗೆ ತರಕಾರಿಗಳನ್ನು ಬೆಳೆಸುವ ಒಂದೆರಡು ಬೃಹತ್ ಫಾರ್ಮ್‌ಗಳಿಗೆ ಹೋಗಿ ಅವನ್ನು ಬೆಳೆಸುವ ವ್ಯವಸ್ಥೆಗಳನ್ನು, ಅಲ್ಲಿನ ವಿವಿಧ ಬೆಳೆಗಳನ್ನು ಕಂಡುಬಂದಿದ್ದೇವೆ. ವ್ಯವಸ್ಥಿತವಾಗಿ ತರಕಾರಿಗಳನ್ನು ಚೀಲಗಳಲ್ಲಿ ಬೆಳೆಸುತ್ತಾರೆ. ಅಗತ್ಯ ಪ್ರಮಾಣದ ನೀರನ್ನು ಪೈಪುಗಳಲ್ಲಿ ಅವಕ್ಕೆ ಒದಗಿಸುತ್ತಾರೆ. ಮಳೆ, ಗಾಳಿ, ಬಿಸಿಲು ಅಗತ್ಯದಷ್ಟೇ ಲಭ್ಯವಾಗುವಂತೆ ಕಮಾನು ಮಾಡುಗಳು(ಮೀಟರುಗಟ್ಟಲೆ ಉದ್ದಕ್ಕೆ) ಅವನ್ನು ರಕ್ಷಿಸುತ್ತವೆ. ನೇರವಾಗಿ ನೆಲದಲ್ಲಿ ಬೆಳೆಸುವ ಕ್ರಮ ಕೂಡ ಇದೆ. ಇಲ್ಲಿನವರಿಗೆ ವೈನ್ ತುಂಬಾ ಇಷ್ಟದ ಪಾನೀಯ. ನಾನಾ ತರದ ವೈನ್‌ಗಳ ತಯಾರಿಗೆ ಅಗತ್ಯವಾದ ಹಣ್ಣಿನ ತೋಟಗಳು ಇಲ್ಲಿವೆ. ಶತಮಾನಗಳಿಂದ ಈ ಉದ್ಯಮ ನಡೆಯುತ್ತಿದೆ.

ಒಂದು ಗಮನಾರ್ಹ ವಿಚಾರವೆಂದರೆ ನಮ್ಮಲ್ಲಿನ ಹಾಗೆ ಇಲ್ಲಿ ಎಲ್ಲೆಂದರಲ್ಲಿ ಅಂಗಡಿ ಹೋಟೆಲುಗಳಿಲ್ಲ! ರಸ್ತೆ ಬದಿಗಳಲ್ಲಿ ಎಲ್ಲೆಂದರಲ್ಲಿ, ಎಬಡಾ ತಬಡಾ ಅಂಗಡಿ, ಹೋಟೆಲ್, ಕಟ್ಲೇರಿ, ಬೀಡಾಬೀಡಿ ಲಭ್ಯವಿಲ್ಲ. ಎಲ್ಲವೂ ಪೂರ್ವ ನಿಗದಿತ ಪೂರ್ವಾನುಮತ ಕ್ರಮದಲ್ಲಿ ಮಾತ್ರ. ಇಲ್ಲಿ ಗೂಡಂಗಡಿ, ತಟ್ಟೆ ಕಡಗಳಿಲ್ಲ.

ಶುಚಿತ್ವಕ್ಕೆ ತುಂಬಾ ಪ್ರಾಧಾನ್ಯ ಕೊಡುವ ಜನ ಇವರು. ವೈಯಕ್ತಿಕದಿಂದ ತೊಡಗಿ ಸಾರ್ವಜನಿಕದವರೆಗೆ ಎಲ್ಲೆಡೆ ಈ ಅಂಶ ಎದ್ದು ಕಾಣುತ್ತದೆ. ಮಕ್ಕಳಿಂದ ಆರಂಭಿಸಿ ಕಡುವೃದ್ಧರವರೆಗೆ ಕೈಕಾಲು ಮುಖಗಳಾಗಲಿ, ಧರಿಸುವ ಬಟ್ಟೆ ಬರೆಗಳಾಗಲಿ ಸ್ವಚ್ಛ ನಿರ್ಮಲ. ಅಂಗಳ ಹಿತ್ತಿಲುಗಳೂ ಹಾಗೆಯೇ. ಅನಗತ್ಯ ವಸ್ತುಗಳನ್ನು ಎಲ್ಲೆಂದರಲ್ಲಿ ಎಸೆಯುವಂತಿಲ್ಲ. ಪ್ರತಿ ಮನೆಗಳಲ್ಲಿ ಅವುಗಳನ್ನು ವಿಂಗಡಿಸಿ ಪ್ಲಾಸ್ಟಿಕ್‌ನ ದೊಡ್ಡ ದೊಡ್ಡ ಬಾಕ್ಸ್‌ಗಳಲ್ಲಿ ಸಂಗ್ರಹಿಸಿ ವಾರದ ನಿರ್ದಿಷ್ಟ ದಿನ ರಸ್ತೆ ಬದಿಯಲ್ಲಿ ಇಡಬೇಕು. ಸ್ಥಳೀಯ ಆಡಳಿತದ ಬೃಹತ್ ಲಾರಿಗಳು ಬಂದು ಅವನ್ನು ಖಾಲಿ ಮಾಡುತ್ತವೆ. ಡಬ್ಬಗಳನ್ನು ಎತ್ತಿ ಉಲ್ಟಾ ಮಾಡಿ ಖಾಲಿ ಡಬ್ಬಗಳನ್ನು ಮೊದಲಿನ ಜಾಗಗಳಲ್ಲಿ ಇಡುತ್ತವೆ. ಲಾರಿಗೆ ಅಳವಡಿಸಿದ ಸ್ವಯಂ ಚಾಲಿತ ಯಂತ್ರಗಳ ಮೂಲಕ ಕಸಕಡ್ಡಿಗಳನ್ನು ನಿರ್ದಿಷ್ಟ ತ್ಯಾಜ್ಯ ನಿರ್ವಹಣಾ ಕೇಂದ್ರಗಳಲ್ಲಿ ಸಂಗ್ರಹಿಸಿ ಸಂಸ್ಕರಿಸಲಾಗುತ್ತದೆ, ಶಾಖೋತ್ಪನ್ನ ವಿದ್ಯುತ್ ಕೂಡ ಹಾಗೆ ಅಲ್ಪ ಪ್ರಮಾಣದಲ್ಲಿ ತಯಾರಾಗುತ್ತದಂತೆ. ಕಸದ ಡಬ್ಬಗಳನ್ನು ಲಾರಿಗಳಿಗೆ ಎತ್ತಿಕೊಂಡು ಖಾಲಿ ಮಾಡುವ ವ್ಯವಸ್ಥೆ ಕಣ್ಮನಗಳಿಗೆ ಖುಷಿಕೊಡುವ ಸಂಗತಿ.

ಪುಟ್ಟ ಅಡ್ಡರಸ್ತೆಗಳಿಂದ ತೊಡಗಿ ಮಹಾ ಹೆದ್ದಾರಿಗಳವರೆಗೂ ರಸ್ತೆ ಬದಿಗಳಲ್ಲಿ ಎಲ್ಲೂ ಕಸಕಡ್ಡಿ, ಜೈವಿಕ ತ್ಯಾಜ್ಯಗಳು - ಇತ್ಯಾದಿಗಳು ಕಾಣಸಿಗುವುದಿಲ್ಲ. ಪೋಲೀಸರ ಮತ್ತು ಕ್ಯಾಮರಾ ಕಣ್ಣು ಸದಾ ಜಾಗೃತ. ಹಾಗೇನಾದರೂ ಮಾಡಿದರೆ ಛೀಮಾರಿ ಮತ್ತು ಒಳ್ಳೆಯ ಮೊತ್ತದ ದಂಡ ಖಾತ್ರಿ. ಆಟದ ಮೈದಾನ, ಪಾರ್ಕ್, ಪ್ರವಾಸಿ ತಾಣಗಳು, ರೈಲ್ವೆ ಸ್ಟೇಷನುಗಳು ಮುಂತಾದೆಡೆ ಸಾರ್ವಜನಿಕ ಶೌಚಾಲಯಗಳಿರುತ್ತವೆ. ಅಲ್ಲೂ ಅಷ್ಟೆ, ಶುಚಿತ್ವವನ್ನು ಕಾಪಾಡಲಾಗುತ್ತದೆ. ನಮ್ಮ ಹಳ್ಳಿಗರ ಮಾತಿನಲ್ಲಿ ಹೇಳುವುದಾದರೆ ಅಲ್ಲಿ ಮಲಗಿಕೊಳ್ಳಬಹುದು ! ಅಷ್ಟು ಕ್ಲೀನ್!

ನಮಗೆ ಅಗತ್ಯವಿಲ್ಲದ ಆದರೆ ಮತ್ತಾರಿಗೂ ಉಪಯೋಗಿಸಬಹುದಾದ ಪೀಠೋಪಕರಣ, ಫ್ರಿಡ್ಜ್, ವಾಷಿಂಗ್ ಮೆಷಿನ್, ಲ್ಯಾಪ್ ಟಾಪ್ ಇತ್ಯಾದಿಗಳನ್ನು ನಾವು ನಮ್ಮ ಮನೆಯ ಹೊರಗಿನ ರಸ್ತೆಬದಿಯಲ್ಲಿ ಇಟ್ಟರೆ ಅದನ್ನು ಯಾರು ಬೇಕಾದರೂ ಉಚಿತವಾಗಿ ಒಯ್ಯಬಹುದು. ಉಪಯೋಗಾರ್ಹವಾದ ಬಟ್ಟೆಬರೆ, ಪಾದರಕ್ಷೆ, ಪುಸ್ತಕ ಇತ್ಯಾದಿಗಳನ್ನೂ ನಿರ್ದಿಷ್ಟ ಜಾಗಗಳಲ್ಲಿ ಅಳವಡಿಸಿರುವ ಪೆಟ್ಟಿಗೆಗಳಲ್ಲಿ ಇರಿಸಬಹುದು. ನಮ್ಮಲ್ಲಿನ ಕಸಹೆಕ್ಕುವ ಅಲೆಮಾರಿ ಜನಗಳು, ಗುಜರಿ ಸಂಗ್ರಹಕಾರರಿಗೇನಾದರೂ ಇಂತಹ ಅವಕಾಶ ಇರುವುದು ಗೊತ್ತಾದರೆ ಮುಗಿಬಿದ್ದಾರು.

ಆಸ್ಟ್ರೇಲಿಯಾದಲ್ಲಿ ಮಾಸತ್ರಯಗಳನ್ನು ಕಳೆದು ಅಲ್ಲಿನ ಜನರ ಶಿಸ್ತುಬದ್ಧ ಜೀವನಕ್ಕೆ ನಾನು ಮನಸ್ಸಿನಲ್ಲೇ ಹ್ಯಾಟ್ಸಾಪ್ ಹೇಳಿ ಅಲ್ಲಿಂದ ನಿರ್ಗಮಿಸಿದೆನು.

## ಲೇಖಕರ ಪರಿಚಯ



ಡಾ. ಕೆ. ಕಮಲಾಕ್ಷ ಅವರು ೧೯೫೨ ಜನವರಿ ೧೦ ರಂದು ಪಿ. ವಿಷ್ಣಯ್ಯ ಮತ್ತು ಸರಸ್ವತಿ ದಂಪತಿಗಳ ಸುಪುತ್ರರಾಗಿ ಮುಳಿಯಾರಿನಲ್ಲಿ ಜನಿಸಿದರು. ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಶಿಕ್ಷಣ ಪೂರೈಸಿದರು. ೧೯೮೦ ರಲ್ಲಿ ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇರಿ ೨೫ ವರ್ಷಗಳ ಕಾಲ ಸೇವೆ ಸಲ್ಲಿಸಿ ೨೦೦೫ರಲ್ಲಿ ನಿವೃತ್ತರಾದರು. ಸಾಹಿತ್ಯ ಅಧ್ಯಯನ, ಸಂಸ್ಕೃತಿ ಸಂಶೋಧನೆ, ಅನುವಾದ ಅವರ ಮುಖ್ಯ ಕ್ಷೇತ್ರ. ಬಾಲೆ ಪಿನವುಳ್ಳ ದೇವಪೂಂಜೆ (ತುಳುಪಾಡ್ದನ ಸಂಗ್ರಹ), ಕಂಡಿರೆ ಕಂಗಳ ಬೆಳಕ (ಲೇಖನಗಳು), ಅನುಸಂಧಾನ (ವಿಮರ್ಶಾಲೇಖನ), ಭಾರತ ಕಾವ್ಯೋಪಾಸಡಿ (ಅರುಣಾಬ್ಜನ ತುಳು ಭಾರತದ ಅರ್ಥ ಮತ್ತು ವ್ಯಾಖ್ಯಾನ), ಮಲಯಾಳಂನ ಮೂರು ನೀಳ್ಗಥೆಗಳು, ಕೇರಳದ ಜನಪದವೀರ ತಚ್ಚೋಳಿ ಒದೇನನ್, ಅಂಕಕಲಿಗಳ ವೀರಗಾಥೆ, ಭೂಮಿಯಿಂದ ಮೊಳೆತುಬಂದ ಪಾಟ್ಟ್ ಕಥೆಗಳು (ಅನುವಾದ ಸಾಹಿತ್ಯಗಳು) ಇವರ ಪ್ರಕಟಿತ ಕೃತಿಗಳು.

ಈ ಪ್ರವಾಸ ಕಥನವನ್ನು ಡಾ. ಕೆ. ಕಮಲಾಕ್ಷ ಅವರ 'ಆಸ್ಟ್ರೇಲಿಯಾದಲ್ಲಿ ಮಾಸತ್ರಯಗಳು' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಲೇಖಕರು ಪೆಮುಲ್ ವೈಯಲ್ಲಿನ ಜನರನ್ನು ನಿರ್ಮಲ ಹೃದಯಿಗಳು ಎನ್ನಲು ಕಾರಣವೇನು?
2. ಆಸ್ಟ್ರೇಲಿಯಾದಲ್ಲಿ ದೊಡ್ಡ ಮೊತ್ತದ ದಂಡವನ್ನು ಯಾವೆಲ್ಲ ಕಾರಣಗಳಿಗಾಗಿ ವಿಧಿಸಲಾಗುತ್ತದೆ?
3. ಪೆಮುಲ್ ವೈಯಲ್ಲಿನ ಜನರು ಯಾವುದಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡುತ್ತಾರೆ?
4. 'ಆಸ್ಟ್ರೇಲಿಯಾದ ಜನರು ತಿಂಡಿತಿನಿಸು ಪ್ರಿಯರು' ಎಂದು ಲೇಖಕರು ಹೇಳಲು ಕಾರಣವೇನು?
5. ಆಸ್ಟ್ರೇಲಿಯಾದಲ್ಲಿ ತ್ಯಾಜ್ಯ ವಸ್ತುಗಳ ಸಂಸ್ಕರಣೆ ಹೇಗೆ ನಡೆಯುತ್ತದೆ?

## ಘೋಷಣ ವಾಕ್ಯ ಬರೆಯಿರಿ

ಆರೋಗ್ಯ ಮತ್ತು ಶುಚಿತ್ವದ ಪ್ರಾಧಾನ್ಯವನ್ನು ತಿಳಿಸುವ ಎರಡು ಘೋಷಣ ವಾಕ್ಯಗಳನ್ನು ಬರೆಯಿರಿ.

## ವರದಿ ತಯಾರಿಸಿರಿ

ನಿಮ್ಮ ಶಾಲೆಯ ಹೆಲ್ತ್ ಕ್ಲಬ್ ಕೈಗೊಂಡ ಆರೋಗ್ಯ ಚಟುವಟಿಕೆಗಳ ಕುರಿತು ಒಂದು ವರದಿ ತಯಾರಿಸಿರಿ.

## ಪತ್ರ ಬರೆಯಿರಿ

ನೀವು ಕೈಗೊಂಡ ಯಾವುದಾದರೂ ಒಂದು ಪ್ರವಾಸದ ಅನುಭವಗಳನ್ನು ವಿವರಿಸುತ್ತಾ ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.

## ಸಿದ್ಧತಾ ಪಟ್ಟಿ ತಯಾರಿಸಿರಿ

ಒಂದು ಪ್ರವಾಸವನ್ನು ವ್ಯವಸ್ಥಿತವಾಗಿ ನಡೆಸಲು ಅಗತ್ಯವಾದ ಪೂರ್ವ ಸಿದ್ಧತೆಗಳ ಕುರಿತು ಒಂದು ಸಿದ್ಧತಾ ಪಟ್ಟಿ ತಯಾರಿಸಿರಿ.

## ಪ್ರಬಂಧ ಬರೆಯಿರಿ

ಗಾಂಧಿಜಯಂತಿಯ ಅಂಗವಾಗಿ ಶಾಲೆಯ ಸೇವನಾ ವಾರಾಚರಣೆಯ ಸಂದರ್ಭದಲ್ಲಿ ನಡೆಯುವ ವಿಚಾರಗೋಷ್ಠಿಯಲ್ಲಿ ಮಂಡಿಸಲು 'ಶುಚಿತ್ವದ ಮಹತ್ವ' ಎಂಬ ವಿಷಯದ ಕುರಿತು 'ನಾ ಕಂಡ ಆಸ್ಟ್ರೇಲಿಯಾ' ಪ್ರವಾಸ ಕಥನದ ಆಧಾರದಲ್ಲಿ ಪ್ರಬಂಧವೊಂದನ್ನು ಬರೆಯಿರಿ.

## ಸರಳ ವಾಕ್ಯಗಳಾಗಿ ಬರೆಯಿರಿ

ಕೆಳಗೆ ಕೊಡಲಾದ ಸಂಯುಕ್ತವಾಕ್ಯಗಳನ್ನು ಸರಳವಾಕ್ಯಗಳಾಗಿ ವಿಭಜಿಸಿ ಬರೆಯಿರಿ.

ಉದಾ : ಗಿರಿಯು ಅತಿಯಾಗಿ ತಿನ್ನುತ್ತಿದ್ದುದರಿಂದ ಅವನಿಗೆ ಅನಾರೋಗ್ಯ ಉಂಟಾಯಿತು.

ಗಿರಿಯು ಅತಿಯಾಗಿ ತಿನ್ನುತ್ತಿದ್ದನು. ಆದುದರಿಂದ ಅವನಿಗೆ ಅನಾರೋಗ್ಯ ಉಂಟಾಯಿತು.

* ನಾನು ಕಾಫಿ ಕುಡಿದ ಬಳಿಕ ಕೆಲಸವನ್ನು ಆರಂಭಿಸಿದೆನು.
* ಮಳೆಯು ಧೋ ಎಂದು ಸುರಿಯುತ್ತಿದ್ದರೂ ಮಕ್ಕಳು ಹೊರಗೆ ಆಟವಾಡುತ್ತಿದ್ದರು.
* ನಮ್ಮ ಪರಿಸರ ಶುದ್ಧವಾಗಿರುವುದರಿಂದ ನಾವು ಆರೋಗ್ಯಕರವಾಗಿ ಬದುಕಬಹುದು.

## ಸ್ಲೈಡ್ ತಯಾರಿಸಿರಿ

ಅಂತರ್‌ಜಾಲದ ಸಹಾಯದಿಂದ ಭಾರತದ ವಿವಿಧ ಪ್ರವಾಸಿತಾಣಗಳ ಚಿತ್ರ ಮತ್ತು ಮಾಹಿತಿಗಳನ್ನು ಸಂಗ್ರಹಿಸಿ ಸ್ಲೈಡ್ ತಯಾರಿಸಿರಿ.

* * *

# 2. ರಕ್ಷೆ - ಸುರಕ್ಷೆ



ಜೀವನವು ಅಮೂಲ್ಯವಾದುದು. ಅದು ಸುರಕ್ಷಿತವಾಗಿರಬೇಕೆಂದು ನಾವೆಲ್ಲರೂ ಬಯಸುತ್ತೇವೆ. ಅನಾದಿ ಕಾಲದಿಂದಲೂ ಮನುಷ್ಯನು ಹಲವಾರು ಅಪಾಯಗಳ, ಕಷ್ಟಗಳ ವಿರುದ್ಧ ಹೋರಾಡಿ ತನ್ನ ಜೀವನವನ್ನು ಸುರಕ್ಷಿತವಾಗಿರಿಸಿಕೊಂಡಿದ್ದಾನೆ. ಅಪಾಯಗಳೆದುರಾಗದಂತೆ ಮುನ್ನೆಚ್ಚರಿಕೆ ಯಾವಾಗಲೂ ಇರಬೇಕು. ಒಂದು ವೇಳೆ ಅಪಾಯಗಳು ಎದುರಾದರೂ ಎದುರಿಸಿ ನಿಲ್ಲುವ ಛಾತಿಯಿರಬೇಕು. ದೇಶದ, ಪ್ರಕೃತಿಯ ಸುರಕ್ಷೆ ಕೂಡ ನಮ್ಮ ಕರ್ತವ್ಯವಾಗಬೇಕು.

ಪ್ರವೇಶ ಚಟುವಟಿಕೆಯಾಗಿ ಎಸ್. ವಿ. ಪರಮೇಶ್ವರ ಭಟ್ಟರ ಕೆಲವು ಮುಕ್ತಕಗಳನ್ನು ನೀಡಲಾಗಿದೆ.

ಪ್ರಸ್ತುತ ಘಟಕದ ಪ್ರಾರಂಭದ ಪಾಠವಾದ 'ಸಮುದ್ರ ತೀರದ ಒಂದು ಘಟನೆ' ಎಂಬ ಕಥೆಯು ಸಮುದ್ರ, ನದಿ, ಕೆರೆ ಮುಂತಾದ ಜಲಾಶಯಗಳ ವಿಹಾರದ ಸಂದರ್ಭದಲ್ಲಿ ಎದುರಾಗುವ ಅಪಾಯ ಹಾಗೂ ಆ ಬಗ್ಗೆ ವಹಿಸಬೇಕಾದ ಎಚ್ಚರವನ್ನು ತಿಳಿಸುತ್ತದೆ, ಅಲ್ಲದೆ ಶಿಕ್ಷಣದ ಪ್ರಾಮುಖ್ಯತೆಯನ್ನು, ಶಿಕ್ಷಣಕ್ಕಾಗಿ ತುಡಿಯುವ ಹೃದಯವನ್ನು ಚಿತ್ರಿಸಿದೆ. 'ಯೋಧನಿಗೊಂದು ನಮನ' ಎಂಬ ಕವನವು ನಮ್ಮ ದೇಶದ ಸುರಕ್ಷೆಯನ್ನು ಕಾಯ್ದುಕೊಳ್ಳುವ ಯೋಧನಿಗೆ ನಾವು ಚಿರಋಣಿ ಆಗಿರಬೇಕು ಎಂಬುದನ್ನು ಸೂಚಿಸುತ್ತದೆ. ಕೊನೆಯ ಪಾಠವಾದ 'ಇದು ಮಾಹಿತಿ ಯುಗ. ಮಾಹಿತಿ ಕಳ್ಳರಿದ್ದಾರೆ. ಎಚ್ಚರಿಕೆ!' ಅಂಕಣ ಬರಹವಾಗಿದೆ. ಇಂದಿನ ಕಾಲದಲ್ಲಿ ಮೊಬೈಲ್ ಮೂಲಕ ತೆರೆದುಕೊಳ್ಳುವ ಅಂತರ್ಜಾಲ ಜಗತ್ತಿನ ಹಾಗೂ ಸಾಮಾಜಿಕ ಜಾಲತಾಣದ ಕುರಿತು ನಾವು ಎಚ್ಚರಿಕೆಯಿಂದಿರಬೇಕು ಎಂಬ ಸಂದೇಶ ಇದು ನೀಡುತ್ತದೆ. ಈ ಪಾಠಗಳು ನಮ್ಮಲ್ಲಿ ಸುರಕ್ಷತೆಯ ಮನೋಭಾವವನ್ನು ಬೆಳೆಸಲು ಸಹಾಯಕವಾಗಬಲ್ಲುದು.

# ಮುಕ್ತಕಗಳು

ಊರೆಲ್ಲ ನಂಟರು ಹಣದ ಗಂಟಿದ್ದರೆ
ಕುಣಿದು ಕುಂಬಿಡುವುದು ಜಗವು
ರೊಟ್ಟಿಯ ತುಣುಕೊಂದು ಕೈಯೊಳಗಿದ್ದರೆ
ನಾಯಿಗಳಾರೇಳು ಬಹವು ||೧||

ಮಣ್ಣನು ನೆನೆಯಿಸಿದಷ್ಟಕ್ಕೆ ಕುಂಬಾರ
ನಾರೊಬ್ಬನೂ ಆಗಲಾರ
ಕುಡಿಕೆಗೆ ಬೇಕಷ್ಟೆ ಕೋಲು ಕೈಚಳಕವು
ಚಕ್ರವು ಬೆಂಕಿಯ ಕಾವು ||೨||

ಬಾಳೆಯ ಹಣ್ಣನು ತಿಂದವರೆಸೆವರು
ಸಿಪ್ಪೆಯ ಬೀದಿಯ ಕೊನೆಗೆ
ಕಾಣದೆ ಕಾಲಿಟ್ಟು ಜಾರುವರನ್ಯರು
ಕಷ್ಟವು ಬರುವುದೆ ಹೀಗೆ ||೩||

ನಾನೊಬ್ಬ ನಿದ್ರೆಯ ಮಾಡಿದೆನಾದರೆ
ಅದು ನನ್ನ ಒಬ್ಬನ ಸುಖಕೆ
ನಾನೊಬ್ಬನೆಚ್ಚತ್ತು ದುಡಿಯುವುದಾದರೆ
ಅದು ಊರಿನೆಲ್ಲರ ಹಿತಕೆ ||೪||

- ಎಸ್. ವಿ. ಪರಮೇಶ್ವರ ಭಟ್ಟ

- ಮೇಲಿನ ಮುಕ್ತಕಗಳ ಆಶಯವನ್ನು ಬರೆಯಿರಿ.

# ಸಮುದ್ರ ತೀರದ ಒಂದು ಘಟನೆ

**ಡಾ. ಸುಧಾ ರಾವ್**

ದಿನನಿತ್ಯದಂತೆ ಒಂದು ಭಾನುವಾರ ಬೆಳಿಗ್ಗೆ ತನ್ನ ಸಂಪತ್ತನ್ನು ಹುಡುಕುತ್ತಾ ಜುಜೆ ಸಮುದ್ರ ತೀರಕ್ಕೆ ಬಂದಿದ್ದನು. ಸಮುದ್ರ ತೀರ ಶಾಲೆಯ ಮಕ್ಕಳ ಗಲಾಟೆಯಿಂದ ತುಂಬಿ ಹೋಗಿತ್ತು. ಜುಜೆ ತನ್ನ ಕಪ್ಪೆಚಿಪ್ಪುಗಳನ್ನು ಮರೆತೇಬಿಟ್ಟ. ಶಾಲೆಯ ಸಮವಸ್ತ್ರದಲ್ಲಿ ಶಿಸ್ತಾಗಿ ಹಾಗೂ ಅಂದವಾಗಿ ಕಾಣುತ್ತಿದ್ದ ಮಕ್ಕಳನ್ನು ಮನಸ್ಸಿನಲ್ಲೇ ಪ್ರಶಂಸಿಸುತ್ತಾ ಅವರನ್ನೆಲ್ಲಾ ನೋಡುವುದರಲ್ಲಿ ತಲ್ಲೀನನಾದನು. ಅವರೆಲ್ಲರ ಕೈಯಲ್ಲಿ ಊಟದ ಡಬ್ಬಿ ಹಾಗೂ ನೀರಿನ ಬಾಟಲುಗಳಿದ್ದವು.

ಅವರಲ್ಲಿ ಕೆಲವರು ಹಾಡುತ್ತಿದ್ದರೆ ಮತ್ತೆ ಕೆಲವರು ರಬ್ಬರಿನ ದೊಡ್ಡ ಚೆಂಡಿನಿಂದ ಆಟವಾಡುತ್ತಿದ್ದರು. ಇದ್ದಕ್ಕಿದ್ದಂತೆ ಒಬ್ಬನ ಗಮನ ಸಣ್ಣ ಲಂಗೋಟಿಯನ್ನು ಧರಿಸಿ ಮಗ್ನನಾಗಿ ಆಟದೆಡೆ ನೋಡುತ್ತಾ ಸಂಗೀತ ಕೇಳುತ್ತಾ ನಿಂತ ಜುಜೆಯೆಡೆಗೆ ಹೋಯಿತು. ಕೂಡಲೇ ಅವನು ಉಳಿದ ಮಕ್ಕಳೆಲ್ಲರ ಗಮನವನ್ನು ಜುಜೆಯೆಡೆಗೆ ಸೆಳೆದನು.

“ಹೇ ಗೋಪು, ಆ ಬೆತ್ತಲೆ ಬಾಲಕನನ್ನು ನೋಡು. ಅವನಿಗೆ ನಾಚಿಕೆಯೇ ಇಲ್ಲ” ಎಂದು ಜುಜೆಯನ್ನು ಮೊದಲು ಕಂಡ ಸುಭಾಷ್ ಅಚ್ಚರಿ ವ್ಯಕ್ತಪಡಿಸಿದನು.



"ಬೆತ್ತಲೆ, ಬೆತ್ತಲೆ" ಎಂದು ಎಲ್ಲರೂ ಕೇಕೆ ಹಾಕಿ ಕಿರುಚಿದರು. ಜುಜೆಯ ಗಮನ ಅವರೆಡೆಗೆ ಹೋಯಿತು. ಅವನು ಅವರನ್ನೆಲ್ಲಾ ಸರಿಯಾಗಿ ನೋಡಿದನು. ಅವರೆಲ್ಲರೂ ಅವನಿಂದ ಮುಖ ತಿರುಗಿಸಿಕೊಂಡರು. ಜುಜೆಯ ಮನಸ್ಸಿಗೆ ನೋವಾಯಿತು. ಅವನು ತನ್ನ ಗಮನವನ್ನು ಹಾಡುತ್ತಿದ್ದ ಮಕ್ಕಳೆಡೆಗೆ ತಿರುಗಿಸಿದನು.

"ಅವನು ತನ್ನನ್ನು ಏನೆಂದುಕೊಂಡಿದ್ದಾನೆ?" ಸುಭಾಷ್ ಕೇಳಿದ.

"ಅವನು ನಮ್ಮನ್ನು ಅಲಕ್ಷ್ಯ ಮಾಡುತ್ತಿದ್ದಾನೆ" ರಾಜು ಆಶ್ಚರ್ಯದಿಂದ ಹೇಳಿದ.

"ನಾವೆಲ್ಲಾ ಸೇರಿ ಅವನಿಗೆ ಪಾಠ ಕಲಿಸೋಣ" ಅಶೋಕ ಸಲಹೆ ಕೊಟ್ಟ.

"ಹೌದು, ಹೌದು. ಅವನಿಗೆ ಪಾಠ ಕಲಿಸೋಣ" ಎಂದು ಎಲ್ಲರೂ ಒಟ್ಟಿಗೆ ಹೇಳಿದರು.

ಜುಜೆಯೆಡೆಗೆ ಚೆಂಡನ್ನು ಎಸೆಯುವಂತೆ ಸುಭಾಷ್ ರಾಜುವಿಗೆ ಸನ್ನೆ ಮಾಡಿದನು. ಚೆಂಡು ಗುರಿ ತಪ್ಪಿ ಜುಜೆಯ ಪಕ್ಕದಲ್ಲಿ ಬಿದ್ದಿತು. ಜುಜೆ ಅದನ್ನೆತ್ತಿ ಹಿಂದಿರುಗಿಸಲು ಹುಡುಗರ ಬಳಿ ನಡೆದನು. ಅವರೆಲ್ಲಾ ಮತ್ತೊಮ್ಮೆ, "ಬೆತ್ತಲೆ ಬೆತ್ತಲೆ, ಶೇಮ್ ಶೇಮ್" ಎಂದು ಕಿರುಚಿದರು. ಅವನಿಂದ ಚೆಂಡನ್ನು ಕಿತ್ತುಕೊಂಡು ಗೋಪು ಜುಜೆಯನ್ನು ನೂಕಿದನು. ಜುಜೆ ಎಡವಿ ಕೆಳಗೆ ಬಿದ್ದನು. ಮಕ್ಕಳೆಲ್ಲಾ ಅವನನ್ನು ಕಂಡು ನಕ್ಕರು. ಜುಜೆಗೆ ಬಹಳ ಸಂಕಟವಾಯಿತು. ಅಲ್ಲಿಂದ ಓಡಿಹೋಗಿ ಅವನು ಸಮುದ್ರ ತೀರದಲ್ಲಿ ಒಂದೆಡೆ ಉಪಯೋಗಕ್ಕೆ ಬಾರದೆ ಬಿದ್ದಿದ್ದ ದೋಣಿಯಲ್ಲಿ ಕುಳಿತ. ಇದ್ದಕ್ಕಿದ್ದಂತೆ "ಸಹಾಯ ಮಾಡಿ, ಸಹಾಯ ಮಾಡಿ" ಎಂದು ಮಕ್ಕಳ ಕೂಗು ಕೇಳಿಬಂತು.

ಅವನು ಅವರೆಡೆಗೆ ಓಡಿದ. ತನ್ನಿಂದ ಚೆಂಡನ್ನು ಕಿತ್ತುಕೊಂಡ ಹುಡುಗ ಮರಳಿನ ಕುಸಿತದ ಕಾರಣದಿಂದ ಸಮುದ್ರದ ನೀರಿನ ಆಳಕ್ಕೆ ಜಾರುತ್ತಿರುವುದನ್ನು ಕಂಡ. ಅವನು ಜಾರುತ್ತಲೇ ಇದ್ದ. ಆದರೆ ಉಳಿದವರು ಯಾರೂ ಅವನ ಸಹಾಯಕ್ಕೆ ಹೋಗದೆ ಹೆದರಿ ನಿಂತಿದ್ದರು. "ಅಕ್ಕ, ಗೋಪು ಮುಳುಗುತ್ತಿದ್ದಾನೆ. ಗೋಪು ಮುಳುಗುತ್ತಿದ್ದಾನೆ. ಅಕ್ಕ, ಅಕ್ಕ" ಎಂದು ಅವರು ಕಿರುಚುತ್ತಿದ್ದರು ಮತ್ತು ಅಳುತ್ತಿದ್ದರು.

"ಖಂಡಿತವಾಗಿಯೂ ತೀರದೆಡೆಗೆ ಬರುತ್ತಿರುವ ಆ ದೊಡ್ಡ ಅಲೆ ಅವನನ್ನು ಎಳೆದುಕೊಂಡೇ ಹೋಗುತ್ತದೆ" ಎಂದು ಯೋಚಿಸಿದ ಜುಜೆ. ಎಂದೂ ಸಮುದ್ರಕ್ಕೆ ಹೆದರದ ಜುಜೆ ಒಡನೆಯೇ ಸಮುದ್ರಕ್ಕೆ ಹಾರಿ ಗೋಪುವನ್ನು ಬಿಗಿಯಾಗಿ ಹಿಡಿದುಕೊಂಡನು. ಅವನನ್ನು ಹಿಡಿದು ಅಲೆಗಳ ಮೇಲೆ ಈಜಿದನು. ಅಲೆಗಳು ಶಾಂತವಾದನಂತರ ಗೋಪುವನ್ನು ತೀರಕ್ಕೆ ಎಳೆದುಕೊಂಡು ಬಂದನು. ಅಲೆಗಳ ಏರಿಳಿತಗಳ ತಿಳುವಳಿಕೆ ಇದ್ದುದು ಜುಜೆಗೆ ದೊಡ್ಡ ಅಲೆಗಳಿಂದ ತಪ್ಪಿಸಿ ಗೋಪುವನ್ನು ರಕ್ಷಿಸಲು ಸಹಾಯವಾಯಿತು. ಅಷ್ಟರಲ್ಲಿ ಅವರ ಅಧ್ಯಾಪಕಿ ಶ್ಯಾಮಕ್ಕ ಮತ್ತು ಇತರರು ಅಲ್ಲಿ ಸೇರಿದ್ದರು. ಶ್ಯಾಮಕ್ಕ ಗೋಪುವನ್ನು ಹಿಡಿದುಕೊಂಡರು. ಗುಂಪಿನಿಂದ ಒಬ್ಬ ಮುಂದೆ ಬಂದನು. ಗೋಪುವನ್ನು ಬೋರಲು ಮಲಗಿಸಿ ಅವನ ಬೆನ್ನನ್ನು ಒತ್ತಿ ಒತ್ತಿ ಅವನ ಹೊಟ್ಟೆಯಲ್ಲಿ ತುಂಬಿಕೊಂಡ ನೀರೆಲ್ಲಾ ಬಾಯಿಯಿಂದ ಹೊರಗೆ ಬರುವಂತೆ ಮಾಡಿದನು. ಗೋಪು ಸಾಕಷ್ಟು ನೀರನ್ನು ಕಕ್ಕಿದ.

"ಈಗ ಅವನು ಸರಿಯಾಗಿದ್ದಾನೆ. ನೀರು ಒರೆಸಿ" ಎಂದು ಅವನು ಸೂಚಿಸಿದನು. ಅಕ್ಕ ಅವನನ್ನು ಸರಿಯಾಗಿ ಒರೆಸುವಂತೆ ಉಳಿದ ಅಧ್ಯಾಪಕರಿಗೆ ಹೇಳಿದರು.

ದೇವರನ್ನು ವಂದಿಸುತ್ತಾ, "ದೇವರ ದಯೆ!" ಎಂದು ಶ್ಯಾಮಕ್ಕ ಉದ್ಗರಿಸಿದಳು. ಉಳಿದೆಲ್ಲರೂ ಸಮಾಧಾನದಿಂದ ನಿಟ್ಟುಸಿರುಬಿಟ್ಟರು. "ಒಂದು ವೇಳೆ ಆ ಚಿಕ್ಕ ಹುಡುಗ ಗೋಪುವನ್ನು ಉಳಿಸದಿದ್ದರೆ ಏನಾಗುತ್ತಿತ್ತು ಎಂದು ಆಲೋಚಿಸಿ ನೋಡಿ" ಎಂದು ಶ್ಯಾಮಕ್ಕ ಹೇಳಿದಾಗ ಅವರೆಲ್ಲಾ ಭಯದಿಂದ ತತ್ತರಿಸಿದರು. "ಅರೆ ಆ ಹುಡುಗ ಎಲ್ಲಿ?" ಎಂದು ಕೇಳುತ್ತಾ ಶ್ಯಾಮಕ್ಕ ಸುತ್ತಮುತ್ತ ನೋಡಿದರು.

ದೂರದಲ್ಲಿ ಅವರಿಗೆ ಜುಜೆಯ ಬೆನ್ನು ಕಂಡಿತು. ಅವನು ನಡೆದು ಹೋಗುತ್ತಿದ್ದ.

"ನಿಲ್ಲು ಪುಟ್ಟ ವೀರನೇ! ನಿಲ್ಲು" ಎಂದು ಕೂಗುತ್ತಾ ಅಕ್ಕ ಅವನ ಹಿಂದೆ ಓಡಿದರು.

"ದಯವಿಟ್ಟು ಬಾ. ನಾವು ನಿನಗೆ ವಂದನೆ ಸಲ್ಲಿಸಬೇಕು." ಆಕೆ ಅವನ ಸುತ್ತ ಕೈ ಬಳಸಿ ಅವನನ್ನು ಉಳಿದ ಮಕ್ಕಳು ಹಾಗೂ ಚೇತರಿಸಿಕೊಳ್ಳುತ್ತಿದ್ದ ಗೋಪುವಿನ ಬಳಿ ಕರೆದು ತಂದರು.

ಜುಜೆಯ ಕೈಗಳನ್ನು ತನ್ನ ಕೈಯಿಂದ ಹಿಡಿದು ಶ್ಯಾಮಕ್ಕ "ವಂದನೆಗಳು ಪುಟ್ಟ ಮಗು. ನೀನು ನಿಜವಾಗಿಯೂ, ಧೀರ ಹುಡುಗ. ಇಂದು ನೀನು ಬರೀ ಗೋಪುವನ್ನೊಬ್ಬನನ್ನೇ ಅಲ್ಲ, ನಮ್ಮೆಲ್ಲರನ್ನು ಮುಂದಾಗುವ ಆಪತ್ತಿನಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡಿದ್ದೀಯ" ಎಂದು ಅವನನ್ನು ಅಪ್ಪಿಕೊಂಡರು.

"ನಿನ್ನ ಹೆಸರೇನು?" ಎಂದು ಕೇಳಿದರು.

"ಜುಜೆ" ಎಂದು ಮೆಲುದನಿಯಿಂದ ಅವನು ಉತ್ತರಿಸಿದ.

"ಜುಜೆ, ಮುದ್ದಾದ ಶೂರನಿಗೆ ಮುದ್ದಾದ ಹೆಸರು."

"ನೀನು ಎಲ್ಲಿ ವಾಸವಾಗಿದ್ದೀಯಾ ಜುಜೆ?" ಅಕ್ಕ ಕೇಳಿದರು.

"ಅದೋ ಅಲ್ಲಿ, ಆ ಚರ್ಚಿನ ಹತ್ತಿರವಿರುವ ಚಿಕ್ಕ ಗುಡಿಸಲಿನಲ್ಲಿ" ಎಂದು ಕೈ ತೋರಿಸುತ್ತಾ ಉತ್ತರಿಸಿದ ಜುಜೆ.

"ನೀನು ಯಾವ ಶಾಲೆಗೆ ಹೋಗುತ್ತೀಯಾ ಜುಜೆ?" ಪುಟ್ಟ ಉಷಾ ಕೇಳಿದಳು.

"ಇಲ್ಲ, ನಾನು ಶಾಲೆಗೆ ಹೋಗುವುದಿಲ್ಲ" ಜುಜೆ ಉತ್ತರಿಸಿದ.

"ಏಕೆ, ನಿನಗೆ ಶಾಲೆಗೆ ಹೋಗಲು ಇಷ್ಟವಿಲ್ಲವೇ?" ಉಷಾ ಮತ್ತೆ ಪ್ರಶ್ನಿಸಿದಳು.

"ಹಾಗೇನಿಲ್ಲ, ಶಾಲೆಗೆ ಹೋಗಲು ಇಷ್ಟ. ಆದರೆ ಸುಮ್ಮಿ ಹಾಗೂ ಅವಳ ಅಣ್ಣ ಕಲಿಯುವ ಮಡಗಾವಿಯ ಒಳ್ಳೆಯ ಶಾಲೆಗೆ ಕಳುಹಿಸಲು ನನ್ನ ತಂದೆ- ತಾಯಿಯ ಹತ್ತಿರ ಹಣವಿಲ್ಲ" ಎಂದು ದುಃಖದಿಂದ ಉತ್ತರಿಸಿದ ಜುಜೆ.

"ಮಡಗಾವಿಗೇಕೆ ಹೋಗಬೇಕು? ಈಗ ಬನಾವಲಿಯಲ್ಲಿ ಶಾಲೆಯಿದೆ. ಈ ಮಕ್ಕಳೆಲ್ಲಾ ಆ ಶಾಲೆಯಲ್ಲೇ ಓದುವವರು. ನಾನು ಅವರಿಗೆ ಪಾಠ ಹೇಳಿಕೊಡುತ್ತೇನೆ. ನೀನೂ ನಮ್ಮ ಶಾಲೆಗೆ ಬರಲು ಇಷ್ಟಪಡುತ್ತೀಯಾ?" ಶ್ಯಾಮಕ್ಕ ಕೇಳಿದರು.

"ನಿಜವಾಗಿಯೂ? ನೀವು ನನ್ನನ್ನು ಸೇರಿಸಿಕೊಳ್ಳುವಿರಾ?" ಎಂದು ಜುಜೆ ಕುತೂಹಲದಿಂದ ವಿಚಾರಿಸಿದ.

"ಆದರೆ... ಇಲ್ಲ... ನಾನು ಬರಲಾಗುವುದಿಲ್ಲ. ನಮ್ಮ ತಂದೆ ನನ್ನನ್ನು ಕಳುಹಿಸುವುದಿಲ್ಲ" ಎನ್ನುತ್ತಾ "ನನ್ನ ತಂದೆಯವರ ಬಳಿ ಶಾಲೆಯ ಫೀ ತುಂಬಲು ಹಣ ಇಲ್ಲ. ನನ್ನ ಹತ್ತಿರ ಉಳಿದ ಮಕ್ಕಳಂತೆ ಒಳ್ಳೆಯ ಬಟ್ಟೆಗಳಿಲ್ಲ. ಪುಸ್ತಕವಾಗಲೀ ಬರೆಯುವ ಹಲಗೆಯಾಗಲೀ ಇಲ್ಲ" ಎಂದು ದುಃಖದಿಂದ ಉತ್ತರಿಸಿದ ಜುಜೆ. ಅವನಿಗೆ ತುಂಬಾ ನಿರಾಶೆಯಾದಂತೆ ಕಂಡುಬಂತು.

"ಅದರ ಬಗ್ಗೆ ನೀನೇನೂ ಯೋಚಿಸಬೇಡ. ನಿನಗೆ ಶಾಲೆಗೆ ಬರುವ ಇಚ್ಛೆ ಇದ್ದರೆ ಉಳಿದ ಎಲ್ಲಾ ವ್ಯವಸ್ಥೆಯನ್ನು ನಾನು ನೋಡಿಕೊಳ್ಳುತ್ತೇನೆ. ನಿನ್ನ ತಂದೆಯ ಒಪ್ಪಿಗೆಯನ್ನು ಸಹ ಪಡೆದುಕೊಳ್ಳುತ್ತೇನೆ. ಬಾ ಜುಜೆ ನಿನ್ನ ತಂದೆಯ ಹತ್ತಿರ ಹೋಗಿ ಅವರ ಅಪ್ಪಣೆಯನ್ನು ಕೇಳೋಣ. ಆಗ ನೀನೇ ಉಳಿಸಿದ ಗೋಪು ಹಾಗೂ ಉಳಿದೆಲ್ಲ ಮಕ್ಕಳ ಜೊತೆ ನೀನು ಆಡಬಹುದು, ಓದಲೂಬಹುದು" ಎನ್ನುತ್ತಾ ಶ್ಯಾಮಕ್ಕ ಜುಜೆಯ ಕೈಹಿಡಿದು ನಿಂತರು.

"ಇಲ್ಲ, ನಾನು ಈ ಹುಡುಗರ ಜೊತೆ ಕಲಿಯುವುದೂ ಇಲ್ಲ, ಆಡುವುದೂ ಇಲ್ಲ" ಎನ್ನುತ್ತಾ ಅವನು ಶ್ಯಾಮಕ್ಕನ ಕೈಯಿಂದ ಬಿಡಿಸಿಕೊಳ್ಳಲು ಪ್ರಯತ್ನಪಟ್ಟನು.

"ಏಕೆ? ಇವರು ನಿನಗೆ ಇಷ್ಟವಾಗಲಿಲ್ಲವೇ?" ಎಂದು ಆಕೆ ಕೇಳಿದರು.

"ಇಲ್ಲ, ನನಗೆ ಇಷ್ಟವಾಗಲಿಲ್ಲ. ಅವರು ನನ್ನನ್ನು ರೇಗಿಸಿದರು. ನನ್ನನ್ನು ಬೆತ್ತಲೆ, ಬೆತ್ತಲೆ ಎಂದು ಕರೆದರು. ನಾನು ಅವರ ಚೆಂಡನ್ನು ಹಿಂದಿರುಗಿಸಲು ಹೋದಾಗ ಚೆಂಡನ್ನು ಕೈಯಿಂದ ಕಿತ್ತುಕೊಂಡು ನನ್ನನ್ನು ದಬ್ಬಿದರು. ಜೊತೆಗೆ ಬೇಡದ ಹೆಸರಿಟ್ಟು ನನ್ನನ್ನು ಗೇಲಿ ಮಾಡಿದರು. ಇಲ್ಲ ನಾನು ಅವರ ಜೊತೆ ಕಲಿಯುವುದಿಲ್ಲ" ಎಂದು ಹೇಳುತ್ತಿದ್ದಾಗ ಜುಜೆಯ ಧ್ವನಿ ಸಂಕಟದಿಂದ ಗದ್ಗದಿತವಾಗಿತ್ತು.

"ಸುಭಾಷ್ ಇದು ನಿಜವೇ?" ಎಂದು ಮಕ್ಕಳೆಡೆ ತಿರುಗುತ್ತಾ ಅಕ್ಕ ಕೇಳಿದರು. ಮಕ್ಕಳೆಲ್ಲಾ ನಾಚಿಕೆಯಿಂದ ತಲೆ ತಗ್ಗಿಸಿದರು.

"ನಾನು ನಿನ್ನನ್ನೇ ಕೇಳುತ್ತಿದ್ದೇನೆ, ಸುಭಾಷ್ ಇದು ನಿಜವೇ?" ಶ್ಯಾಮಕ್ಕ ರೇಗಿದರು. ಸುಭಾಷ್ ತಲೆಯಾಡಿಸಿದನು.

"ಎಷ್ಟು ಕೆಟ್ಟವರು ನೀವೆಲ್ಲಾ! ನಿಮಗೆ ನಾಚಿಕೆ ಆಗಬೇಕು. ಜುಜೆ ಎಷ್ಟು ಒಳ್ಳೆಯ ಹುಡುಗ ಮತ್ತು ಧೈರ್ಯಶಾಲಿ ಎಂದು ನೀವೆಲ್ಲಾ ನೋಡಿದ್ದೀರಾ, ನಿನ್ನ ತಮ್ಮ ಅವನ ಕೈಯಿಂದ ಚೆಂಡನ್ನು ಕಸಿದುಕೊಂಡು ಅವನನ್ನು ದಬ್ಬಿದರೂ ಅವನು ನಿನ್ನ ತಮ್ಮನ ಜೀವ ಉಳಿಸಿದ. ನೀವು ಅವನ ಜೊತೆ ಕೀಳಾಗಿ ವರ್ತಿಸಿ, ಅವನನ್ನು ರೇಗಿಸಿ ಗೇಲಿ ಮಾಡಿದ್ದೀರಾ, ಬಾ, ತಪ್ಪಾಯಿತು ಎಂದು ಅವನಲ್ಲಿ ಕ್ಷಮೆ ಕೇಳು ಮತ್ತು ಅವನನ್ನು ನಮ್ಮ ಶಾಲೆಗೆ ಸೇರುವಂತೆ ಕೇಳಿಕೋ" ಎಂದು ಅಕ್ಕ ಸುಭಾಷ್‌ನಿಗೆ ಹೇಳಿದರು.

"ಹೌದು, ಹೌದು. ಅಕ್ಕ ಹೇಳಿದಂತೆ ನೀನು ಕೇಳಬೇಕು" ಇತರ ಮಕ್ಕಳೆಲ್ಲಾ ಕೂಗಿದರು.

“ಬನ್ನಿ ಮಕ್ಕಳೆ, ಕ್ಷಮೆ ಕೇಳಿ” ಎಂದು ಉಳಿದ ಅಧ್ಯಾಪಕರೂ ಧ್ವನಿ ಸೇರಿಸಿದರು. ಸುಭಾಷ್, ರಾಜು, ಅಶೋಕ್, ದೀಪಕ್ ಎಲ್ಲರೂ ಜುಜೆಯ ಬಳಿ ನಡೆದು, “ನಮ್ಮಿಂದ ತಪ್ಪಾಯಿತು ದಯವಿಟ್ಟು ನಮ್ಮ ಶಾಲೆಗೆ ಸೇರಿಕೋ. ನಾವು ನಿನ್ನನ್ನು ಅಣಕಿಸುವುದಿಲ್ಲ. ನಿನ್ನ ಜೊತೆ ಆಟವಾಡುತ್ತೇವೆ” ಎಂದರು.

“ದಯವಿಟ್ಟು ಜುಜೆ ನಮ್ಮ ಶಾಲೆಗೆ ಬಾ” ಎಂದು ಮೆದುಸ್ವರದಲ್ಲಿ ಪುಟ್ಟ ದೀಪಾ ನುಡಿದಳು. “ಜುಜೆ ನಮ್ಮ ಶಾಲೆಗೆ ಬಾ. ನಮಗೆ ಜುಜೆ ಬೇಕು” ಎಂದು ಎಲ್ಲಾ ಮಕ್ಕಳು ಒಟ್ಟಿಗೆ ಕೂಗಿದರು.

ಅಷ್ಟರಲ್ಲಿ ಜುಜೆಯೇ ತನ್ನ ಜೀವವನ್ನು ಕಾಪಾಡಿದವನು ಎಂದು ಅರಿತ ಗೋಪು ಮೆಲ್ಲನೆ ಮೇಲೆದ್ದನು. ಅವನಿಗೆ ಸ್ವಲ್ಪ ತಲೆ ಸುತ್ತಿ ಬರುತ್ತಿತ್ತು. ಆದರೂ ಅವನು ಜುಜೆಯ ಬಳಿ ಬಂದು ಅವನ ಕೈಯ್ಯನ್ನು ತನ್ನ ಕೈಯಲ್ಲಿ ಹಿಡಿದು, “ನಿನಗೆ ಹೇಗೆ ಕೃತಜ್ಞತೆ ಸಲ್ಲಿಸಬೇಕು ಎಂದು ನನಗೆ ತಿಳಿಯುತ್ತಿಲ್ಲ. ನಾನು ನಿನಗೆ ನಿಜವಾಗಿಯೂ ಕೃತಜ್ಞನಾಗಿದ್ದೇನೆ. ನನ್ನ ಒರಟು ನಡತೆಯನ್ನು ದಯವಿಟ್ಟು ಕ್ಷಮಿಸು, ದಯವಿಟ್ಟು ನಮ್ಮ ಶಾಲೆಗೆ ಬಾ” ಎಂದು ವಿನಮ್ರತೆಯಿಂದ ಬೇಡಿಕೊಂಡನು.

“ನನಗೆ ಶಾಲೆಗೆ ಬರುವ ಇಷ್ಟ ಇದೆ. ಆದರೆ ನನ್ನ ತಾಯಿ ನನ್ನನ್ನು ಕಳುಹಿಸಲು ಒಪ್ಪುತ್ತಾರೋ ಇಲ್ಲವೊ ತಿಳಿಯದು” ಎಂದನು ಜುಜೆ.

ಜುಜೆಯ ತಂದೆ-ತಾಯಿಗೆ ದುಡ್ಡಿನ ತೊಂದರೆಯಿತ್ತು. ಆ ಪರಿಸ್ಥಿತಿ ತಿಳಿದಿದ್ದ ಜುಜೆಗೆ ಅವರು ಅವನನ್ನು ಶಾಲೆಗೆ ಕಳುಹಿಸುವ ಬಗ್ಗೆ ಭರವಸೆ ಇರಲಿಲ್ಲ. ಜೊತೆಗೆ ಅವನ ಅಕ್ಕ-ಪಕ್ಕದ ಮನೆಗಳಿಂದ ಇದುವರೆಗೂ ಯಾರೂ ಶಾಲೆಗೆ ಹೋಗಿರಲಿಲ್ಲ. ಮಕ್ಕಳೆಲ್ಲಾ ಸಾಮಾನ್ಯವಾಗಿ ಹಿಡಿದ ಮೀನನ್ನು ಬೇರೆ ಬೇರೆಯಾಗಿ ಆರಿಸುವುದರಲ್ಲಿ ಸಹಾಯ ಮಾಡುತ್ತಿದ್ದರು. ಉಳಿದ ಸಮಯದಲ್ಲಿ ಆಟವಾಡಿ ಸಮಯ ಕಳೆಯುತ್ತಿದ್ದರು. ಹೆಣ್ಣು ಮಕ್ಕಳು ಅವರ ತಾಯಂದಿರಿಗೆ ಮನೆಗೆಲಸಗಳಲ್ಲಿ ಸಹಾಯ ಮಾಡುತ್ತಿದ್ದರು. ಅವರು ತಾಯಂದಿರ ಜೊತೆ ಪೇಟೆಗೆ ಹೋಗಿ ಮೀನು ಮಾರುವುದರಲ್ಲೂ ಸಹಾಯ ಮಾಡುತ್ತಿದ್ದರು. ಇದು ಅವರ ದಿನಚರಿಯಾಗಿತ್ತು. ಪರಿಸ್ಥಿತಿ ಹೀಗಿರುವಾಗ “ನಾನು ಹೇಗೆ ಶಾಲೆಗೆ ಹೋಗಬಲ್ಲೆ?” ಎಂದು ಯೋಚಿಸಿದ. “ನಾವು ಹೋಗಿ ನಿನ್ನ ತಂದೆ-ತಾಯಿಯ ಅಪ್ಪಣೆ ಕೇಳುತ್ತೇವೆ” ಎಂದು ಶಾಮಕ್ಕ ನುಡಿದರು. ಬೇರೆ ಉಪಾಯವಿಲ್ಲದ ಕಾರಣ ಜುಜೆ ಅವರನ್ನು ಮೀನು ಆರಿಸುವ ಕೆಲಸದಲ್ಲಿ ಮಗ್ನರಾಗಿದ್ದ ತನ್ನ ತಂದೆ-ತಾಯಿಯ ಬಳಿ ಕರೆದುಕೊಂಡು ಹೋದನು.

## ಲೇಖಕರ ಪರಿಚಯ



ಪ್ರೊ. ಕೆ. ಸುಧಾ ರಾವ್ ಇಂಡಿಯನ್ ಕೌನ್ಸಿಲ್ ಫಾರ್ ಸೋಶಿಯಲ್ ಸೈನ್ಸ್ ರಿಸರ್ಚ್, ನವದೆಹಲಿ ಇದರ ಮಾಜಿ ಉಪಕುಲಪತಿಗಳು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು ಇದರ ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (AICTE), ನವದೆಹಲಿ ಇದರ ಹಿರಿಯ ಸಲಹೆಗಾರರಾಗಿದ್ದರು. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನಲ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಷನ್ (NIEPA) ಇದರ ಉನ್ನತ ಶಿಕ್ಷಣ ಮತ್ತು ಶಿಕ್ಷಣ ನೀತಿ ಇಲಾಖೆಗಳಲ್ಲಿ ಪ್ರಾಧ್ಯಾಪಿಕೆ ಮತ್ತು ಮುಖ್ಯಸ್ಥರಾಗಿದ್ದರು.

ಸೇವಾ ರತ್ನ ಪ್ರಶಸ್ತಿ, ಪ್ರಖ್ಯಾತ ಮಹಿಳಾ ಉಪಕುಲಪತಿ ಪ್ರಶಸ್ತಿ, ದಿವಂಗತ ಕಲ್ಪನಾ ಚಾವ್ಲಾ ಪ್ರಶಸ್ತಿ, ಒನಕೆ ಓಬವ್ವ ಪ್ರಶಸ್ತಿ, ಉತ್ತಮ ಶಿಕ್ಷಕ ಪ್ರಶಸ್ತಿ ಸೇರಿದಂತೆ ಭಾರತೀಯ ಉನ್ನತ ಶಿಕ್ಷಣಕ್ಕೆ ನೀಡಿದ ಅತ್ಯುತ್ತಮ ಕೊಡುಗೆಗಾಗಿ ಅವರು ಹಲವಾರು ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಸುಧಾ ರಾವ್ ಅವರು ಎಂಟು ಪುಸ್ತಕಗಳು ಮತ್ತು ನೂರಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಶಿಕ್ಷಣ ನೀತಿ, ಯೋಜನೆ, ನಿರ್ವಹಣೆ, ಮೌಲ್ಯಮಾಪನದ ಕುರಿತು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಖ್ಯಾತಿಯ ನಿಯತಕಾಲಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಿದ್ದಾರೆ.

ಈ ಕತೆಯನ್ನು 'ಬೋರಿಮ್‌ನ ಸೇತುವೆ' ಎನ್ನುವ ಕೃತಿಯಿಂದ ಆಯ್ದುಕೊಳ್ಳಲಾಗಿದೆ. ಇದು ಸುರೇಖಾ ಪನಂಡಿಕರ್ ಅವರ ಕೃತಿಯ ಕನ್ನಡಾನುವಾದವಾಗಿದೆ.

## ವಿಶದೀಕರಣ

**ಮಡಗಾವ್ :** ಗೋವಾ ರಾಜ್ಯದ ನಗರ.

**ಬನಾವಲಿ :** ಗೋವಾದ ಒಂದು ಹಳ್ಳಿ.

## ಉತ್ತರಿಸಿರಿ

**ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಗುಂಪಲ್ಲಿ ಬಂದ ಮಕ್ಕಳು ಜುಜೆಯನ್ನು ಕಂಡು ಏನೆಂದು ಮಾತನಾಡಿಕೊಂಡರು?
2. ಸಮುದ್ರದ ನೀರಿನಿಂದ ಜುಜೆಯು ಗೋಪುವನ್ನು ರಕ್ಷಿಸಿದ ಘಟನೆಯನ್ನು ಬರೆಯಿರಿ.
3. "ನೀನೂ ನಮ್ಮ ಶಾಲೆಗೆ ಬರಲು ಇಷ್ಟ ಪಡುತ್ತೀಯಾ?" ಶ್ಯಾಮಕ್ಕನ ಈ ಪ್ರಶ್ನೆಗೆ ಜುಜೆ ನೀಡಿದ ಉತ್ತರವೇನು?
4. ಪಶ್ಚಾತ್ತಾಪಗೊಂಡ ಮಕ್ಕಳು ಜುಜೆಯಲ್ಲಿ ಕ್ಷಮೆ ಕೇಳಿದ ಸಂದರ್ಭವನ್ನು ಬರೆಯಿರಿ.
5. ಜುಜೆಯನ್ನು ಶಾಲೆಗೆ ಕಳುಹಿಸಲು ಅಸಾಧ್ಯವಾದ ಕುಟುಂಬದ ಸ್ಥಿತಿಗತಿಯನ್ನು ವಿವರಿಸಿರಿ.

## ಸಮರ್ಥಿಸಿರಿ

'ಸಮುದ್ರ ತೀರದ ಒಂದು ಘಟನೆ' ಪಾಠದ ಶೀರ್ಷಿಕೆಯ ಔಚಿತ್ಯವನ್ನು ಸಮರ್ಥಿಸಿರಿ.

## ಪಾತ್ರಚಿತ್ರಣ ಮಾಡಿರಿ

'ಸಮುದ್ರ ತೀರದ ಒಂದು ಘಟನೆ' ಪಾಠದಲ್ಲಿ ಬಂದಿರುವ ಜುಜೆಯ ಪಾತ್ರಚಿತ್ರಣ ಮಾಡಿರಿ.

## ಸಂಭಾಷಣೆ ಬರೆಯಿರಿ

ಜುಜೆಯನ್ನು ಶಾಲೆಗೆ ಸೇರಿಸುವ ಉದ್ದೇಶದಿಂದ ಶ್ಯಾಮಕ್ಕ ಜುಜೆಯ ಹೆತ್ತವರನ್ನು ಭೇಟಿಯಾಗುತ್ತಾರೆ ಅಲ್ಲವೆ? ಶ್ಯಾಮಕ್ಕ ಮತ್ತು ಜುಜೆಯ ಹೆತ್ತವರ ನಡುವೆ ನಡೆದಿರಬಹುದಾದ ಸಂಭಾಷಣೆಯನ್ನು ಊಹಿಸಿ ಬರೆಯಿರಿ.

## ಅನಿಸಿಕೆ ಬರೆಯಿರಿ

ತನ್ನನ್ನು ಅಣಕಿಸಿದ ಗೋಪು ಅಪಾಯಕ್ಕೊಳಗಾದಾಗ ಜುಜೆ ಆತನನ್ನು ರಕ್ಷಿಸಿದನು. ಈ ಘಟನೆಯ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

## ಕಥಾ ಸಂಚಿಕೆ ತಯಾರಿಸಿರಿ

'ಸಮುದ್ರ ತೀರದ ಒಂದು ಘಟನೆ' ಕತೆಯನ್ನು ಮುಂದುವರಿಸಿ ಬರೆಯಿರಿ. ಎಲ್ಲರೂ ಬರೆದ ಕತೆಗಳನ್ನು ಒಟ್ಟು ಸೇರಿಸಿ ಒಂದು ಕಥಾ ಸಂಚಿಕೆ ತಯಾರಿಸಿರಿ.

* * *



# ಯೋಧನಿಗೊಂದು ನಮನ

ಗಣೇಶ್ ಕುತ್ಯಾಡಿ

ಉತ್ತರದ ಕಡೆಯಿಂದ ಎತ್ತರದ ಗಡಿಯಿಂದ
ಎಡೆಬಿಡದೆ ಕೇಳುತಿದೆ ಗುಂಡುಸಿಡಿತ |
ಹಗಲಿರುಳ ಗಣಿಸದೆಯೆ ಋತುಮಾನ ಎಣಿಸದೆಯೆ
ಸಿಂಹಗಳ ಗರ್ಜನೆಗೆ ಭೂಮಿ ನಡುಕ ||

ವಿಶ್ರಾಂತಿ ನಿದ್ರೆಗಳ ತೊರೆದಿರುವ ಈ ಭೂಪ
ಅರಿಗಳೆದೆ ನೆತ್ತರನೆ ಕುಡಿಯುತಿಹನು |
ಗುಂಡಿಗೆದೆ ಗುಂಡಿಗೆಯ ನೀಡಿರುವ ಈ ಗಂಡು |
ಸಂಗರಕೆ ಹಿಂಜರಿಯ ಧೀರನಿವನು ||

'ಪೌರುಷಕೆ' ಮತ್ತೊಂದು ಹೆಸರು 'ಯೋಧನದಂತೆ'
ಧರೆಯೆ ಕಂಪಿಸಲೇನು ಹೆದರಲೊಲ್ಲ !
ಹೆತ್ತಿರುವ ಹೊತ್ತಿರುವ ಋಣವ ತೀರಿಸಲೆಂದೆ
ಎದೆಯುಬ್ಬಿ ನಿಂತವಗೆ ಸಾಟಿಯಿಲ್ಲ !!

ಸೋಲನರಿಯದ ಜೀವ ಧೈರ್ಯ ತುಂಬಿದ ಭಾವ !
ಕಾಲನೆದುರಾದರೂ ಜಗ್ಗಲಾರ !
ರುದ್ರ ನರ್ತನವಿರಲು ರಕ್ಕಸರ ಎದೆ ಛಿದ್ರ |
ವೀರಭದ್ರನು ಅರಿಯ ಗಣಿಸಲಾರ ||

ಸಿಡಿತಲೆಯ ಕ್ಷಿಪಣಿಗಳು ! ಸಂಗರದ ಸಿಡಿಗುಂಡು !
ಸಿಡಿಯುತಿದೆ ಅಣು ಬಾಂಬು ! ಶಬ್ದ ಕೇಳಿ!
ರಣರಂಗ ರಿಂಗಣಕೆ ಧರೆಯೆ ಕಂಪಿಸುತಿಹುದು !
ವೀರ ಮಾತೆಯು ತಾಯಿ ಭದ್ರಕಾಳಿ ! ||

ಹಿಮಪಾತ ಮಳೆಯಲ್ಲಿ ಬಿರುಗಾಳಿ ಚಳಿಯಲ್ಲಿ
ಆತ್ಮ ಬಲಿದಾನದಲಿ ಎಮ್ಮ ಪೊರೆವ |
ಯೋಧಯೋಗಿಯ ರಾಷ್ಟ್ರ ಭಕ್ತಿ ಪೂಜೆಯ ಪುಣ್ಯ
ಫಲವನುಣ್ಣುವ ನಾವು ಋಣಕೆ ಪಾತ್ರ ||

## ಕವಿ ಪರಿಚಯ



ಗಣೇಶ್ ಕುತ್ಯಾಡಿಯವರು ದ. ಕ. ಜಿಲ್ಲೆಯ ಬೆಳ್ಳಾರೆಯ ಮಣಿಕರದವರು. ವಸ್ತು, ವೈವಿಧ್ಯ ಕುತ್ಯಾಡಿಯವರ ಕವನಗಳ ವಿಶೇಷತೆಯಾಗಿದೆ. ಪರಿಸರ, ಕನಸು, ಕತ್ತಲೆ-ಬೆಳಕು, ಸೌಂದರ್ಯ, ಸುಖ-ದುಃಖ, ಒಲವು-ನಲಿವು ಮುಂತಾದ ವಿಷಯಗಳನ್ನು ಆರಿಸಿಕೊಂಡು ಇವರು ಹಲವಾರು ಕವನಗಳನ್ನು ರಚಿಸಿದ್ದಾರೆ.

ಹೂಮಾಲೆ, ಅಲೆಗಳು, ಅಂಕುರ, ಮೇಘ ಮಂದಾರ ಮೊದಲಾದ ಕವನ ಸಂಕಲನ. 'ಹರಕೆ' ಮಕ್ಕಳ ಸಾಹಿತ್ಯ. ಔತಣ, ಮಧು ಬಿಂದು - ಸಾಂಗತ್ಯಗಳು. ಗಣಪಯ್ಯನ ವಚನಗಳು, ಧರ್ಮಜ್ಞನ ವಚನಗಳು-ತ್ರಿಪದಿ ಮುಕ್ತಕಗಳು. ಸಾವಿರಾರು ದೀಪಗಳು - ಚೌಪದಿಗಳು. ಶ್ರೀರಾಮ ವೈಭವ -ಸಾಂಗತ್ಯ ಛಂದಸ್ಸಿನ ಮಹಾಕಾವ್ಯ. ಎಸಳು - ಏಳೆ ಛಂದಸ್ಸಿನ ಮುಕ್ತಕಗಳು, ಮಲ್ಲಿಕಾರ್ಜುನ ಮಹಿಮೆ - ಕೀರ್ತನೆಗಳು ಮೊದಲಾದ ೧೫ ಕ್ಕಿಂತಲೂ ಹೆಚ್ಚಿನ ಕೃತಿಗಳನ್ನು ಇವರು ರಚಿಸಿದ್ದಾರೆ. 'ಯೋಧನಿಗೊಂದು ನಮನ' ಕವನವನ್ನು ಗಣೇಶ್ ಕುತ್ಯಾಡಿಯವರ 'ಪಚ್ಚೆ ಕದಿರು' ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

## ವಿಶದೀಕರಣ

**ಕ್ಷಿಪಣಿ :** ದೂರದಿಂದ ನಿಯಂತ್ರಿಸಲ್ಪಡುವ, ಶತ್ರುಗಳ ವಿರುದ್ಧ ಸ್ಫೋಟಕವಾಗಿ ಉಡಾಯಿಸುವ ಯುದ್ಧೋಪಕರಣ.

## ಉತ್ತರಿಸಿರಿ

**ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಗುಂಡು ಸಿಡಿತ ಎಲ್ಲಿಂದ ಕೇಳಿ ಬರುತ್ತಿದೆ?
2. ಯುದ್ಧಕ್ಕೆ ಹಿಂಜರಿಯದೆ ಗುಂಡಿಗೆ ತನ್ನೆದೆಯನ್ನೊಡ್ಡಿರುವ ಯೋಧನನ್ನು ಕವಿ ಹೇಗೆ ವರ್ಣಿಸಿದ್ದಾರೆ?
3. ಪೌರುಷಕ್ಕೆ ಮತ್ತೊಂದು ಹೆಸರು ಯೋಧ ಎಂದು ಕವಿ ಹೇಳಲು ಕಾರಣವೇನು?
4. ಧರೆಯು ಕಂಪಿಸಲು ಕಾರಣವೇನು?
5. ಯೋಧನನ್ನು 'ಯೋಧಯೋಗಿ' ಎಂದು ಸಂಬೋಧಿಸಿದ ಹಿನ್ನೆಲೆಯೇನು?

## ರಾಗವಾಗಿ ಹಾಡಿರಿ

'ಯೋಧನಿಗೊಂದು ನಮನ' ಕವನವನ್ನು ರಾಗವಾಗಿ ಹಾಡಿರಿ.

## ಆಶಯ ಬರೆಯಿರಿ

'ಯೋಧನಿಗೊಂದು ನಮನ' ಕವನದ ಆಶಯವನ್ನು ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ಕೊಡಲಾದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

- ಹಗಲಿರುಳ ಗಣಿಸದೆಯೆ ಋತುಮಾನ ಎಣಿಸದೆಯೆ
  ಸಿಂಹಗಳ ಗರ್ಜನೆಗೆ ಭೂಮಿ ನಡುಕ ||
- ಸೋಲನರಿಯದ ಜೀವ ಧೈರ್ಯ ತುಂಬಿದ ಭಾವ !
  ಕಾಲನೆದುರಾದರೂ ಜಗ್ಗಲಾರ !

## ಘೋಷಣ ವಾಕ್ಯ ಬರೆಯಿರಿ

ದೇಶಭಕ್ತಿಯನ್ನು ಬಿಂಬಿಸುವ ಎರಡು ಘೋಷಣ ವಾಕ್ಯಗಳನ್ನು ಬರೆಯಿರಿ.

## ಹೋಲಿಸಿ ಬರೆಯಿರಿ

ಕೆಳಗೆ ಕೊಡಲಾದ ಕವನವನ್ನು 'ಯೋಧನಿಗೊಂದು ನಮನ' ಕವನದೊಂದಿಗೆ ಹೋಲಿಸಿ ಸಾಮ್ಯ - ವ್ಯತ್ಯಾಸಗಳನ್ನು ಬರೆಯಿರಿ.

### ದೇಶ ಒಂದೇ ಭಾರತ

ವೇಷ ಬೇರೆ ಭಾಷೆ ಬೇರೆ ದೇಶ ಒಂದೇ ಭಾರತ
ಒಂದೇ ತಾಯ ಮಕ್ಕಳೆಂದು ಘೋಷಿಸೋಣ ಸಂತತ

ತೀರ್ಥ ನಗೆಯ ಕ್ಷೇತ್ರವಿದೋ ಭವ್ಯ ನಾಡು ಭಾರತ
ಋಷಿಗಳುಸಿರ ಹರಕೆ ಹೊತ್ತ ದಿವ್ಯ ನಾಡು ಭಾರತ
ಕಡಲುಗಳನೆ ಉಡುಗೆಯುಟ್ಟು
ಘಟ್ಟದೊಳು ಬಳೆಯ ತೊಟ್ಟು
ನದಿ ನದಗಳ ಹಾರವಿಟ್ಟು
ಸೇತುವಿಂದ ಸಿಂಧುವರೆಗೂ ಬೆಳೆದು ನಿಂತ ಭಾರತ
ಭಂಗಗೊಳದ ವಂಗ ನಾಡ ಕೂಡಿ ಮೆರೆದ ಭಾರತ
ಇದೇ ನಮ್ಮ ಭಾರತ ಪುಣ್ಯ ಭೂಮಿ ಭಾರತ

ಭರತ ಖಂಡದಿಂದಲೇನೆ ನಿನಗೆ ಮೋಕ್ಷ ಪ್ರಾಪ್ತಿ

ತಪ್ಪಿನುಡಿದೆ ಎಂದರಹುದು ನಿನಗೆ ತಕ್ಕ ಶಾಸ್ತಿ

ಯಾವ ದೇಶದಲ್ಲೇ ದುಡಿ ಯಾವ ಮಣ್ಣಿನಲ್ಲೇ ಮಡಿ

ನಿಂತ ನೆಲವು ಹಿಡಿದ ಹುಡಿ ಭರತ ಭೂಮಿ ಎಂದು ತಿಳಿ

ಮಣ್ಣ ಮೋಹ ಬಿಟ್ಟರಿಲ್ಲೋ ನಿನಗೆ ಬೇರೆ ಸದ್ಗತಿ

ಬರಿಯ ಮಾತಿನಲ್ಲೇ ಮುಗಿವುದಲ್ಲೋ ನಿನ್ನ ಸಂಸ್ಕೃತಿ

ಮಾನವತೆಯ ಶುಚಿ ಮತಿ ಸನಾತನದ ಸತ್ಕೃತಿ

**ಡಾ. ಸಾ. ಶಿ. ಮರುಳಯ್ಯ**

## ಪ್ರಬಂಧ ಬರೆಯಿರಿ

ದೇಶ ರಕ್ಷಣೆಯ ಕಾಯಕದಲ್ಲಿ ನಿರತರಾಗಿರುವ ಸೈನಿಕರ ತ್ಯಾಗ, ಧೈರ್ಯ, ಬಲಿದಾನಗಳ ಕುರಿತಾಗಿ ನೀವು 'ಯೋಧನಿಗೊಂದು ನಮನ' ಕವನದಲ್ಲಿ ತಿಳಿದಿರುವಿರಿ. ಈ ಹಿನ್ನೆಲೆಯಲ್ಲಿ 'ದೇಶ ರಕ್ಷಣೆಯಲ್ಲಿ ಸೈನಿಕರ ಪಾತ್ರ' ಎಂಬ ವಿಷಯದ ಕುರಿತು ಒಂದು ಪ್ರಬಂಧ ಬರೆಯಿರಿ.

* * *

# ಇದು ಮಾಹಿತಿ ಯುಗ. ಮಾಹಿತಿ ಕಳ್ಳರಿದ್ದಾರೆ. ಎಚ್ಚರಿಕೆ!

**- ಡಾ. ಯು. ಬಿ. ಪವನಜ**



ನೀವು ಯಾವುದಾದರೂ ಸೂಪರ್ ಮಾರ್ಕೆಟ್ಟಿಗೆ ಹೋದಾಗ ಅಲ್ಲಿ ಒಂದು ಪೆಟ್ಟಿಗೆ ಇಟ್ಟು ಕೂಪನ್ ಕೊಟ್ಟು ಇದರಲ್ಲಿ ನಿಮ್ಮ ಹೆಸರು, ವಿಳಾಸ, ಫೋನ್ ಸಂಖ್ಯೆ ಬರೆಯಿರಿ, ಅದರಲ್ಲಿ ಕೆಲವನ್ನು ಹೆಕ್ಕಿ ಗೆದ್ದವರಿಗೆ ವಿಶೇಷ ಬಹುಮಾನ ನೀಡುತ್ತೇವೆ ಎಂದು ಜಾಹೀರಾತು ನೀಡಿದ್ದನ್ನು ನಂಬಿ ನಿಮ್ಮ ಮಾಹಿತಿ ನೀಡಿದ್ದೀರಾ? ನಿಮಗೆ ಬಹುಮಾನ ಅಂತೂ ಬಂದಿರುವುದಿಲ್ಲ. ಆದರೆ ಅನಾವಶ್ಯಕ ಕಿರಿಕಿರಿ ಫೋನ್ ಕರೆಗಳು ಬರಲು ಪ್ರಾರಂಭವಾಗಿರುತ್ತದೆ. ಇವೆಲ್ಲ ಜನರ ವೈಯಕ್ತಿಕ ಮಾಹಿತಿ ಸಂಗ್ರಹಿಸುವ ಹಳೆಯ ವಿಧಾನಗಳಾದವು. ಈಗ ಎಲ್ಲವೂ ಆನ್‌ಲೈನ್. ನಿಮ್ಮ ಮೊಬೈಲ್‌ನಲ್ಲಿರುವ ಗೂಗಲ್ ನಲ್ಲಿ ಏನಾದರೂ ಒಂದು ಮಾಹಿತಿ ಹುಡುಕಿ. ನಂತರ ಫೇಸ್ಬುಕ್ ತೆರೆಯಿರಿ. ನೀವು ಏನನ್ನು ಹುಡುಕಿದ್ದೀರಾ ಅದಕ್ಕೆ ಸಂಬಂಧಿಸಿದ ಜಾಹೀರಾತುಗಳು ನಿಮಗೆ ಫೇಸ್ಬುಕ್‌ನಲ್ಲಿ ಬರುತ್ತವೆ. ಇನ್ಸ್ಟಾಗ್ರಾಂ ತೆರೆದರೆ ಅಲ್ಲೂ ಅವೇ ಜಾಹೀರಾತುಗಳು ಬರುತ್ತವೆ. ಅಲ್ಲಿಗೆ ಮುಗಿಯುವುದಿಲ್ಲ. ಯಾರು ಯಾರೋ ಕರೆ ಮಾಡುತ್ತಾರೆ. ಅರ್ಥಾತ್ ನಿಮ್ಮ ವೈಯಕ್ತಿಕ ಮಾಹಿತಿ ಸೋರಿಕೆಯಾಗಿದೆ. ಅಲ್ಲಲ್ಲ, ಕಳವಾಗಿದೆ.

೨೧ನೆಯ ಶತಮಾನವನ್ನು ಮಾಹಿತಿ ಯುಗ ಎಂದು ಕರೆಯುತ್ತಾರೆ. Information is the new oil ಎಂಬ ಒಂದು ಹೇಳಿಕೆಯಿದೆ. ಅಂದರೆ ಈಗಿನ ಕಾಲದಲ್ಲಿ ಮಾಹಿತಿಯು ಚಿನ್ನ, ಎಣ್ಣೆಗಳಿಗಿಂತಲೂ ಹೆಚ್ಚು ಬೆಲೆಬಾಳುತ್ತದೆ ಎಂದು ಅರ್ಥ. ಯಾವ ಮಾಹಿತಿಯ ಬಗ್ಗೆ ಇವರು ಹೇಳುತ್ತಿದ್ದಾರೆ? ಪ್ರಮುಖವಾಗಿ ನಿಮ್ಮ ವೈಯಕ್ತಿಕ ಮಾಹಿತಿ. ಇದರಲ್ಲಿ ನಿಮ್ಮ, ಹೆಸರು, ವಿಳಾಸ, ಇಮೈಲ್, ಫೋನ್ ಸಂಖ್ಯೆ ಇವೆಲ್ಲ ಸಾಮಾನ್ಯ ಮಾಹಿತಿಗಳಾದವು. ಮುಂದುವರೆದು, ನಿಮ್ಮ ಸಂಬಳ, ನಿಮ್ಮಲ್ಲಿ ಎಷ್ಟು ಹಣವಿದೆ, ನೀವು ಏನನ್ನು ಇಷ್ಟ ಪಡುತ್ತೀರಿ, ನಿಮ್ಮ ವೈಯಕ್ತಿಕ ಇಷ್ಟಗಳೇನು, ಇತ್ಯಾದಿಗಳೆಲ್ಲ

ಈಗಿನ ಕಾಲದಲ್ಲಿ ತುಂಬ ಬೆಲೆಬಾಳುವ ಮಾಹಿತಿಗಳು. ಇವುಗಳನ್ನು ತೆಗೆದುಕೊಂಡು ಅವರೇನು ಮಾಡುತ್ತಾರೆ? ನಿಮಗೆ ಯಾವುದು ಇಷ್ಟ ಎಂದು ತಿಳಿದು ಅದರ ಬಗ್ಗೆಯೇ ನಿಮಗೆ ಜಾಹೀರಾತು ಕಳುಹಿಸಿದರೆ ನೀವು ಅದನ್ನು ಕೊಳ್ಳುವ ಸಾಧ್ಯತೆ ಹೆಚ್ಚು. ನೀವು ಅದನ್ನು ಕೊಂಡುಕೊಂಡರೆ ಅವರಿಗೆ ವ್ಯಾಪಾರ ಆಗುತ್ತದೆ. ಅದಕ್ಕೇ ಅವರು ನಿಮ್ಮ ಮಾಹಿತಿಯನ್ನು ಕದಿಯುವುದು ಮಾತ್ರವಲ್ಲ, ಇತರೆ ಕಂಪೆನಿಗಳ ಜೊತೆ ಹಂಚಿಕೊಂಡಿರುತ್ತಾರೆ. ಇನ್ನೂ ನಿಖರವಾಗಿ ಹೇಳಬೇಕಾದರೆ ನಿಮ್ಮ ಮಾಹಿತಿಯನ್ನು ಕದ್ದು ಮಾರಾಟ ಮಾಡಿರುತ್ತಾರೆ.

ಈ ರೀತಿ ವೈಯಕ್ತಿಕ ಮಾಹಿತಿಯನ್ನು ದುರ್ಬಳಕೆ ಮಾಡುವವರಲ್ಲಿ ಸಾಮಾಜಿಕ ಮಾಧ್ಯಮಗಳು ಎತ್ತಿದ ಕೈ. ಅದರಲ್ಲೂ ಬಹುತೇಕ ಎಲ್ಲರೂ ಬಳಸುವ ಫೇಸ್ಬುಕ್ ಇದಕ್ಕೆ ಕುಪ್ರಸಿದ್ಧ. ಅವರನ್ನು ಹೀಗೇಕೆ ಮಾಡುತ್ತಿದ್ದೀರಾ ಎಂದು ಕೇಳಿದರೆ ನೀವೇ ಒಪ್ಪಿಗೆ ಕೊಟ್ಟಿದ್ದೀರಾ ನೋಡಿ ಎಂದು ಯಾವುದೋ ಪುಟವನ್ನು ತೋರಿಸುತ್ತಾರೆ. ನಿಜವಾಗಿ ನಡೆದಿರುವುದು ಏನೆಂದರೆ ನೀವು ಫೇಸ್ಬುಕ್ ಅಥವಾ ಯಾವುದೇ ಸಾಮಾಜಿಕ ಮಾಧ್ಯಮದ ಜಾಲತಾಣದಲ್ಲಿ ಅಥವಾ ಆಪ್‌ನಲ್ಲಿ ಖಾತೆ ತೆರೆಯುವಾಗ ಹಲವು ಕಡೆ I agree ಎಂದು ಟಿಕ್ ಮಾಡಿರುತ್ತೀರಿ. ಬಹುತೇಕ ಮಂದಿ ಅಷ್ಟು ಉದ್ದದ ಒಪ್ಪಂದದ ಪುಟದಲ್ಲಿ ಏನಿದೆ ಎಂದು ಪೂರ್ತಿ ವಿವರವಾಗಿ ಓದಲು ಹೋಗಿರುವುದಿಲ್ಲ. ಅದರಲ್ಲಿ ನಿಮ್ಮ ವಿವರಗಳನ್ನು, ನಿಮ್ಮ ವಿಳಾಸ ಪುಸ್ತಕದಲ್ಲಿರುವ ನಿಮ್ಮ ಸ್ನೇಹಿತರ ಹೆಸರು ವಿಳಾಸಗಳನ್ನು ಇತರೆ ಮೂರನೆ ವ್ಯಕ್ತಿ ಅಥವಾ ಜಾಲತಾಣಗಳ ಜೊತೆ ಹಂಚಿಕೊಳ್ಳುತ್ತೇವೆ ಎಂದಿರುತ್ತದೆ. ಇದು ನಿಮ್ಮ ಅಪ್ಪಣೆ ಪಡೆದು ಮಾಡುವ ದುರ್ವ್ಯವಹಾರ. ಇನ್ನೂ ಕೆಲವು ನಿಮ್ಮ ನೇರ ಅಪ್ಪಣೆ ಇಲ್ಲದೆ ಮಾಡುವ ದುರ್ಬುದ್ಧಿಗಳಿವೆ.

ನಿಮ್ಮ ಮೊಬೈಲ್‌ನಲ್ಲಿ ನೀವು ಫೇಸ್‌ಬುಕ್ ಆಪ್ ಬಳಸಿ ನಂತರ ಅದರಿಂದ ಹೊರ ಬಂದು ಬೇರೆ ಏನೇನೋ ಮಾಡಿರುತ್ತೀರಿ. ಮನೆ ಹುಡುಕಾಟದ ಅಥವಾ ಬಸ್ ಟಿಕೆಟ್ ಬುಕಿಂಗ್‌ನ ಆಪ್ ಬಳಸಿದ್ದೀರಿ ಎಂದಿಟ್ಟುಕೊಳ್ಳಿ. ಮುಂದಿನ ಸಲ ಫೇಸ್ಬುಕ್ ತೆರೆದಾಗ ನಿಮಗೆ ಫೇಸ್ಬುಕ್ ತುಂಬೆಲ್ಲ ಮನೆಗಳ ಮತ್ತು ಬಸ್ ಬುಕಿಂಗ್‌ಗಳ ಜಾಹೀರಾತುಗಳೇ ಕಾಣಿಸುತ್ತವೆ. ಇಲ್ಲಿ ಏನಾಗಿದೆಯೆಂದರೆ ನೀವು ಫೇಸ್ಬುಕ್‌ನಿಂದ ಹೊರ ಬಂದರೂ ಫೇಸ್ಬುಕ್ ನೀವು ನಿಮ್ಮ ಮೊಬೈಲ್ನಲ್ಲಿ ಏನು ಮಾಡುತ್ತಿದ್ದೀರಿ ಎಂದು ಗಮನಿಸುತ್ತಿರುತ್ತದೆ. ಇದೂ ತಪ್ಪಲ್ಲವೇ ಎಂದು ನೀವು ಕೇಳಬಹುದು. ಹೌದು. ಇದು ಖಂಡಿತಾ ತಪ್ಪು. ಆದರೆ ಇದಕ್ಕೆ ನೀವೇ ಒಪ್ಪಿಗೆ ಕೊಟ್ಟಿರುತ್ತೀರಿ. ಫೇಸ್ಬುಕ್‌ನ ಗೌಪ್ಯ ಮತ್ತು ಸುರಕ್ಷತೆಯ ನೀತಿ ನಿಯಮಗಳು ಎಂಬ ಪುಟಕ್ಕೆ ಹೋಗಿ ಅಲ್ಲಿರುವ ಹಲವಾರು ಕೊಂಡಿಗಳಲ್ಲಿ ಎಲ್ಲೋ ಒಂದು ಕಡೆ ಫೇಸ್ಬುಕ್ ಮುಚ್ಚಿದ ನಂತರವೂ ನಿಮ್ಮ ಚಟುವಟಿಕೆಗಳನ್ನು ನಾವು ಗಮನಿಸುತ್ತಿರುತ್ತೇವೆ ಎಂಬುದಕ್ಕೆ ನೀವು ಒಪ್ಪಿಗೆ ಕೊಟ್ಟಿರುತ್ತೀರಿ. ನಾನು ಅಂತಹ ಯಾವುದೇ ಒಪ್ಪಂದಕ್ಕೆ ಒಪ್ಪಿಗೆ ಕೊಟ್ಟಿದ್ದು ನನಗೆ ನೆನಪಿಲ್ಲ ಎನ್ನುತ್ತೀರಾ? ಫೇಸ್ಬುಕ್ ಏನು ಮಾಡುತ್ತಿದೆಯೆಂದರೆ ಅದರಲ್ಲಿ ಹಲವಾರು ಆಯ್ಕೆಗಳು ನೀವು "ನಾನು ಒಪ್ಪುವುದಿಲ್ಲ" ಎಂದು ಹೇಳುವ ತನಕ ಅದುವೇ ಆಯ್ಕೆ ಆಗಿರುತ್ತದೆ. ಇದಕ್ಕೆ ಇಂಗ್ಲಿಷಿನಲ್ಲಿ default settings ಎನ್ನುತ್ತಾರೆ.

ನೀವು ಪ್ರತಿ ಆಯ್ಕೆಯಲ್ಲೂ ಹುಡುಕಿ ಇವುಗಳನ್ನೆಲ್ಲ ಬದಲಿಸಬೇಕಾಗುತ್ತದೆ. ನಾನು ಇನ್ನೂ ಒಂದು ದುರ್ಬುದ್ಧಿಯನ್ನು ಗಮನಿಸಿದ್ದೇನೆ. ಅದೆಂದರೆ ಎಲ್ಲ ಕಡೆ ಹುಡುಕಿ ಈ ಆಯ್ಕೆಗಳನ್ನು ಬದಲಿಸಿಟ್ಟಿರುತ್ತೇನೆ. ಆಗಾಗ ಫೇಸ್ಬುಕ್ ಹೊಸ ಆವೃತ್ತಿ ಬಂದಿದೆ, ನವೀಕರಿಸಿಕೊಳ್ಳಿ ಎಂದು ಎಚ್ಚರಿಸುತ್ತಿರುತ್ತದೆ. ಹಾಗೆ ಎಚ್ಚರಿಸಿದಾಗ ನಾವು ಸಹಜವಾಗಿ ನಮ್ಮ ಆಪ್ ಅನ್ನು ಅಪ್ಡೇಟ್ ಮಾಡಿಕೊಳ್ಳುತ್ತೇವೆ. ತಕೊಳ್ಳಿ. ಇಲ್ಲೊಂದು ಪೀಕಲಾಟ ಆಗಿರುತ್ತದೆ. ಅದೆಂದರೆ ನಿಮ್ಮ ಆಪ್ ಅಪ್ಡೇಟ್ ಆದಾಗ ಮತ್ತೆ ಫೇಸ್ಬುಕ್ ತನ್ನ ಕಂಪೆನಿ ಸಿದ್ಧಪಡಿಸಿದ default settingsಗೆ ಬದಲಾಯಿಸಿರುತ್ತದೆ. ಮತ್ತೊಮ್ಮೆ ಎಲ್ಲ ಆಯ್ಕೆಗಳನ್ನು ಹುಡುಕಿ ಬದಲಾಯಿಸಬೇಕು. ಕೆಲವೊಮ್ಮೆ ಇದು ನಿಜಕ್ಕೂ ಸಿಕ್ಕಾಪಟ್ಟೆ ಸಿಟ್ಟು ತರಿಸುತ್ತದೆ.

ಈ ರೀತಿ ನಿಮ್ಮ ವೈಯಕ್ತಿಕ ವ್ಯವಹಾರಗಳಲ್ಲಿ ಮೂಗು ತೂರಿಸುವುದರಲ್ಲಿ ಗೂಗಲ್ ಇನ್ನೂ ಹಲವು ಹೆಜ್ಜೆ ಮುಂದೆ ಇದೆ. ಅದು ನಿಮ್ಮ ಇಮೈಲ್, ಎಸ್ಎಂಎಸ್, ಎಲ್ಲ ಓದಿ ನಿಮಗೆ ನೀವು ಕೇಳದೆಯೇ ಸಲಹೆ ನೀಡಲು ಪ್ರಾರಂಭಿಸುತ್ತದೆ. ನೀವು ಬೈಕಿನಲ್ಲಿ ಹೋಗುವಾಗ ಯಾರದೋ ಫೋನ್ ಬಂತು ಎಂದು ರಸ್ತೆ ಬದಿ ಗಾಡಿ ನಿಲ್ಲಿಸಿ ಸುಮಾರು ಹೊತ್ತು ಮಾತನಾಡಿ ನಂತರ ಗಾಡಿ ಹೊರಡಿಸಿರುತ್ತೀರಿ. ನೀವು ಗಾಡಿ ನಿಲ್ಲಿಸಿದ್ದು ಯಾವುದೋ ಬಾರ್ ಆಂಡ್ ರೆಸ್ಟೋರೆಂಟ್ ಮುಂದೆ ಆಗಿರುತ್ತದೆ. ತಗೊಳ್ಳಿ. ಗೂಗಲ್ ನಿಮಗೆ ಆ ಬಾರ್ ಆಂಡ್ ರೆಸ್ಟೋರೆಂಟ್ ಹೇಗಿತ್ತು? ಅಲ್ಲಿ ಗಾಲಿ ಕುರ್ಚಿಯಲ್ಲಿ ಹೋಗಬಹುದೇ, ಅಲ್ಲಿಯ ಆಹಾರ ಚೆನ್ನಾಗಿತ್ತೇ, ಇತ್ಯಾದಿ ಪ್ರಶ್ನೆ ಕೇಳುತ್ತದೆ.

ಈ ಎಲ್ಲ ಪೀಕಲಾಟಗಳಿಂದ ಮುಕ್ತಿ ಹೇಗೆ? ಪೂರ್ತಿಯಾಗಿ ಇಂತವುಗಳಿಂದ ತಪ್ಪಿಸಿಕೊಳ್ಳುವುದು ಅಸಾಧ್ಯ. ಆದರೂ ಕೆಲವು ಎಚ್ಚರಿಕೆಗಳನ್ನು ವಹಿಸಿಕೊಳ್ಳಬಹುದು.

ಸೂಪರ್ ಮಾರ್ಕೆಟ್ ಅಥವಾ ಯಾವುದೇ ಅಂಗಡಿ, ವ್ಯವಹಾರದ ಸ್ಥಳಗಳಲ್ಲಿ ನಿಮ್ಮ ಫೋನ್ ನಂಬರ್ ಕೇಳಿದರೆ ಖಂಡಿತಾ ಅಗತ್ಯವಿಲ್ಲದಿದ್ದಲ್ಲಿ ಕೊಡದಿರುವುದೇ ಉತ್ತಮ. ಇತ್ತೀಚೆಗೆ ಎರಡು ಸಿಮ್ ಇಟ್ಟುಕೊಳ್ಳುವುದು ಸಾಮಾನ್ಯ. ನೀವು ಎರಡು ಸಿಮ್ ಬಳಸುವವರಾದರೆ, ಒಂದರಲ್ಲಿ ವಾಟ್ಸ್ಆಪ್ ಇರಲಿ. ಇನ್ನೊಂದರಲ್ಲಿ ಬೇಡ. ಫೋನ್ ನಂಬರ್ ಕೇಳಿದಾಗ ವಾಟ್ಸ್ಆಪ್ ಇಲ್ಲದ ನಂಬರ್ ಮಾತ್ರ ನೀಡಿ. ಆಗ ವಾಟ್ಸ್ಆಪ್ ನಲ್ಲಿ ಅನಗತ್ಯ ಜಾಹೀರಾತು ಸಂದೇಶಗಳಿಂದ ಮುಕ್ತಿ ಪಡೆಯಬಹುದು.

ಫೇಸ್ಬುಕ್, ಇನ್ಸ್ಟಾಗ್ರಾಂ, ಇತ್ಯಾದಿ ಸಾಮಾಜಿಕ ಮಾಧ್ಯಮ ಜಾಲತಾಣಗಳಲ್ಲಿ ವೈಯಕ್ತಿಕ ಗೌಪ್ಯದ ಆಯ್ಕೆ ಇರುತ್ತದೆ. ಅಲ್ಲಿ ನನ್ನ ಖಾಸಗಿ ಮಾಹಿತಿಯನ್ನು ಯಾರ ಜೊತೆಯೂ ಹಂಚಿಕೊಳ್ಳಬೇಡ ಎಂದು ಆಯ್ಕೆ ಮಾಡಿಕೊಳ್ಳಿ. ಫೇಸ್ಬುಕ್ ನಿಂದ ಹೊರಗೆ ಬಂದ ನಂತರವೂ ಅದು ನಿಮ್ಮ ಕೆಲಸಗಳನ್ನು ಗಮನಿಸಬಾರದು ಎಂದು ಆಯ್ಕೆ ಮಾಡಿಕೊಳ್ಳಿ. ಯಾವುದೇ ಜಾಲತಾಣದಲ್ಲಿ ಅತೀ ಅಗತ್ಯವಿದ್ದಲ್ಲಿ ಮಾತ್ರ ನಿಮ್ಮ ಫೋನ್ ನಂಬರ್ ನೀಡಿ.

## ಲೇಖಕರ ಪರಿಚಯ



ಡಾ| ಯು. ಬಿ. ಪವನಜ ಇವರು ಕಾಸರಗೋಡಿನ ದೇಲಂಪಾಡಿಯ ಬೆಳ್ಳಿಪ್ಪಾಡಿಯವರು. ಪದವಿ ವರೆಗಿನ ಶಿಕ್ಷಣಗಳನ್ನು ಕಾಸರಗೋಡು, ದ.ಕ. ಜಿಲ್ಲೆಯಲ್ಲಿ ಪೂರೈಸಿದ ಬಳಿಕ ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎಸ್.ಸಿ, ಮುಂಬಯಿ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪದವಿ ಪಡೆದರು. ಮುಂಬಯಿಯ ಬಾಬಾ ಪರಮಾಣು ಸಂಶೋಧನಾ ಕೇಂದ್ರದಲ್ಲಿ ವಿಜ್ಞಾನಿಯಾಗಿ ಇವರು ಹಲವು ವರ್ಷ ದುಡಿದಿದ್ದಾರೆ. ಗಣಕ ಮತ್ತು ಕನ್ನಡದ ತುಡಿತ ಹೆಚ್ಚಾಗಿ ವಿಜ್ಞಾನಿ ಉದ್ಯೋಗಕ್ಕೆ ರಾಜೀನಾಮೆಯಿತ್ತು ಬೆಂಗಳೂರಿಗೆ ಆಗಮಿಸಿದರು. ಮೈಕ್ರೋಸಾಫ್ಟ್ ಕಂಪೆನಿಯ ಕನ್ನಡದ ಸಲಹೆಗಾರರಾಗಿ ಕರ್ತವ್ಯ ನಿರ್ವಹಿಸಿದರು. ಬೆಂಗಳೂರಿನ ದಿ ಸೆಂಟರ್ ಫಾರ್ ಇಂಟರ್‌ನೆಟ್ ಅಂಡ್ ಸೊಸೈಟಿ ಮೂಲಕ ಭಾರತೀಯ ಭಾಷೆಗಳ ವಿಕಿಪೀಡಿಯಕ್ಕೆ ಸ್ತುತ್ಯರ್ಹ ಕೆಲಸ ಮಾಡಿದರು. ಇವರು 'ಕರಾವಳಿ ವಿಕಿಮೀಡಿಯನ್ಸ್' ಇದರ ಸ್ಥಾಪಕ ಕಾರ್ಯದರ್ಶಿಯಾಗಿದ್ದಾರೆ.

ಕನ್ನಡದ ಪ್ರಥಮ ಅಂತರಜಾಲ ಪತ್ರಿಕೆಯಾದ 'ವಿಶ್ವಕನ್ನಡ'ದ ಸ್ಥಾಪಕ ಸಂಪಾದಕರಾಗಿದ್ದಾರೆ. ಕನ್ನಡ ಮತ್ತು ಮಾಹಿತಿ ತಂತ್ರಜ್ಞಾನದ ಬಗ್ಗೆ ಪತ್ರಿಕೆಗಳಲ್ಲಿ ಲೇಖನ ಮತ್ತು ಅಂಕಣಗಳನ್ನು ಬರೆದಿದ್ದಾರೆ. ಅಂತಾರಾಷ್ಟ್ರೀಯ ಖ್ಯಾತಿಯ ಲೋಗೋ ಪ್ರೋಗ್ರಾಮ್ಮಿಂಗ್ ಲಾಂಗ್ವೇಜಿನ ಕನ್ನಡೀಕರಣಕ್ಕಾಗಿ ಇವರು ಮಂಥನ ಪ್ರಶಸ್ತಿಗೆ ಭಾಜನರಾಗಿದ್ದಾರೆ. 'ಇದು ಮಾಹಿತಿ ಯುಗ. ಮಾಹಿತಿ ಕಳ್ಳರಿದ್ದಾರೆ. ಎಚ್ಚರಿಕೆ!' ಇವರ ಅಂಕಣಬರಹವಾಗಿದೆ.

## ವಿಶದೀಕರಣ

**ಜಾಲತಾಣ :** ಸಾಮಾಜಿಕ ನೆಟ್ವರ್ಕ್ ವೆಬ್ ಸೈಟ್ ಅಥವಾ ಅಪ್ಲಿಕೇಶನ್ ಆಗಿದ್ದು ಅದು ಸಾಮಾನ್ಯ ಜನರು ಪರಸ್ಪರ ಸಂಪರ್ಕಿಸಲು ಅನುವು ಮಾಡಿಕೊಡುತ್ತದೆ.

( ಫೇಸ್ ಬುಕ್, ಇನ್ಸ್ಟಾಗ್ರಾಂ, ಯೂಟ್ಯೂಬ್, ...)

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. 'ವಿಶೇಷ ಬಹುಮಾನ ನೀಡುತ್ತೇವೆ' ಎಂಬ ಜಾಹೀರಾತನ್ನು ನಂಬಿ ನಿಮ್ಮ ಮಾಹಿತಿಯನ್ನು ನೀಡಿದರೆ ಆಗುವ ತೊಂದರೆಗಳೇನು?
2. ಇಂದಿನ ಕಾಲದಲ್ಲಿ ಮಾಹಿತಿಯು ಚಿನ್ನ, ಎಣ್ಣೆಗಳಿಗಿಂತ ಬೆಲೆಬಾಳುತ್ತದೆ ಎನ್ನಲು ಕಾರಣವೇನು?
3. ಸಾಮಾಜಿಕ ಮಾಧ್ಯಮದ ಜಾಲತಾಣಗಳಲ್ಲಿ ಖಾತೆ ತೆರೆಯುವಾಗ I agree ಎಂದು ಟಿಕ್ ಮಾಡುವ ಮುನ್ನ ನಾವು ಜಾಗರೂಕರಾಗಿರಬೇಕು. ಯಾಕೆ?
4. ಫೇಸ್ ಬುಕ್ ಖಾತೆಯನ್ನು ಬಳಸುವಾಗ ವಹಿಸಬೇಕಾದ ಮುನ್ನೆಚ್ಚರಿಕೆಗಳು ಯಾವುವು?
5. ನಿಮ್ಮ ವೈಯಕ್ತಿಕ ವ್ಯವಹಾರಗಳಲ್ಲಿ ಗೂಗಲ್ ಹೇಗೆ ಮೂಗು ತೂರಿಸುತ್ತದೆ?

## ಭಿತ್ತಿಪತ್ರ ರಚಿಸಿರಿ

ಸಾಮಾಜಿಕ ಜಾಲತಾಣಗಳ ಬಳಕೆಯ ಕುರಿತಾಗಿ ಜಾಗೃತಿ ಮೂಡಿಸುವ ಭಿತ್ತಿಪತ್ರವನ್ನು ಐಸಿಟಿಯ ಸಹಾಯದಿಂದ ರಚಿಸಿರಿ.

## ಸ್ವಂತ ವಾಕ್ಯ ರಚಿಸಿರಿ

ಅಡಿಗೆರೆ ಎಳೆದ ಪದವನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.

- ನಾನು ಮಾಡಿದ ತಪ್ಪಿನಿಂದಾಗಿ ದೊಡ್ಡ <u>ಪೀಕಲಾಟ</u>ಕ್ಕೆ ಸಿಲುಕಿಕೊಂಡೆನು.
- ನಾನು ನನ್ನ ಚಟುವಟಿಕೆಯಲ್ಲಿ ತಲ್ಲೀನನಾಗಿದ್ದಾಗ ಆತನು <u>ಮೂಗುತೂರಿಸಲು</u> ಬಂದನು.

## ವಿಶ್ಲೇಷಿಸಿ ಬರೆಯಿರಿ

ಸೈಬರ್ ಮೋಸಜಾಲಕ್ಕೆ ಒಳಗಾಗದಂತೆ ನಾವು ವಹಿಸಬೇಕಾದ ಮುಂಜಾಗ್ರತೆಗಳು ಯಾವುವು? ಅವುಗಳನ್ನು ವಿಶ್ಲೇಷಿಸಿ ಟಿಪ್ಪಣಿ ರೂಪದಲ್ಲಿ ಬರೆಯಿರಿ.

## ಮನವಿಪತ್ರ ಬರೆಯಿರಿ

ಹೆಚ್ಚುತ್ತಿರುವ ಸೈಬರ್ ಅಪರಾಧಗಳ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಮಾಹಿತಿ ತರಗತಿಯನ್ನು ನಡೆಸಿಕೊಡುವಂತೆ ವಿನಂತಿಸಿಕೊಂಡು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಲು ಒಂದು ಮನವಿಪತ್ರವನ್ನು ಸಿದ್ಧಪಡಿಸಿರಿ.

## ಲೇಖನ ಬರೆಯಿರಿ

“ಜಾಲತಾಣಗಳು ನೀವು ನಿಮ್ಮ ಮೊಬೈಲ್ ನಲ್ಲಿ ಏನು ಮಾಡುತ್ತಿದ್ದೀರಿ ಎಂದು ಗಮನಿಸುತ್ತಿರುತ್ತದೆ.... ಆದರೆ ಇದಕ್ಕೆ ನೀವೇ ಒಪ್ಪಿಗೆ ಕೊಟ್ಟಿರುತ್ತೀರಿ” - ಈ ಮಾತಿನ ಹಿನ್ನೆಲೆಯಲ್ಲಿ ‘ಅಂತರ್ಜಾಲದ ಒಳಿತು ಕೆಡುಕುಗಳು’ ಎಂಬ ವಿಷಯದ ಕುರಿತು ಒಂದು ಲೇಖನ ಬರೆಯಿರಿ.

* * *



# 3. ಜೀವನ ಜ್ಯೋತಿ

ಮನುಷ್ಯನು ಸಮಾಜದ ಒಂದು ಅಂಗ. ಆದ್ದರಿಂದ ಸಮಾಜದಲ್ಲಿ ಬದುಕುವಾಗ ಅವನು ಸಮಾಜಕ್ಕೆ, ನಾಡಿಗೆ, ದೇಶಕ್ಕೆ ಪ್ರಯೋಜನಕಾರಿಯಾಗುವ ಒಳ್ಳೆಯ ಗುಣಗಳನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ. ಎಲ್ಲರನ್ನೂ ಸಮಾನತೆಯಿಂದ, ಪ್ರೀತಿಯಿಂದ ಕಾಣಬೇಕಾಗುತ್ತದೆ. ಕರುಣೆ, ಸಹಾನುಭೂತಿ, ಹೃದಯ ವೈಶಾಲ್ಯ, ಸೇವಾ ಮನೋಭಾವ, ಸಹನೆ, ಪರೋಪಕಾರ ಇತ್ಯಾದಿ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಸಮಾಜ ಸುಧಾರಣೆಗೆ, ಮನುಕುಲದ ಏಳಿಗೆಗೆ ತಮ್ಮ ಜೀವನವನ್ನು ಸಮರ್ಪಿಸಿದ ಮಹಾಪುರುಷರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಜೀವನ ಜ್ಯೋತಿ ಎಂಬ ಘಟಕವನ್ನು ಇಲ್ಲಿ ನೀಡಲಾಗಿದೆ.

ಪ್ರವೇಶ ಚಟುವಟಿಕೆಯಾಗಿ 'ಪ್ರೀತಿಯಿದ್ದಲ್ಲಿ ದ್ವೇಷಕ್ಕಿಲ್ಲ ಜಾಗ' ಎಂಬ ಲಘುಬರಹವನ್ನು ನೀಡಲಾಗಿದೆ.

ಆರಂಭದ ಪಾಠವಾಗಿ, ಅಸ್ಪೃಶ್ಯತೆಯ ಕಹಿಯನ್ನು ತನ್ನ ಜೀವನದಲ್ಲಿ ಅನುಭವಿಸಿ ಅಸ್ಪೃಶ್ಯರ ಬಾಳಿಗೆ ಬೆಳಕಾಗಿ, ಭಾರತದ ಸಂವಿಧಾನ ಶಿಲ್ಪಿಯಾಗಿ ಮುಗಿಲೆತ್ತರಕ್ಕೆ ಬೆಳೆದು ನಿಂತ ಅಂಬೇಡ್ಕರ್ ಅವರ ಜೀವನವನ್ನು ಚಿತ್ರಿಸಿರುವ ರಾಧಾಕೃಷ್ಣ ಕೆ. ಉಳಿಯತ್ತಡ್ಕರ 'ಭೀಮನುದಿಸಿದನು ಭಾರತದ ಬೆಳಕಾಗಿ' ಎಂಬ ಕಥನ ಕವನವನ್ನು ನೀಡಲಾಗಿದೆ. ಎರಡನೆಯ ಪಾಠವಾಗಿ ಪ್ರಾಣಿಪ್ರೀತಿಯನ್ನು ಉದ್ದೀಪನಗೊಳಿಸುವ, ಮೂಕಪ್ರಾಣಿ ಮತ್ತು ಮನುಷ್ಯರೊಳಗಿನ ಸಂಬಂಧವನ್ನು ಹೃದಯಂಗಮವಾಗಿ ಚಿತ್ರಿಸಿರುವ ಕೆ. ಎಸ್. ನರಸಿಂಹಸ್ವಾಮಿಯವರ 'ನಾಯಿ ಮಲ್ಲಿಗೆ' ಎಂಬ ಕತೆಯನ್ನು ನೀಡಲಾಗಿದೆ.

ಮೂರನೆಯದಾಗಿ, ತನ್ನನ್ನು ಶಿಲುಬೆಗೇರಿಸಿದವರನ್ನೂ ಕ್ಷಮಿಸುವ ಹೃದಯ ವೈಶಾಲ್ಯವನ್ನು ತೋರಿಸಿರುವ ಯೇಸುಕ್ರಿಸ್ತನ ಭವ್ಯ ವ್ಯಕ್ತಿತ್ವವನ್ನು ಎತ್ತಿ ಹಿಡಿಯುವ ವೇಣುಗೋಪಾಲ ಕಾಸರಗೋಡು ರಚಿಸಿರುವ 'ಶಿಲುಬೆ' ಎನ್ನುವ ಪ್ರಸಿದ್ಧ ನಾಟಕವನ್ನು ನೀಡಲಾಗಿದೆ. ಈ ಮೂರು ಪಾಠಗಳ ಸಂದೇಶಗಳು ನಿಮ್ಮ ಬದುಕಿಗೆ ದಾರಿದೀಪವಾಗಬಹುದು; ಜೀವನಕ್ಕೆ ಜ್ಯೋತಿಯಾಗಬಹುದು.

# ಪ್ರೀತಿಯಿದ್ದಲ್ಲಿ ದ್ವೇಷಕ್ಕಿಲ್ಲ ಜಾಗ

ನಮಗೆಲ್ಲಾ ಗೊತ್ತಿದೆ, ಅತ್ತೆ ಸೊಸೆಯರಲ್ಲಿ ಹಾವು ಮುಂಗುಸಿಗಳ ಹಾಗೆ ಕಚ್ಚಾಡುವವರೂ ಇದ್ದಾರೆ. ನಮ್ಮ ಕಥೆಯ ಅತ್ತೆ ಸೊಸೆಯರೂ ಹಾಗೆ, ದಿನಾ ಒಂದಲ್ಲ ಒಂದು ಕಾರಣ ತೆಗೆದು ಜಗಳವಾಡುವವರು. ಇದು ಎಷ್ಟು ವಿಪರೀತಕ್ಕೆ ಹೋಯಿತೆಂದರೆ ಅತ್ತೆಯನ್ನು ಮುಗಿಸಿಯೇ ಬಿಡಬೇಕೆಂದು ನಿರ್ಧರಿಸಿದ ಸೊಸೆ ಒಬ್ಬ ಗುರುವನ್ನು ಭೇಟಿಯಾಗಿ "ಸ್ವಾಮಿ, ನನಗೆ ಅತ್ತೆಯ ಕಿರಿಕಿರಿ ತಡೆಯಲಾಗುತ್ತಿಲ್ಲ, ಆಕೆಗೂ ಸಾಕಷ್ಟು ವಯಸ್ಸಾಯಿತು. ಆರೋಗ್ಯವೂ ಸರಿಯಿಲ್ಲ, ಸುಮ್ಮನೆ ಹೀಗೆ ಬದುಕುವುದಕ್ಕಿಂತ ಸಾಯುವುದೇ ಮೇಲಲ್ಲವೇ? ದಯವಿಟ್ಟು ಆಕೆ ಸಾಯುವ ಹಾಗೆ ಏನಾದರೂ ಉಪಾಯ ಹೇಳಿ. ಆದರೆ ನಾನೇ ಸಾಯಿಸಿದ್ದು ಅಂತ ಯಾರಿಗೂ ಸಂಶಯ ಬರಬಾರದು" ಅಂತ ಅಲವತ್ತುಕೊಂಡಳು.

ಇವಳಿಗೆ ಬುದ್ಧಿ ಕಲಿಸಬೇಕೆಂದುಕೊಂಡ ಗುರುಗಳು "ನೋಡಮ್ಮಾ, ನಿನ್ನ ಆಸೆಯಂತೆಯೇ ಆಗಲಿ, ನಿನಗೆ ಒಂದು ಚೂರ್ಣವನ್ನು ಕೊಡುತ್ತೇನೆ. ಇದನ್ನು ಮೂರು ತಿಂಗಳ ಕಾಲ ನಿನ್ನ ಅತ್ತೆಗೆ ಆಹಾರದ ಜೊತೆ ತಿನ್ನಿಸಬೇಕು. ಮೂರು ತಿಂಗಳಲ್ಲಿ ಆಕೆ ಸಾಯುತ್ತಾಳೆ, ನಿನ್ನ ಮೇಲೆ ಯಾರಿಗೂ ಸಂಶಯ ಬರುವುದಿಲ್ಲ, ಆದರೆ ನೀನೊಂದು ನಿಯಮವನ್ನು ಪಾಲಿಸಬೇಕು. ಅಷ್ಟು ದಿನ ನಿನ್ನ ಅತ್ತೆಯನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು.ಪ್ರೀತಿಯಿಂದ ಊಟ, ತಿಂಡಿ ನೀಡಬೇಕು. ಒಳ್ಳೆಯ ಮಾತುಗಳನ್ನಾಡಿ ಅವರಿಗೆ ಸಂತೋಷವಾಗುವಂತೆ ನಡೆದುಕೊಳ್ಳಬೇಕು" ಎಂದರು. ಸಂತೋಷದಿಂದ ಮನೆಗೆ ಬಂದ ಸೊಸೆ ಚೂರ್ಣವನ್ನು ಪ್ರತಿದಿನ ಅತ್ತೆಯ ಆಹಾರದಲ್ಲಿ ಬೆರೆಸಿ ಕೊಡುತ್ತಾ ಪ್ರೀತಿ ನಟಿಸುತ್ತಾ ಸೇವೆ ಮಾಡತೊಡಗಿದಳು. ಸೊಸೆಯ ಸೇವೆ ಮತ್ತು ಪ್ರೀತಿಯ ಮಾತುಗಳಿಂದ ಅತ್ತೆಯ ಆರೋಗ್ಯ ಸುಧಾರಿಸತೊಡಗಿತು. ದಿನ ಕಳೆದಂತೆ ಅತ್ತೆ ಸೊಸೆಯರಿಬ್ಬರೂ ತಮಗರಿವಿಲ್ಲದಂತೆ ಒಬ್ಬರನ್ನೊಬ್ಬರು ಬಿಟ್ಟಿರಲಾರದಷ್ಟು ಹಚ್ಚಿಕೊಂಡರು. ಗುರುಗಳು ನೀಡಿದ ಗಡುವು ಇನ್ನೇನು ಒಂದು ವಾರವಿರುವಾಗ, ಇಷ್ಟು ಪ್ರೀತಿಯ ಅತ್ತೆ ಇನ್ನೊಂದು ವಾರದಲ್ಲಿ ಸಾಯುತ್ತಾಳಲ್ಲ ಎಂದು ಸೊಸೆಗೆ ಆತಂಕ ಪ್ರಾರಂಭವಾಯಿತು. ತಕ್ಷಣ ಗುರುಗಳ ಬಳಿಗೆ ಹೋಗಿ "ಸ್ವಾಮಿ, ನೀವು ಹೇಳಿದಂತೆ ಮೂರು ತಿಂಗಳಿಂದ ಅತ್ತೆಯ ಸೇವೆ ಮಾಡುತ್ತಾ ಅವರಲ್ಲಿ ನನ್ನ ತಾಯಿಯನ್ನು ಕಂಡಿದ್ದೇನೆ. ಇನ್ನೊಂದು ವಾರದಲ್ಲಿ ಆಕೆ ಸಾಯುತ್ತಾಳೆ.ಆದರೆ ಆಕೆಯನ್ನು ಬಿಟ್ಟು ಬದುಕುವ ಶಕ್ತಿ ನನಗಿಲ್ಲ, ದಯವಿಟ್ಟು ಅತ್ತೆಯನ್ನು ಬದುಕಿಸಿ ಕೊಡಿ" ಎಂದು ಕಾಲಿಗೆರಗಿದಳು. ಗುರುಗಳು ನಗುತ್ತಾ "ನೋಡಮ್ಮಾ, ನಾನು ನಿನಗೆ ಕೊಟ್ಟಿರುವುದು ವಿಷವಲ್ಲ. ಆರೋಗ್ಯವರ್ಧಕ ಚೂರ್ಣ. ಅದರಿಂದ ನಿನ್ನತ್ತೆಯ ಆರೋಗ್ಯ ಹಾಗೂ ನಿನ್ನ ಪ್ರೀತಿಯ ಮಾತು - ನಡವಳಿಕೆಯಿಂದ ನಿಮ್ಮಿಬ್ಬರ ಸಂಬಂಧ ಸುಧಾರಿಸಿತು. ಇನ್ನು ಚೆನ್ನಾಗಿ ಬಾಳಿ" ಎಂದು ಹಾರೈಸಿದರು.

"ಪ್ರೀತಿಯಿದ್ದಲ್ಲಿ ದ್ವೇಷಕ್ಕೆಲ್ಲಿ ಜಾಗ" ಅಲ್ಲವೇ?

**- ಚಂದ್ರಶೇಖರ ಬಿಳಿನೆಲೆ**

- ಮೇಲಿನ ಲಘುಬರಹವನ್ನು ಓದಿ ಅದು ನೀಡುವ ಸಂದೇಶವನ್ನು ಬರೆಯಿರಿ.

# ಭೀಮನುದಿಸಿದನು ಭಾರತದ ಬೆಳಕಾಗಿ

**- ರಾಧಾಕೃಷ್ಣ ಕೆ. ಉಳಿಯತ್ತಡ್ಕ**

ಒಂದು ದಿನ ಮುಂಜಾನೆ ಮಧ್ಯಪ್ರದೇಶದ
ಇಂದೋರಿನಲಿ ಆಕಾಶ ತುಂಬ ಮೋಡ ದಟ್ಟೈಸಿ
ಭೂಮಂಡಲದಿ ಕಾರ್ಗತ್ತಲು ಕವಿದ ವೇಳೆಯಲಿ
ಭೀಮನುದಿಸಿ ಬಂದನು ಭಾರತದ ಬೆಳಕಾಗಿ

ಬೆಳಗಿತು ಇಂದೋರಿನ ಕುಗ್ರಾಮ 'ಮಹೂ'
ಕೇಳಿತು ಮಾಮರದಲ್ಲಿ ಕೋಗಿಲೆಯ ಕುಹೂ
ರಾಮ್‌ಜಿ- ಭೀಮಾಬಾಯಿಗೆ ಹದಿನಾಲ್ಕನೇ ಮಗು
ಸಮುದಾಯದವರ ಮುಖದಲ್ಲಿ ಸಂತಸದ ನಗು

ಜನಿಸಿದ ಮಗುವಿಗೆ 'ಸಕಪಾಲ'ನೆಂಬ ಹೆಸರು
ಮನೆಮಂದಿ 'ಭೀಮರಾಯ'ನೆಂದು ಕರೆದರು
ಹುಟ್ಟುವಾಗ ಚಂದಿರನ ಸುಂದರ ಮುಖಕಾಂತಿ
ಮುಟ್ಟಿದವರೆದೆಯಲ್ಲಿ ಉಕ್ಕಿ ಹರಿಯಿತು ಪ್ರೀತಿ

ಬಾಲಕನಿಗೆ ಅರಿವಿನ ಬೆಳಕು ಕಾಣಲು ಆಸಕ್ತಿ
ಸೋಲಿಸಲೆಂದೇ ತಳೆದರು ಕೆಲವರು ನಿರಾಸಕ್ತಿ
ಹೊರಗೆ ಚಾಪೆ ಹಾಸಿ ಕುಳಿತು ಕಲಿಯಬೇಕು
ಬರೆದು ಓದಿ ದಿನದ ಪಾಠ ತಿಳಿಯಬೇಕು

ಭೀಮಾಬಾಯಿ ಕಾಯಿಲೆಯಿಂದ ಮಲಗಿದರು
ರಾಮ್‌ಜಿ ಚಿಕಿತ್ಸೆಗಾಗಿ ಊರೂರು ಅಲೆದರು
ದಲಿತರಿಗೆ ಶುಶ್ರೂಷೆ ಲಭಿಸದ ಸಂದಿಗ್ಧ ಕಾಲ
ಕಾಲು ಮುಟ್ಟಿ ಬೇಡಿದರೂ ಬಂತು ಅಂತ್ಯಕಾಲ

“ಜೀವನದ ಭದ್ರತೆಗೆ ಬೇಕು ವಿದ್ಯಾರ್ಜನೆ
ನೋವನುಂಗಿ ನಿರ್ಭಯದಿ ಮಾಡು ಯೋಚನೆ”
ಅಪ್ಪ ಹೇಳಿದ ವಚನ ಪಾಲಿಸಿದ ಮಗ
ತಪ್ಪದೆ ಓದಿ ಬುದ್ಧಿವಂತನಾದ ಬೇಗ

ಅರೆಕ್ಷಣ ಕಾಲಹರಣ ಮಾಡದ ವಿದ್ಯಾರ್ಥಿ
ಚುರುಕು ನಡೆ, ಖಚಿತ ನುಡಿ, ನಿಸ್ವಾರ್ಥಿ
ಸ್ವಚ್ಛಂದ ಸ್ವತಂತ್ರ ಸಮಾನತೆಯ ಬದುಕು
ಆಚಾರ ವಿಚಾರಗಳನ್ನು ಪಾಲಿಸುವ ಮನಸು

ದೇಹಾರೋಗ್ಯ ಲೆಕ್ಕಿಸದೆ ವ್ಯಾಸಂಗನಿರತ
ಸಹಪಾಠಿಗಳ ಸಹಕಾರ ನಿತ್ಯನಿರಂತರ
ನಿದ್ರಾಹಾರಗಳ ಕಡೆಗೆ ನಿಗಾ ಕಡಿಮೆ
ನಿರ್ಧಾರ ಬದಲಿಸದೆ ಓದಿನಲಿ ಗರಿಮೆ

ಮಹಾರ್ ಜನಾಂಗದ ಮೊದಲ ಪದವೀಧರ
ಅಹರ್ನಿಶಿ ಓದಿ ಕಲಿತ ಬಾಬಾ ಅಂಬೇಡ್ಕರ
ಹಿರಿಯರೆಲ್ಲ ಕರೆದು ಹರಸಿ ಹಾರೈಸಿದರು
ಗುರುಗಳು ಅಭಿಮಾನದಿಂದ ಅಭಿನಂದಿಸಿದರು

ಮಹಾಪ್ರಬಂಧ ಬರೆದು ಪಿಹೆಚ್‌ಡಿ ಪಡೆದರು
ಮಹಾಕಾನೂನು ಕಲಿತು ಬ್ಯಾರಿಸ್ಟರ್ ಆದರು
ಸ್ನಾತಕೋತ್ತರ ಪದವಿಗಳ ಮಾಲೆ ಧರಿಸಿದರು
ಜೀತವನು ತೊಲಗಿಸಲು ಮುಂಬಯಿಗೆ ಬಂದರು

ಉಚ್ಚ ನ್ಯಾಯಾಲಯದಲ್ಲಿ ವಕಾಲತ್ತು ನಡೆಸಿದರು
ತುಚ್ಛರಾಗಿ ಬದುಕುವವರಿಗೆ ನ್ಯಾಯ ಒದಗಿಸಿದರು
'ಅಸ್ಪೃಶ್ಯತಾ ಕಲ್ಯಾಣ ಸಮಾಜ' ಸ್ಥಾಪಿಸಿದರು
'ಸ್ವತಂತ್ರ ಮಜದೂರರ ಪಕ್ಷ'ಕ್ಕೆ ಚಾಲನೆ ನೀಡಿದರು

ನೊಂದ ಜನತೆಗೆ ದಾರಿತೋರಿದ ಗುರು
ಬೆಂದ ಮನಸ್ಸಿಗೆ ಸಾಂತ್ವನವಾದವರು
ದೇಶದ ಅಸ್ಪೃಶ್ಯರಿಗೆ ದನಿಕೊಟ್ಟ ಧೀಮಂತ
ಆಶಿಸದೆ ಆಡಂಬರವನು ತ್ಯಜಿಸಿದ ಸಾಧಕ

ಅರ್ಥಶಾಸ್ತ್ರಜ್ಞ, ಕಾನೂನು ತಜ್ಞ, ರಾಜಕೀಯ ನೇತಾರ
ಸಾರ್ಥಕ್ಯ ಕಂಡ ಸಾಮಾಜಿಕ ನ್ಯಾಯದ ದಾತಾರ
ಜಾಗತಿಕ ಗೌರವಕ್ಕೆ ಪಾತ್ರರಾದ ಬಾಬಾ ಸಾಹೇಬ
ಜಗದಗಲ ಮುಗಿಲೆತ್ತರ ಬೆಳೆದ ಭೀಮರಾಯ

ಸ್ವತಂತ್ರ ಭಾರತದ ಸಂವಿಧಾನ ಶಿಲ್ಪಿ
ಅಸ್ಪೃಶ್ಯತೆಯ ವಿರುದ್ಧ ಅಸ್ತ್ರವೆತ್ತಿದ ಕೀರ್ತಿ
ಮನುಜಕುಲವೇ ಶ್ರೇಷ್ಠ ಮತವೆಂದವರು
ಮನುಜ ಹಿತ ಪರಮ ಹಿತವೆಂದರಿತವರು

ಸಂಕಲ್ಪ ಶಕ್ತಿಯಿಂದ ಔನ್ನತ್ಯಕ್ಕೇರಿದ ವಿದ್ವಾಂಸ
ಸಕಲ ಚರಾಚರಗಳನ್ನು ಪ್ರೀತಿಸಿದ ಮನುಷ್ಯ
ಅಜ್ಞಾನ, ಅಂಧಶ್ರದ್ಧೆ, ದಾಸ್ಯ ತೊಲಗಿಸಿದಾತ
ಸುಜ್ಞಾನದ ಬೆಳಕು ಹರಡಿದ ಮಹಾತ್ಮ



## ಕವಿ ಪರಿಚಯ



ರಾಧಾಕೃಷ್ಣ ಕೆ. ಉಳಿಯತ್ತಡ್ಕ ಅವರು ೧೯೫೮ ಆಗಸ್ಟ್ ೧೦ ರಂದು ಮಧೂರಿನ ಬಳಿಯ ಉಳಿಯತ್ತಡ್ಕದಲ್ಲಿ ಜನಿಸಿದರು. ಇವರ ತಂದೆ ಕೆ. ಕಮಲಾಕ್ಷ, ತಾಯಿ ಯು. ರಮಣಿ. ಪೆರಡಾಲ ನವಜೀವನ ಹೈಸ್ಕೂಲಿನಲ್ಲಿ ಪ್ರೌಢಶಿಕ್ಷಣ, ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಪದವಿಪೂರ್ವ ಶಿಕ್ಷಣ, ಮದ್ರಾಸು ಕೃಷಿ ವಿದ್ಯಾಲಯದಿಂದ ಕೃಷಿಯಲ್ಲಿ ತಾಂತ್ರಿಕ ಡಿಪ್ಲೊಮಾ, ಹೈದರಾಬಾದಿನ ಉಸ್ಮಾನಿಯ ಮುಕ್ತ ವಿಶ್ವವಿದ್ಯಾಲಯದಿಂದ ಇತಿಹಾಸದಲ್ಲಿ ಪದವಿ ಶಿಕ್ಷಣ ಪಡೆದರು. ಸರಳಗೀತೆಗಳು, ಈ ನನ್ನ ಶಬ್ದಗಳು, ನೋವ ಜಿನುಗುವ ಜೀವ, ಬೆಂಕಿನುಂಗುವ ಹುಡುಗ, ಹದಿಹರೆಯದ ಹನಿಗಳು, ಅರ್ಧ ಸತ್ಯದ ಬೆಳಕು, ಮೌನ ಬಿಚ್ಚಿದ ಭಾವ ಇವರ ಕವನ ಸಂಕಲನಗಳು. 'ನೆಲದ ಧ್ಯಾನ', 'ಅಕ್ಷರ ಮತ್ತು ಆಕಾಶ' ಸಾಹಿತ್ಯ ಸಮೀಕ್ಷೆಯ ಕೃತಿಗಳು. ಗುರು - ಕವಿ, ಕಯ್ಯಾರ, ಲಕ್ಷ್ಮೀ ಕುಂಜತ್ತೂರು, ಡಾ. ವಸಂತಕುಮಾರ ಪೆರ್ಲ, ಪಿ. ಎಸ್. ಪುಣಿಂಚಿತ್ತಾಯ, ಸಿರಿಬಾಗಿಲು ವೆಂಕಪ್ಪಯ್ಯ, ಕೆ. ವೆಂಕಟಕೃಷ್ಣಯ್ಯ, ಕೆ. ಗೋಪಾಲಕೃಷ್ಣ ಶ್ಯಾನುಭೋಗ್, 'ಕಾಸರಗೋಡಿನ ಕನ್ನಡ ಹೋರಾಟಗಾರ ಅಡೂರು ಉಮೇಶ ನಾೖಕ್', 'ಹಾಸ್ಯ ಸಾಹಿತ್ಯದ (ನಿ)ರೂಪಕ ವೈ. ಸತ್ಯನಾರಾಯಣ ಕಾಸರಗೋಡು' ಮೊದಲಾದ ವ್ಯಕ್ತಿಚಿತ್ರಗಳನ್ನು ಇವರು ರಚಿಸಿದ್ದಾರೆ. ಕುತ್ಯಾಳ ಸಂಪದ, ಮಧೂರು, ಕಯ್ಯಾರ ಗದ್ಯ ಸೌರಭ, ಮದರು ಸಂಕಥನ ಇವರ ಸಂಪಾದಿತ ಕೃತಿಗಳು.

ಈ ಕಥನ ಕವನವನ್ನು ಅವರ 'ರಾಮ ಕಂಡ ಭೀಮ' (ಅಂಬೇಡ್ಕರ್ ಜೀವನ ಕಥನಕವನ) ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಭಾರತದ ಬೆಳಕಾಗಿ ಭೀಮನುದಿಸಿ ಬಂದುದು ಯಾವಾಗ?
2. ಭೀಮಾಬಾಯಿ ಕಾಯಿಲೆಯಿಂದ ಮಲಗಿದಾಗ ಏನಾಯಿತು?
3. ಗುರುಗಳು ಅಭಿಮಾನದಿಂದ ಭೀಮನನ್ನು ಅಭಿನಂದಿಸಲು ಕಾರಣವೇನು?
4. ಬಾಬಾ ಸಾಹೇಬ ಜಾಗತಿಕ ಗೌರವಕ್ಕೆ ಪಾತ್ರರಾದ ಹಿನ್ನೆಲೆಯೇನು?
5. ಅಂಬೇಡ್ಕರ್ ಸುಜ್ಞಾನದ ಬೆಳಕನ್ನು ಹೇಗೆ ಹರಡಿದರು?

## ಸ್ವಾರಸ್ಯ ಬರೆಯಿರಿ

ಕೆಳಗೆ ನೀಡಿರುವ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

- ಜೀವನದ ಭದ್ರತೆಗೆ ಬೇಕು ವಿದ್ಯಾರ್ಜನೆ
  ನೋವನುಂಗಿ ನಿರ್ಭಯದಿ ಮಾಡು ಯೋಚನೆ

- ಮನುಜಕುಲವೇ ಶ್ರೇಷ್ಠ ಮತವೆಂದವರು
  ಮನುಜ ಹಿತ ಪರಮ ಹಿತವೆಂದರಿತವರು

## ಗದ್ಯರೂಪದಲ್ಲಿ ಬರೆಯಿರಿ

'ಭೀಮನುದಿಸಿದನು ಭಾರತದ ಬೆಳಕಾಗಿ' ಕಥನ ಕವನದಲ್ಲಿ ನಿರೂಪಿಸಿರುವ ಅಂಬೇಡ್ಕರ್ ಅವರ ಜೀವನ ಕಥನವನ್ನು ಗದ್ಯರೂಪದಲ್ಲಿ ಬರೆಯಿರಿ.

## ವ್ಯಕ್ತಿಪರಿಚಯ ಬರೆಯಿರಿ

ಕೆಳಗೆ ಕೊಟ್ಟಿರುವ ಮಾಹಿತಿ ಮತ್ತು ಕಥನ ಕವನದಲ್ಲಿ ಬಂದಿರುವ ವಿಚಾರಗಳನ್ನು ಅಳವಡಿಸಿಕೊಂಡು ಡಾ. ಬಿ. ಆರ್. ಅಂಬೇಡ್ಕರ್ ಅವರ ವ್ಯಕ್ತಿಪರಿಚಯ ಬರೆಯಿರಿ.

<u>**ಭೀಮರಾವ್ ರಾಮ್‌ಜೀ ಅಂಬೇಡ್ಕರ್**</u>

| | | |
|---|---|---|
| ಜನನ | : | ೧೮೯೧ ಎಪ್ರಿಲ್ ೧೪ |
| ಜನ್ಮಸ್ಥಳ | : | ಮಧ್ಯಪ್ರದೇಶದ ಮಹೂ ಗ್ರಾಮದಲ್ಲಿ |
| ತಂದೆ | : | ರಾಮ್ ಜಿ |
| ತಾಯಿ | : | ಭೀಮಾಬಾಯಿ |
| ವಿದ್ಯಾಭ್ಯಾಸ | : | ೧೯೦೮ ರಲ್ಲಿ ಮೆಟ್ರಿಕ್ಯುಲೇಷನ್ ತೇರ್ಗಡೆ |
| | | ೧೯೧೭ ರಲ್ಲಿ ಮಹಾಪ್ರಬಂಧಕ್ಕೆ ಪಿ.ಎಚ್.ಡಿ. ಪದವಿ |
| | | ೧೯೧೭ ಸಂವಿಧಾನ ರಚನಾ ಸಮಿತಿ ಅಧ್ಯಕ್ಷರಾಗಿ ನೇಮಕ |
| | | ೧೯೨೭ ರಲ್ಲಿ 'ಬಹಿಷ್ಕೃತ ಭಾರತ' ಮರಾಠಿ ಪಾಕ್ಷಿಕ ಪತ್ರಿಕೆ ಸ್ಥಾಪನೆ |
| | | ೧೯೪೩ ರಲ್ಲಿ ಭಾರತದ ಕಾನೂನು ಮಂತ್ರಿ |
| ನಿಧನ | : | ೧೯೫೬ ಡಿಸೆಂಬರ್ ೬ |

## ಕಿರುಲೇಖನ ಬರೆಯಿರಿ

- ತುಚ್ಛರಾಗಿ ಬದುಕುವವರಿಗೆ ನ್ಯಾಯ ಒದಗಿಸಿದರು
- ಅಸ್ಪೃಶ್ಯತೆಯ ವಿರುದ್ಧ ಅಸ್ತ್ರವೆತ್ತಿದ ಕೀರ್ತಿ

ಇತ್ಯಾದಿ ಸಾಲುಗಳ ಆಧಾರದಲ್ಲಿ ಮತ್ತು ಐ.ಸಿ.ಟಿ.ಯ ಸಹಾಯದಿಂದ ಇನ್ನಷ್ಟು ಮಾಹಿತಿ ಸಂಗ್ರಹಿಸಿ 'ಸಮಾಜ ಸುಧಾರಕ ಅಂಬೇಡ್ಕರ್' ಎನ್ನುವ ವಿಷಯದ ಕುರಿತು ಒಂದು ಕಿರುಲೇಖನ ಬರೆಯಿರಿ.

## ಜೀವನ ಚರಿತ್ರೆಯಾಗಿ ಪರಿವರ್ತಿಸಿರಿ

ಅಂಬೇಡ್ಕರ್ ಅವರಂತೆಯೇ ದೇಶಕ್ಕಾಗಿ ತನ್ನನ್ನು ಸಮರ್ಪಿಸಿಕೊಂಡ ಮಹಾತ್ಮಾ ಗಾಂಧೀಜಿಯವರ ಆತ್ಮಕಥೆಯ ಭಾಗವನ್ನು ಕೆಳಗೆ ಕೊಡಲಾಗಿದೆ. ಅದನ್ನು ಜೀವನ ಚರಿತ್ರೆ ರೂಪಕ್ಕೆ ಪರಿವರ್ತಿಸಿ ಬರೆಯಿರಿ.

ತಂದೆಯವರು ಕೊಂಡುಕೊಂಡು ಬಂದಿದ್ದ ಒಂದು ನಾಟಕ ಪುಸ್ತಕ ನನ್ನ ಕಣ್ಣಿಗೆ ಬಿತ್ತು. ಅದರ ಹೆಸರು 'ಶ್ರವಣನ ಪಿತೃಭಕ್ತಿ'. ನಾನು ಅದನ್ನು ಅತ್ಯಂತ ಆಸಕ್ತಿಯಿಂದ ಓದಿದೆ. ಅದೇ ಸಮಯದಲ್ಲಿ ಸಂಚಾರಿ ಬೊಂಬೆ ಪ್ರದರ್ಶಕರು ನಮ್ಮ ಊರಿಗೆ ಬಂದರು. ಶ್ರವಣ ತನ್ನ ಕುರುಡು ತಂದೆತಾಯಿಯರನ್ನು ಅಡ್ಡೆಯಲ್ಲಿ ಕೂರಿಸಿಕೊಂಡು, ಅದನ್ನು ಹೆಗಲಿನ ಮೇಲೆ ಹೊತ್ತುಕೊಂಡು ಯಾತ್ರೆಗಾಗಿ ಹೋಗುತ್ತಿದ್ದ ಒಂದು ಚಿತ್ರವನ್ನು ನನಗೆ ತೋರಿಸಿದರು. ಆ ಪುಸ್ತಕ ಮತ್ತು ಆ ದೃಶ್ಯ ಎರಡೂ ನನ್ನ ಅಂತರಂಗದಲ್ಲಿ ಶಾಶ್ವತವಾಗಿ ಅಂಕಿತವಾದುವು. ಇಗೋ ಇಲ್ಲಿ ನಿನಗೊಂದು ಆದರ್ಶವಿದೆ. ಅದನ್ನು ಅನುಸರಿಸು ಎಂದು ನನಗೆ ನಾನೇ ಹೇಳಿಕೊಂಡೆ. ಶ್ರವಣ ಮರಣಹೊಂದಲು, ಅವನ ಮಾತಾಪಿತೃಗಳ ಆರ್ತವಿಲಾಪ ನನ್ನ ಕಿವಿಗೆ ಈಗಲೂ ಕೇಳುವಂತಿದೆ. ಆ ವಿಲಾಪ ನನ್ನ ಹೃದಯವನ್ನು ಕರಗಿಸಿತು.

## ಸಂಚಿಕೆ ತಯಾರಿಸಿರಿ

ಅಂಬೇಡ್ಕರ್ ಅವರಂತೆ ಸಮಾಜದ ಏಳಿಗೆಗಾಗಿ ತಮ್ಮ ಜೀವನವನ್ನು ಮುಡಿಪಾಗಿರಿಸಿದ ಮಹನೀಯರೊಬ್ಬರ ಕುರಿತು ಗ್ರಂಥಾಲಯದ ಸಹಾಯದಿಂದ ಪರಿಚಯ ಲೇಖನವೊಂದನ್ನು ಬರೆಯಿರಿ. ಎಲ್ಲಾ ವಿದ್ಯಾರ್ಥಿಗಳ ಲೇಖನಗಳನ್ನು ಒಟ್ಟು ಸೇರಿಸಿ ಒಂದು ಸಂಚಿಕೆ ತಯಾರಿಸಿರಿ.

* * *

# ನಾಯಿ ಮಲ್ಲಿಗೆ

**ಕೆ.ಎಸ್. ನರಸಿಂಹಸ್ವಾಮಿ**

ಎರಡು ವರುಷದ ಹಿಂದೆ ಒಂದು ಸಲ ನಮ್ಮ ತುಂಗಭದ್ರೆಗೆ ದೇಹಾಲಸ್ಯವಾಯಿತು. ಅದು ಜ್ವರಕ್ಕೆ ತಿರುಗಿತು. ಜ್ವರ ಕೆಂಡಾಮಂಡಲವಾಗಿ ಕಾಯುತ್ತಿತ್ತು. ಮೀನಾಕ್ಷಿಗೆ ಭಯ. ನನಗೆ ಆತಂಕ. ನಾವಿಬ್ಬರೂ ಮಗುವಿನ ಹತ್ತಿರವೇ ಇದ್ದು ಒಬ್ಬರಿಗೊಬ್ಬರು ಧೈರ್ಯ ಹೇಳುತ್ತ, ಔಷಧ ಉಪಚಾರ ನಡೆಸುತ್ತಿದ್ದೆವು. ಬಾಗಿಲ ಬಳಿ ನಮ್ಮ ಸಂಸಾರಕ್ಕೆ ಸೇರಿದ ಒಂದು ನಾಯಿ, ನಮ್ಮ ಜಾಕಿ, ಹೊಸಲಿನ ಮೇಲೆ ತಲೆಯಿಟ್ಟು ಮಗುವನ್ನೇ ನೋಡುತ್ತಿತ್ತು. ಮಗುವಿನ ಬಳಿ ನಾನು, ಮೀನಾಕ್ಷಿ ಇಬ್ಬರು ಮಾತ್ರ ಸುಳಿದಾಡಬಹುದಾಗಿತ್ತು. ಇನ್ನು ಯಾರೂ ಎಂಥ ಒಳ್ಳೆಯವರೂ ನೆರಳು ಹಾಕುವಂತಿರಲಿಲ್ಲ. ಜಾಕಿ ಅಡ್ಡ ಬರುತ್ತಿತ್ತು. ನಾನಾಗಲಿ ಆಕೆಯಾಗಲಿ ಮರೆಯಾದ ವೇಳೆಯಲ್ಲಿ ಮಗು ಅತ್ತರೆ, ನಿಂತು, ಏನಾಯಿತೆಂದು ಕಣ್ಣಲ್ಲೇ ಕೇಳುತ್ತಿತ್ತು. ಮಗು ಸುಮ್ಮನಾಗುತ್ತಿತ್ತು.



ಇಂಥ ಒಳ್ಳೆಯ ನಾಯಿಯ ವಿಚಾರದಲ್ಲಿ ನಮಗೆ ತುಂಬ ನಂಬಿಕೆ ಬಂದದ್ದು ಆಶ್ಚರ್ಯವೇನಲ್ಲ. ಬರುತ್ತ ಬರುತ್ತ ಜಾಕಿ ನಮ್ಮ ಮನಸ್ಸಿಗೆ ನಾಯಿಯಾಗಿ ತೋರಲಿಲ್ಲ. ನಾವು ಅದಕ್ಕೆ ದಿನವೂ ಹಾಕುತ್ತಿದ್ದ ಒಂದು ತುತ್ತು ಅನ್ನಕ್ಕಾಗಿ ತನ್ನ ಕೃತಜ್ಞತೆಯನ್ನು ಸೂಚಿಸುವ ಕೇವಲ ಒಂದು ಮೂಕಪ್ರಾಣಿಯಾಗಿಯೂ ತೋರಲಿಲ್ಲ. ಅದಕ್ಕಿಂತಲೂ ಹೆಚ್ಚಿನ ಸೌಹಾರ್ದಕ್ಕೆ ಬಾಳುವ, ನಮ್ಮನ್ನು ಅರ್ಥಮಾಡಿಕೊಂಡು ನಮ್ಮ ಕಷ್ಟ ಸುಖಗಳಲ್ಲಿ ಬೆರೆಯುವ

ಮಾನವರೂಪವೊಂದು ಮಾತ್ರ ಇಲ್ಲದ, ಪರಮ ಸ್ನೇಹಿತನಂತೆ ತೋರಿತು. ಮಗುವಿಗೆ ಆಟಕ್ಕೆಂದು ನಾನು ಮದರಾಸಿನಿಂದ ತಂದ ನಾಯಿಬೊಂಬೆಗೆ ಈ ಗುಣವಿರಲಿಲ್ಲ. ಅದರ ಕಣ್ಣಿನಲ್ಲಿ ಜೀವದ ದೀಪವಿರಲಿಲ್ಲ. ಅದಕ್ಕೆ ಸುಮ್ಮನೆ ನಾಲ್ಕು ರೂಪಾಯಿ ಸುರಿದ ದಡ್ಡ ನಾನು. ಮಗು ಅದನ್ನು ಆಡಿಸಿ ಓಡಿಸಿ ಮೂಲೆಗೆ ಎಸೆಯಿತು. ನಮ್ಮ ಜಾಕಿಯಂತೆ ಅದು ಒಂದು ನಿಮಿಷವೂ ಮಗುವನ್ನು ಆಡಿಸಿಲ್ಲ. ಮಗುವಿನ ವಿಷಯದಲ್ಲಿ ಅದಕ್ಕೆ ಅಭಿಮಾನವೂ ಇಲ್ಲ. ಆತಂಕವೂ ಇಲ್ಲ. ಜಾಕಿ ಹಾಗಲ್ಲ. ಮಗುವಿನ ಮೇಲೆ ಸಾವಿರ ಕಣ್ಣು ಅದಕ್ಕೆ. ಮಗು ಆಡಿಕೊಂಡಿರದಂತೆ ಈ ಜ್ವರ ತಡೆಯುತ್ತಿದೆಯಲ್ಲ, ಮಗು ತೆಳ್ಳಗಾಯಿತಲ್ಲ ಎಂದು ನಾನೂ ಅವಳೂ ಮಾತಾಡಿಕೊಳ್ಳುತ್ತಿದ್ದರೆ, ನಾಯಿ ನಮ್ಮಿಬ್ಬರ ನಡುವೆ ನಿಂತು 'ಏಕೆ?' ಎಂದು ಕೇಳಿದಂತಿತ್ತು. ಅದು ಹೊಸಿಲ ಮೇಲೆ ತಲೆಯಿಟ್ಟು ಮಲಗಿದ್ದರೆ, ಆವೊಂದು ಅಂಚು ಒದ್ದೆಯಾಗಿರುತ್ತಿತ್ತು.

ದಿನದಿನಕ್ಕೆ ಜ್ವರ ಕಳೆದು ಮಗು ಗುಣಮುಖವಾಗುತ್ತ ಬಂದಿತು. ಮತ್ತೆ ಚೆದುರಿದ ಮೋಡ, ಒಂದೆಳೆ ಹೊಂಬಿಸಿಲು. ಮಗು ಎದ್ದು ನಿಲ್ಲಲು, ನಿಂತು ನಡೆಯಲು ಗೋಡೆಯ ಪಕ್ಕದಲ್ಲಿ ಸಾಹಸ ಮಾಡುತ್ತಿತ್ತು. ರೆಕ್ಕೆಯಿಲ್ಲದ ಹಕ್ಕಿಯಂತೆ ಚಾಪೆಯ ಮೇಲೆ ಬೀಳುತ್ತಿತ್ತು. ಮಗು ಬಿದ್ದಿತಲ್ಲ ಎಂದು ನಾವು ನುಗ್ಗುವ ಮೊದಲೇ ಜಾಕಿ ಅಲ್ಲಿಗೆ ಹಾರಿ ಮಗುವಿಗೆ ಬೆನ್ನು ಕೊಟ್ಟು ಅದು ಬೀಳದಂತೆ ನೋಡಿಕೊಳ್ಳುತ್ತಿತ್ತು. ಮಗು ತನ್ನ ಪುಟ್ಟ ಕೈಗಳಿಂದ ನಾಯಿಯ ಬೆನ್ನನ್ನು ತಟ್ಟಿ ತನ್ನ ಜೇಬಿನಲ್ಲಿದ್ದ ಬಿಸ್ಕತ್ತನ್ನು ನಾಯಿಯ ಬಾಯಿಗಿಡುತ್ತಿತ್ತು. ಮಗು ಓಡಾಡಿತು. ನಾಯಿಯ ಮುಖ ಗೆಲುವಾಯಿತು. 'ಜ-ಆ-ಕೀ' ಎಂದು ಮಗು ಕೂಗಿದರೆ, ಅದು ಎಲ್ಲಿಂದಲೋ ಹಾರಿಬಂದು ಉದ್ದವಾಗಿ ಕಾಲು ನೀಡಿ ತಲೆ ಚಾಚಿ ಮಗುವಿಗೆ ನಮಸ್ಕಾರ ಮಾಡುತ್ತಿತ್ತು. ಆ ನಮಸ್ಕಾರ ಬಹುಶಃ ಮಗುವನ್ನು ಕಾಪಾಡಿದ ದೇವರಿಗೇ ಇರಬೇಕು.

ಜ್ವರ ಬಿಟ್ಟರೂ ಮಗು ಬಡವಾಗಿ ಮಲ್ಲಿಗೆಯ ಹಂಬಿನಂತಿತ್ತು. ಒಂದು ಸಲ ಡಾಕ್ಟರಿಗೆ ತೋರಿಸಿ ವಿಷಯ ತಿಳಿದು ಆರೈಕೆ ಮಾಡಬಹುದಲ್ಲವೆ ಎಂದು ಇವಳು ಸೂಚಿಸಿದಳು. ನಾನೂ ಒಪ್ಪಿದೆ.

ಮಾರನೆಯ ದಿನ ಬೆಳಗಿನ ಒಂಬತ್ತು ಘಂಟೆಯ ಹೊತ್ತಿಗೆ ಟಾಂಗಾ ಬಂದು ಬಾಗಿಲಲ್ಲಿ ನಿಂತಿತು. ನಾನು ಅಣಿಯಾಗುವುದಕ್ಕೆ ಹೆಚ್ಚು ಹೊತ್ತು ಹಿಡಿಯಲಿಲ್ಲ. ಇವಳೂ ಬೇಗ, ಎಂದಿಗಿಂತ ಬೇಗ ಸಿದ್ಧವಾದಳು. ಆಗ ನಮ್ಮ ಜಾಕಿ ಮನೆಯಲ್ಲಿರಲಿಲ್ಲ. ನಾನೂ ಹುಡುಕಲಿಲ್ಲ. ಸರಿ, ತುಂಗಭದ್ರೆಗೆ ಬಿಳಿ ಲಂಗ ಹಾಕಿ ಬೆಚ್ಚಗೆ ಶಾಲು ಹೊದ್ದಿಸಿಕೊಂಡು, ಮೀನಾಕ್ಷಿ, ಟಾಂಗದಲ್ಲಿ ಕುಳಿತಳು. ನಾನೂ ಕನ್ನಡಕ ಸರಿಮಾಡಿಕೊಂಡು ಪಕ್ಕದಲ್ಲಿ ಕುಳಿತೆ. ಈ ಬಗೆಯ ಮೆರವಣಿಗೆ ಬಾಳಿಗೆ ಆಗಾಗ ಒದಗುತ್ತದೆ. ಅದೂ ಒಳ್ಳೆಯದೇ. ಮಗುವಿನ ಅಂಗಿಗೆ ಗುಂಡಿ ಹಾಕುವ ಸಡಗರದಲ್ಲಿ ಮೀನಾಕ್ಷಿ ನಕ್ಕ ನಯವಾದ ನಗೆ. ಆ ಹಿಗ್ಗಿನ ಸಮಯದಲ್ಲಿ ಅವಳ ತುರುಬಿನಿಂದ ಏಕಾಏಕಿ ನನ್ನ ಮೇಲುರುಳಿದ ಒಂದು ದುಂಡು ಮಲ್ಲಿಗೆಯರಳು, ಅದನ್ನು ಹಿಡಿಯಲು ತವಕಿಸಿದ ತುಂಗಭದ್ರೆಯ ಪುಟ್ಟ ಕೈಬೆರಳು - ಇವುಗಳಿಗೆ ನಾನು ಬೆರಗಾಗಿ, ಏನನ್ನೋ ಜ್ಞಾಪಿಸಿಕೊಳ್ಳುತ್ತಿದ್ದಾಗ, ಬೀದಿಯ ತಿರುವಿನಲ್ಲಿ, ಜಾಕಿ ನಮ್ಮನ್ನು ಕಂಡು ಬೆನ್ನಟ್ಟಿ ಬಂದಿತು.

ಮಗು ಹಾಸಿಗೆ ಹಿಡಿದಿದ್ದ ದಿನದಿಂದಲೂ ತನ್ನ ಅನ್ನದ ತುತ್ತನ್ನು ಸಂಪೂರ್ಣವಾಗಿ ಸಂತೋಷವಾಗಿ ತಿನ್ನದಿದ್ದ ನಾಯಿ, ತನ್ನ ಆತಂಕವೊಂದೇ ತನ್ನ ಎಲ್ಲ ಶಕ್ತಿಯೂ ಆಗಿ, ಕುದುರೆಯೊಂದಿಗೆ ಕುದುರೆಯಂತೆ ಓಡಿ ಓಡಿ ಬರುತ್ತಿತ್ತು. ನಾನು ಹೇಳಿದೆ – ಮನೆಗೆ ಹೋಗು ಜಾಕಿ, ಕಾವಲಾಗಿರು. ಬಂದು ಬಿಡುತ್ತೇವೆ ಎಂದು. ಇವಳು ಹೇಳಿದಳು - ಹೋಗು ಜಾಕಿ, ನೀನು ಬರಬಾರದು. ಮನೆಗೆ ಹೋಗು, ಭಯವಿಲ್ಲ. ಹೋಗು ಎಂದು. ಅದು 'ಉಹುಂ' ಎಂದಿತು. ಮಗು ಉದ್ದಕ್ಕೂ ಕೈನೀಡಿ ನಾಯಿಯನ್ನೇ ತೋರಿಸುತ್ತಿತ್ತು. ನಾಯಿ ಕುದುರೆಯ ಕಾಲುಕಾಲಿಗೆ ತೊಡರುತ್ತಿತ್ತು. ಸಾರಥಿ ಸಾಬಿ ತುಂಬ ಸಹನೆಯಿಂದ ಜಾಣ್ಮೆಯಿಂದ ಟಾಂಗಾ ನಡೆಸಿದ. ದಾರಿಯಲ್ಲಿ ಜನ ಏನಂದುಕೊಂಡರೋ! ಕಷ್ಟಪಡುವುದಕ್ಕೇ ಹುಟ್ಟಿದ ಕುದುರೆಗೆ ಈ ನಾಯಿಯ ಕಾಟದಿಂದ ಹೆಚ್ಚು ಹಿಂಸೆಯಾಗಿರಲಾರದು! ಕಣ್ಣ ಪಟ್ಟಿ ಇರುವುದು ಕುದುರೆಯ ಕಂಬನಿ ನಮಗೆ ಕಾಣದಿರಲಿ ಎಂದು ಅಷ್ಟೆ.

ನಾವು ಆಸ್ಪತ್ರೆಗೆ ಬಂದ ಕೂಡಲೇ ದತ್ತಾತ್ರಿಯವರು ನಮ್ಮನ್ನು ಪ್ರೀತಿಯಿಂದ ಮಾತಾಡಿಸಿದರು. ನಾವು ಅವರ ಕೂಡ ಮಗುವಿನ ವಿಷಯ ಮಾತಾಡುತ್ತ ಕುಳಿತೆವು. ಜಾಕಿ ಮಗುವಿನ ಹತ್ತಿರ ಕಿವಿ ಮೇಲಕ್ಕೆ ಮಾಡಿಕೊಂಡು ನಿಂತುಬಿಟ್ಟಿತು. ಏಳು ಜಾಕಿ, ಹೊರಗಿರು ಎಂದೆ. ಅದು ಏಕೆ ಕೇಳಬೇಕು! ಡಾಕ್ಟರ್ ಮಗುವನ್ನು ಎತ್ತಿಕೊಂಡು ಒಳ ಮನೆಗೆ ಹೋದರು. ನಾವೂ ಹಿಂದೆ ಹೋದೆವು. ನಾಯಿಯೂ ಬಂದುಬಿಟ್ಟಿತು. ''ಈ ನಾಯಿ ನಮ್ಮನ್ನು ಬಿಡುವಂತಿಲ್ಲ'' 'ಇರಲಿ, ಬಿಡಿ' ಎನ್ನುತ್ತ ಡಾಕ್ಟರ್ ನಕ್ಕರು. ಆಮೇಲೆ ಮಗುವನ್ನು ತಕ್ಕಡಿಯ ಮೇಲೆ ನಿಲ್ಲಿಸಿದರು. ನಾಲಗೆ ಹಿಡಿದು ನೋಡಿದರು. ಬೆನ್ನನ್ನು ಮಿಡಿದು, ಎದೆಯ ಮೇಲೆ ತಲೆಯಿಟ್ಟು, ಪರೀಕ್ಷೆ ಮಾಡಿದರು. ಅಲ್ಲಿಗೇ ನಿಲ್ಲಿಸದೆ, ಹೊಟ್ಟೆಯಲ್ಲಿ ಗಡ್ಡೆಯಿದೆಯೇ ನೋಡೋಣವೆಂದೋ ಏನೋ, ಮಗುವನ್ನು ರಬ್ಬರಿನ ಮಂಚದ ಮೇಲೆ ಮಗ್ಗುಲಾಗಿ ಮಲಗಿಸಿದರು. ಮಗುವಿಗೆ ಇಂಜೆಕ್ಷನ್ನಿನ ಭಯವೇ ಬಂದಿತೋ, ಇಲ್ಲ, ರಬ್ಬರಿನ ಮಂಚ ತಣ್ಣಗೆ ಕೊರೆಯುತ್ತಿದ್ದುದರಿಂದಲೋ ಅಂತೂ ಅದೊಂದು ಸಲ ಕಿಟ್ಟನೆ ಕಿರುಚಿತು. ಕೂಡಲೆ ನಾಯಿ ಡಾಕ್ಟರನ್ನು ಬೆದರಿಸುತ್ತ ಎಲ್ಲರನ್ನೂ ತಳ್ಳಿಕೊಂಡು ಮಂಚವನ್ನು ಹತ್ತಿ ಮಗುವಿನ ಬಳಿ ಅಡ್ಡಲಾಗಿ ನಿಂತುಕೊಂಡಿತು. ಅವರು ಮಗುವನ್ನು ಮತ್ತೆ ಮುಟ್ಟಗೊಡಿಸಲಿಲ್ಲ, ಆ ನಾಯಿ!

ಕಡೆಗೆ ಯತ್ನವಿಲ್ಲದೆ ನಾನು ಜಾಕಿಯನ್ನು ಎಳೆದು ಹಿಡಿದುಕೊಂಡೆ. ಅದೆಷ್ಟು ಹಗುರವಾಗಿತ್ತು ಅದರ ಮೈ. ಹಾಗೆಯೇ ಮನಸ್ಸಿನಲ್ಲಿ, ಇದೇನಿದು ಇಷ್ಟು ತೆಳ್ಳಗಾಯಿತಲ್ಲ, ಎಂದುಕೊಂಡೆ. ಅಂತೂ ಅವರು ಮಗುವನ್ನು ವಿವರವಾಗಿ ಪರೀಕ್ಷಿಸಿ, 'ಆರೋಗ್ಯವಾಗಿದೆ, ಭೇಷಾಗಿದೆ. ತುಂಬ ಹಾಲು ಹಣ್ಣು ಅಪ್ಪಚ್ಚಿ ಕೊಡಿ, ತಿಂಗಳು ಕಳೆಯಲಿ, ನಾನೇ ಬಂದು ನೋಡುತ್ತೇನೆ' ಎಂದು ಹೇಳಿ, ತುಂಗಭದ್ರೆಯನ್ನು ಮೆಲ್ಲಗೆ ಕೆನ್ನೆಗೆ ಒತ್ತಿಕೊಂಡು ಕೆಳಗಿಳಿಸಿದರು. ಮಗು ಮೆಲ್ಲಗೆ ನಕ್ಕು ನಾಯಿಯನ್ನು ನೋಡಿತು. ನಾಯಿ ಡಾಕ್ಟರಿಗೆ ನಮಸ್ಕಾರ ಮಾಡಿತು. ಮೀನಾಕ್ಷಿ, ನಡುರಾತ್ರಿಯಲ್ಲಿ ಸಿರಿ ಬಂದಷ್ಟು ಸಂಭ್ರಮದಿಂದ, ನನ್ನ ಕಡೆ ನೋಡಿದಂತೆ ಮಾಡಿ 'ಜೈಹಿಂದ್ ಮಾಡಮ್ಮ ಡಾಕ್ಟರಿಗೆ' ಎಂದಳು. ಮಗು ನಾಚಿಕೊಂಡು ದೂರ ಇದ್ದ ಕೈಗಳನ್ನು ನಿಧಾನವಾಗಿ ಜೋಡಿಸಿಕೊಂಡು ಡಾಕ್ಟರಿಗೆ ಕೈ ಮುಗಿಯಿತು.

ನಮ್ಮ ಡಾಕ್ಟರ್ ನಮ್ಮ ಆರೋಗ್ಯದ, ಸಂತೋಷದ, ಸಾಂಸಾರಿಕ ಸ್ಥೈರ್ಯದ ಹಡಗಿನ ಯಜಮಾನರು. ಅವರು

ಹೇಳಿದ್ದು ನಮಗೆ ವೇದವಾಕ್ಯ. ಅವರು ಅಭಯ ಕೊಡುತ್ತಲೇ ಇರುವುದರಿಂದ ನಾವು ನಿರ್ಭಯವಾಗಿದ್ದೇವೆ. ಮಗುವಿನ ವಿಷಯದಲ್ಲಿ 'ಏನೂ ಭಯವಿಲ್ಲ' ಎಂದು ಅವರು ಹೇಳಿದ ಮೇಲೆ ನಮಗೆ ಎಷ್ಟೋ ಧೈರ್ಯವಾಯಿತು. ಅವರೂ ನಮ್ಮ ಜೊತೆ ಟಾಂಗಾ ಬಳಿಗೆ ಬಂದರು ಮತ್ತು ಹೊರಡುವ ಸಮಯದಲ್ಲಿ ಹೇಳಿದರು - 'ನೋಡಿ, ಮೂರ್ತಿ, ಮಗು ಚೆನ್ನಾಗಿದೆ. ಆದರೆ, ಈ ನಾಯಿ ತೆಳ್ಳಗಾಗುತ್ತ ಬಂದಿದೆ, ಅದರ ಸ್ಥಿತಿ ಚಿಂತಾಜನಕವಾಗಿದೆ. ಇದಕ್ಕೆ ಸ್ವಲ್ಪ ಔಷಧ ಕೊಡಿಸಿ. ಸರಿಯಾಗಿ ನೋಡಿಕೊಳ್ಳಿ' ಎಂದು. ನಾನೂ ಈ ಮಾತು ಒಪ್ಪಿದೆ. ಮಗು ನಾಯಿಯನ್ನೇ ನೋಡುತ್ತಿತ್ತು. ನಾಯಿ ತನ್ನ ಗುಲಾಬಿ ನಾಲಿಗೆಯನ್ನು ಉದ್ದವಾಗಿ ನೀಡಿ ಮಗುವನ್ನೇ ನೋಡುತ್ತಿತ್ತು.

ಹಿಂದಿರುಗುವಾಗ ಜಾಕಿ ನಮ್ಮ ಟಾಂಗಾ ಹಿಂದೆ ಓಡಿಬರಲಿಲ್ಲ. ದಾರಿಯಲ್ಲಿ ಎಲ್ಲೋ ಕಣ್ಮರೆಯಾಯಿತು. ಅಂತೂ ನಾವು ಮನೆಗೆ ಬರುವಷ್ಟರಲ್ಲಿ ಅದು ಬಾಗಿಲ ಬಳಿ ಕಂಬಳಿ ಚೂರಿನಂತೆ ಬಿದ್ದುಕೊಂಡು ಪಿಳಿಪಿಳಿ ಕಣ್ಣು ಬಿಟ್ಟು ನಮ್ಮನ್ನೇ ಕಾಯುತ್ತಾ ಮಲಗಿತ್ತು.

ಡಾಕ್ಟರ್ ದೇವರಲ್ಲ, ಆದರೂ ಅವರು ಹೇಳಿದ್ದಂತೆ ಜಾಕಿ ಬಡವಾಗುತ್ತ ಬಂದಿತು. ಹತ್ತು ದಿನ ಔಷಧ ತರಿಸಿ ಅನ್ನದಲ್ಲಿ ಬೆರಸಿ ಹಾಕಿದೆವು. ಏಕೋ ಏನೋ ಅದು ಒಂದನ್ನೂ ಮುಟ್ಟಲಿಲ್ಲ. ಇವರು 'ನನಗೆ ಔಷಧ ಹಾಕಿದ ಅನ್ನ ಹಾಕುತ್ತಾರಲ್ಲ' ಎಂದು ತುಂಬ ಬೇಸರಪಟ್ಟುಕೊಂಡು ಉಪವಾಸ ಮಾಡುತ್ತಾ ಮನೆಯ ಬಾಗಿಲಲ್ಲಿ ಒಂದು ಹಿಡಿ ಹುಲ್ಲಾಗಿ ಬಿದ್ದಿತ್ತು. ನಾಯಿ ತನ್ನೊಡನೆ ಆಡುತ್ತಿಲ್ಲವಲ್ಲ ಎಂದು ತುಂಗಭದ್ರೆಗೆ ಕೊರಗು. ಮೊದಲೇ ಮಗುವಿಗಾಗಿ ಬಳಲಿ ಹಣ್ಣಾಗಿದ್ದ ಮೀನಾಕ್ಷಿ ಮತ್ತೂ ಮೃದುವಾಗಿ 'ಅಯ್ಯೋ ನೋಡಿ! ನಮ್ಮ ಜಾಕಿ ಹೇಗಾಯಿತು' ಎಂದು ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತಿದ್ದಳು. ನನ್ನ ಸಂಸಾರದ ನಿಜವಾದ ಸ್ನೇಹಿತನಂತೆ ಇದ್ದ ವಸ್ತು ಹೀಗೆ ತನ್ನ ಮೈಯನ್ನೆಲ್ಲ ಕಳೆದುಕೊಂಡು ಮಾತಾಡದೆ ಮಲಗಿದೆಯಲ್ಲ ಎನ್ನುವ ಚಿಂತೆಯಲ್ಲಿ ನನಗೂ ದಾರಿ ತೋರಲಿಲ್ಲ. ಅದನ್ನು ಉಳಿಸಿಕೊಳ್ಳಲು ನಾವು ಮಾಡಿದ ಸಾಹಸ ವಿಧಿಯ ಕಣ್ಣಿಗೆ ಅಪರಾಧವೆನಿಸಿತೇನೋ! ನಾವೂ ಹೋರಾಡಿದೆವು. ಇದನ್ನು ಸಾವಿನ ಬಾಯಿಗೆ ಸುಮ್ಮನೆ ಕೊಡಲೇಬಾರದೆಂದು ವಿಶ್ವ ಪ್ರಯತ್ನ ಮಾಡಿದೆವು. ನಾಯಿಗೂ ಅದರಿಂದ ಹಿಂಸೆಯೇ ಆಯಿತು. ಪ್ರಯೋಜನವಾಗಲಿಲ್ಲ. ಯಮಪಾಶದ ಎಳೆತದಲ್ಲಿಯೂ ನಾಯಿಗೆ ಮಗುವಿನ ಮೇಲೆ ತುಂಬ ಗೀಳು. ಮಗು ದೂರದಲ್ಲಿ ಓಡಾಡುತ್ತಿದ್ದರೆ, ನಾನೇ ನಿನ್ನ ಹತ್ತಿರ ಬರುತ್ತೇನೆಂದು ಜಾಕಿ ತೆವಳಲು ಹವಣಿಸುತ್ತಿತ್ತು. ಪ್ರಾಣವಿತ್ತು. ತ್ರಾಣವಿರಲಿಲ್ಲ. ಹೀಗೆರಡು ದಿನ ಬದುಕಿನ ಬಯಲಿನಲ್ಲಿ ಸಾವಿನ ನೆರಳು ಬೊಂಬೆಯಾಟ ನಡೆಯಿತು. ಎರಡೇ ದಿನ, ಅಷ್ಟೆ!

ಮಗುವಿಗಾಗಿ ನೊಂದು ನವೆದಿದ್ದ ನಾಯಿ, ತನ್ನ ನೋವಿಗೆ ಆಹುತಿಯಾಗಿ, ಚಿತ್ರಾ ಪೂರ್ಣಿಮೆಯ ನಡುಹಗಲಲ್ಲಿ ದೊಡ್ಡದಾಗಿ ಕಣ್ತೆರೆದು ಲೋಕದ ವ್ಯವಹಾರವನ್ನೆಲ್ಲ ಮುಗಿಸಿಕೊಂಡು ತಣ್ಣಗಾಯಿತು. ಸತ್ತ ನಾಯಿಯ ಮೇಲೆ ಕಂಬಳಿಯ ಚೂರೊಂದನ್ನು ಹೊದಿಸಿದೆ, 'ತುಂಗಭದ್ರೆಯನ್ನು ಪಕ್ಕದ ಮನೆಯಲ್ಲಿ ಬಿಟ್ಟು ಬಾ, ಇದರ ಕೆಲಸ ಮುಗಿದ ಮೇಲೆ ಕರೆತರಬಹುದು' ಎಂದು ನಾನು ಮೀನಾಕ್ಷಿಗೆ ಹೇಳಿದೆ. ಪಾಪ! ಅವಳಿಗೂ ಕೈಕಾಲು ನಡುಕ,

ಆದರೂ ಮಗುವನ್ನೆತ್ತಿಕೊಂಡು ಈಚೆಗೆ ಬಂದಳು. ಮಗು ಇವರೇಕೆ ಹೀಗೆ ಮಾಡುತ್ತಾರೆ ಎನ್ನುವ ಸಂಶಯದಿಂದ ನನ್ನ ಕಡೆ ನೋಡಿ 'ಅಣ್ಣಾ, ಜಾಕೀಗೆ ಚಳಿ, ನನ್ನ ಕಂಬಳೀ ಹೊದಿಸು' ಎಂದಿತು. ಆಗಲಿ, ಎಂದು ನನ್ನ ದುಃಖವನ್ನೆಲ್ಲ ನುಂಗಿಕೊಂಡೆ.

ಮೀನಾಕ್ಷಿ ಹೋಗಿ ಬರುವಷ್ಟರಲ್ಲಿ ಬೇಲಿಯ ಮೂಲೆಯ ತೆಂಗಿನ ಮರದ ಬಳಿ ಆಳವಾಗಿ ಅಗೆದು, ತಾಯಿ ಮಣ್ಣಿನಲ್ಲಿ ಜಾಕಿಯನ್ನು ಮಲಗಿಸಿ ಮೇಲೆ ಮಣ್ಣೆಳೆದು, ಇದೂ ಒಂದು ಕರ್ತವ್ಯವಾದರೆ, ಇದೋ ನಿನ್ನಿಷ್ಟ ಎಂದು ದೇವರಿಗೆ ಕೈಮುಗಿದೆ. ಮೇಲೊಂದು ಮಲ್ಲಿಗೆಯ ಹಂಬನ್ನು ಹಬ್ಬಿಸಿದೆ. ಅದು ನನ್ನಿಷ್ಟ.

ಮೀನಾಕ್ಷಿ ಅಳುತ್ತ ತುಂಗಭದ್ರೆಯನ್ನು ಮನೆಗೆ ಕರೆತಂದಳು. ಹೊಸಿಲ ಬಳಿ ನಾಯಿ ಇಲ್ಲದ್ದನ್ನು ನೋಡಿ ಮಗು ಜಾಕಿ ಎಲ್ಲಿ? ಎಂದು ಕೇಳಿ, ಕೇಳಿ ನಮ್ಮನ್ನೂ ಅಳಿಸಿ, ಉತ್ತರ ಬಾರದಿರಲು ಸುಸ್ತಾಗಿ ಚಾಪೆಯ ಮೇಲೆ ಮಲಗಿತು.

ಹಬ್ಬದ ಅಡುಗೆಯನ್ನು ಬಿಸಾಡಿ ಕಣ್ಣೀರಿನಲ್ಲಿ ಕೈತೊಳೆದುಕೊಂಡೆವು. ಆ ಮಲ್ಲಿಗೆಯ ಹಂಬು ಈಗ ದೊಡ್ಡ ದೊಡ್ಡ ಹೂಗಳನ್ನು ಕೊಡುತ್ತಿದೆ. ಆ ನಾಯಿ ಹಾಗೆ ಕಣ್ಣು ಬಿಟ್ಟುಕೊಂಡೇ ಮಣ್ಣಾಗಿತ್ತು.

## ಲೇಖಕರ ಪರಿಚಯ



ಪ್ರೇಮಕವಿ ಎಂದೇ ಪ್ರಸಿದ್ಧರಾದ ಕೆ.ಎಸ್. ನರಸಿಂಹಸ್ವಾಮಿ ಆಧುನಿಕ ಕನ್ನಡ ಕಾವ್ಯ ಪರಂಪರೆಯು ಕಂಡ ಶ್ರೇಷ್ಠ ಕವಿಗಳಲ್ಲೊಬ್ಬರು. ೧೯೧೫ ಜನವರಿ ೨೬ ರಂದು ಮಂಡ್ಯ ಜಿಲ್ಲೆಯ ಕಿಕ್ಕೇರಿಯಲ್ಲಿ ಜನಿಸಿದ ಇವರು ಮೈಸೂರು ಹಾಗೂ ಬೆಂಗಳೂರಿನಲ್ಲಿ ಪ್ರಾಥಮಿಕ ಹಾಗೂ ಇಂಟರ್ ಮೀಡಿಯೇಟ್ ಶಿಕ್ಷಣವನ್ನು ಪಡೆದರು. 'ಮೈಸೂರು ಮಲ್ಲಿಗೆ' ಅವರ ಪ್ರಸಿದ್ಧ ಕವನಸಂಕಲನ. 'ದೀಪದ ಮಲ್ಲಿ', 'ಇರುವಂತಿಗೆ', 'ಉಂಗುರ', 'ಶಿಲಾಲತೆ', 'ತೆರೆದ ಬಾಗಿಲು', 'ದುಂಡುಮಲ್ಲಿಗೆ' ಮೊದಲಾದವು ಇತರ ಕವನಸಂಕಲನಗಳು. ಇವರ ಆಯ್ದ ಕವನಗಳ ಸಂಕಲನವು 'ಹಾಡು ಹಸೆ' ಎಂಬ ಹೆಸರಿನಲ್ಲಿ ಪ್ರಕಟಗೊಂಡಿದೆ. 'ಉಪವನ', 'ದಮಯಂತಿ', 'ಸಿರಿಮಲ್ಲಿಗೆ' ಮೊದಲಾದುವು ಗದ್ಯ ಕೃತಿಗಳು.

ಕೆ.ಎಸ್.ನ ಅವರ ಸಾಹಿತ್ಯ ಸೇವೆಗೆ ಸಂದ ಪ್ರಶಸ್ತಿ, ಪುರಸ್ಕಾರಗಳು ಹಲವಾರು. ಅವುಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕುಮಾರನ್ ಆಶಾನ್ ಪ್ರಶಸ್ತಿ, ಪಂಪ ಪ್ರಶಸ್ತಿ, ಹಾಗೂ ಬೆಂಗಳೂರಿನ ವಿಶ್ವವಿದ್ಯಾನಿಲಯ ನೀಡಿದ ಗೌರವ ಡಾಕ್ಟರೇಟ್ ಪ್ರಮುಖವಾದುವು. ಇವರು ಮೈಸೂರಿನಲ್ಲಿ ನಡೆದ ಅರುವತ್ತನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. 'ಚಂದನ' ಕೆಎಸ್‌ನ ಅವರ ಅಭಿನಂದನ ಗ್ರಂಥವಾಗಿದೆ. ೨೦೦೩ ಡಿಸೆಂಬರ್ ೨೭ ರಂದು ಇವರು ನಿಧನ ಹೊಂದಿದರು. ಈ ಕತೆಯನ್ನು ಕೆ.ಎಸ್. ನರಸಿಂಹಸ್ವಾಮಿ ಅವರ 'ಉಪವನ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಮೀನಾಕ್ಷಿ ಮತ್ತು ಕತೆಗಾರರು ಭಯ, ಆತಂಕಗಳಿಗೆ ಒಳಗಾಗಲು ಕಾರಣವೇನು?
2. ಮಗುವಿನ ಆಟಕ್ಕೆಂದು ತಂದ ನಾಯಿಬೊಂಬೆಗೂ ಜಾಕಿಗೂ ಇರುವ ವ್ಯತ್ಯಾಸವೇನು?
3. ನಾಯಿಯು ಡಾಕ್ಟರನ್ನು ಬೆದರಿಸುತ್ತಾ ಮಗುವಿನ ಬಳಿ ಅಡ್ಡಲಾಗಿ ನಿಂತುಕೊಂಡುದೇಕೆ?
4. ಮಗುವನ್ನು ವಿವರವಾಗಿ ಪರೀಕ್ಷಿಸಿದ ಡಾಕ್ಟರ್ ಏನು ಹೇಳಿದರು?
5. ನಾಯಿ ಸತ್ತ ಬಳಿಕ ಮೀನಾಕ್ಷಿಯು ಪಕ್ಕದ ಮನೆಗೆ ಹೋಗಿ ಬರುವಷ್ಟರಲ್ಲಿ ಕತೆಗಾರರು ಏನು ಮಾಡಿದರು?

## ಇಷ್ಟವಾದ ಘಟನೆ ಬರೆಯಿರಿ

ಈ ಪಾಠದಲ್ಲಿ ನಿಮಗೆ ತುಂಬಾ ಇಷ್ಟವಾದ ಘಟನೆಯನ್ನು ಬರೆದು ಅದು ಯಾಕೆ ಇಷ್ಟವಾಯಿತು ಎಂದು ವಿವರಿಸಿ ಬರೆಯಿರಿ.

## ವಾಕ್ಯ ರಚಿಸಿರಿ

ಅಡಿಗೆರೆ ಎಳೆದಿರುವ ನುಡಿಗಟ್ಟಿನ ಅರ್ಥ ತಿಳಿದುಕೊಂಡು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿರಿ.

- ಬಳಲಿ ಹಣ್ಣಾಗು - ಮೊದಲೇ ಮಗುವಿಗಾಗಿ <u>ಬಳಲಿ ಹಣ್ಣಾಗಿದ್ದ</u> ಮೀನಾಕ್ಷಿ 'ಅಯ್ಯೋ ನೋಡಿ! ನಮ್ಮ ಜಾಕಿ ಹೇಗಾಯಿತು' ಎಂದು <u>ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತಿದ್ದ</u>ಳು.
- ಹಬ್ಬದ ಅಡುಗೆಯನ್ನು ಬಿಸಾಡಿ <u>ಕಣ್ಣೀರಲ್ಲಿ ಕೈತೊಳೆ</u>ದುಕೊಂಡೆವು.

## ಕಥೆಯನ್ನು ಸಂಕ್ಷೇಪವಾಗಿ ಬರೆಯಿರಿ

'ನಾಯಿ ಮಲ್ಲಿಗೆ' ಪಾಠಭಾಗದಲ್ಲಿ ಬಂದಿರುವ ಕತೆಯನ್ನು ನಿಮ್ಮದೇ ಮಾತುಗಳಲ್ಲಿ ಸಂಕ್ಷೇಪವಾಗಿ ಬರೆಯಿರಿ.

## ಸಮರ್ಥಿಸಿ ಬರೆಯಿರಿ

ಈ ಕತೆಗೆ 'ನಾಯಿ ಮಲ್ಲಿಗೆ' ಎನ್ನುವ ಶೀರ್ಷಿಕೆ ಹೇಗೆ ಸೂಕ್ತವಾಗಿದೆ? ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ ಬರೆಯಿರಿ.

## ದಿನಚರಿ ಬರೆಯಿರಿ

"ಹಬ್ಬದ ಅಡುಗೆಯನ್ನು ಬಿಸಾಡಿ ಕಣ್ಣೀರಿನಲ್ಲಿ ಕೈತೊಳೆದುಕೊಂಡೆವು" - ಜಾಕಿ ಮಣ್ಣಾದ ದಿನ ಲೇಖಕರ ಮನೆಯವರಿಗಾದ ದುಃಖ ಈ ಮಾತಿನಲ್ಲಿ ವ್ಯಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ನಾಯಿ ಸತ್ತು ಹೋದ ದಿನ ಲೇಖಕರು ಆ ದುಃಖವನ್ನು ತನ್ನ ದಿನಚರಿಯಲ್ಲಿ ಹೇಗೆ ಪ್ರಕಟಿಸಿರಬಹುದು ಎಂಬುದನ್ನು ಕಲ್ಪಿಸಿಕೊಂಡು ಒಂದು ದಿನಚರಿ ಬರೆಯಿರಿ.

## ಸಂಯುಕ್ತ ವಾಕ್ಯವಾಗಿ ಬರೆಯಿರಿ

ಕೆಳಗೆ ಕೊಡಲಾದ ಸರಳ ವಾಕ್ಯಗಳನ್ನು ಓದಿರಿ.

- ನಾವು ಆಸ್ಪತ್ರೆಗೆ ಬಂದೆವು. ಆಗ ಡಾಕ್ಟರ್ ನಮ್ಮನ್ನು ಪ್ರೀತಿಯಿಂದ ಮಾತನಾಡಿಸಿದರು.

ಅದನ್ನು ಸಂಯುಕ್ತವಾಕ್ಯವಾಗಿ ಹೀಗೆ ಬರೆಯಬಹುದು.

ನಾವು ಆಸ್ಪತ್ರೆಗೆ ಬಂದಾಗ ಡಾಕ್ಟರ್ ನಮ್ಮನ್ನು ಪ್ರೀತಿಯಿಂದ ಮಾತನಾಡಿಸಿದರು.

ಇದೇ ರೀತಿಯಲ್ಲಿ ಪಾಠಭಾಗದಲ್ಲಿ ಬಂದಿರುವ ಸರಳ ವಾಕ್ಯಗಳನ್ನು ಗುರುತಿಸಿ ಅವುಗಳನ್ನು ಸಂಯುಕ್ತ ವಾಕ್ಯವಾಗಿ ಬರೆಯಿರಿ.

## ಕಥೆ ರಚಿಸಿರಿ

ಯಾವುದಾದರೂ ಒಂದು ಸಾಕುಪ್ರಾಣಿ ಮತ್ತು ಅದರ ಜೊತೆಗಿನ ನಿಮ್ಮ ಬಾಂಧವ್ಯವನ್ನು ವಿಷಯವಾಗಿರಿಸಿಕೊಂಡು ಒಂದು ಕಥೆಯನ್ನು ರಚಿಸಿರಿ. ಅದಕ್ಕೆ ಸೂಕ್ತವಾಗುವ ಒಂದು ಶೀರ್ಷಿಕೆಯನ್ನೂ ನೀಡಿ ತರಗತಿಯ ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸಿರಿ.

*****

# ಶಿಲುಬೆ

**- ವೇಣುಗೋಪಾಲ ಕಾಸರಗೋಡು**

## ಪಾತ್ರಗಳು

ಜೀಸಸ್ (ಕ್ರೈಸ್ತ ಮತ ಪ್ರವರ್ತಕ)

ಪಾಂಟಿಯಸ್ ಪಿಲಾತ (ಜೆರೂಸಲೇಮ್‌ನಲ್ಲಿರುವ ಟಿಬೇರಿಯಸ್ ಸೀಜರನ ರಾಜಪ್ರತಿನಿಧಿ)

ಕಾಯಫ (ಯಹೂದಿಯರ ಮಹಾಯಾಜಕ)

ಉರಿಯಾ (ಜೆರೂಸಲೇಮ್‌ನ ಪುರಾಧ್ಯಕ್ಷ)

ಅಂಗರಕ್ಷಕ

ಮತ್ತು

ಯಹೂದಿ ಜನರು

**ದೃಶ್ಯ: ಒಂದು**

(ಪಾಂಟಿಯಸ್ ಪಿಲಾತನ ರಾಜಗೃಹದ ಚಾವಡಿ. ಕಪ್ಪಗಿನ ದೃಢಕಾಯನಾದ ಜೇಮ್ಸ್ (ಪಿಲಾತನ ಅಂಗರಕ್ಷಕ) ಭಲ್ಲೆಯೊಂದನ್ನು ಹಿಡಿದು ಪಹರೆ ನಡೆಸುತ್ತಿದ್ದಾನೆ. ಮಂದ ಬೆಳಕು, ದೂರದಿಂದ ಬೊಬ್ಬೆ, ಘೋಷಣೆಗಳು ಕೇಳಿ ಬರುತ್ತದೆ. ಕ್ರಮೇಣ ಅದು ದೊಡ್ಡದಾಗುತ್ತಾ ಸ್ಪಷ್ಟವಾಗುತ್ತ ಬರುತ್ತದೆ)

(ಜೇಮ್ಸ್, ಒಮ್ಮೆ ರಂಗದ ಬದಿಗೆ ಹೋಗಿ ಬಗ್ಗಿ ನೋಡಿ ಅಸಹನೆಯಿಂದ ಒಡೆಯನನ್ನು ಏಳಿಸಬೇಕೇ ಬೇಡವೇ ಎಂದು ಯೋಚಿಸುತ್ತ, ಉದ್ವಿಗ್ನನಾಗಿ ಕೊನೆಗೆ ಬೇಡವೆಂದು ತೀರ್ಮಾನಿಸಿ ಮತ್ತೆ ಪಹರೆ ನಡೆಸುವನು)

ಜನರು : ರಾಜದ್ರೋಹಿಗೆ ಧಿಕ್ಕಾರ!
ಧರ್ಮದ್ರೋಹಿಗೆ ಧಿಕ್ಕಾರ!
ಸೀಜರನು ಚಿರಾಯುವಾಗಲಿ!
ಜೀಸಸ್ ಶಿಲುಬೆಗೇರಿಸಲ್ಪಡಲಿ!

(ಜೇಮ್ಸ್ ಮತ್ತೆ ರಂಗದ ಬದಿಗೆ ಹೋಗಿ ಸುಮ್ಮನಿರುವಂತೆ ಜನರಿಗೆ ಸಂಜ್ಞೆ ಮಾಡುವನು. ಘೋಷಣೆ ಮತ್ತೆ ದೊಡ್ಡ ಸ್ವರದಲ್ಲಿ ಕೇಳಿ ಬರುವುದು. ಅದರೊಂದಿಗೆ -

ಪಾಂಟಿಯಸ್ ಹೊರಗೆ ಬಾ; ನಮ್ಮ ದೂರು ಕೇಳು ಬಾ; ಎಂಬ ಘೋಷಣೆ ಕೇಳುತ್ತದೆ. ಜೇಮ್ಸ್ ಕುಪಿತನಾಗಿ ಭಲ್ಲೆಯನ್ನು ಬೀಸಿ ಎಸೆದುಬಿಡುವಂತೆ ಅಭಿನಯಿಸುವನು. ಮತ್ತೆ ಜನ ಘೋಷಿಸುತ್ತಾ -

ಕರುಣೆ ನ್ಯಾಯ ಧರ್ಮ ನೀತಿ
ಇಲ್ಲವೇನು ನಿಮ್ಮಲಿ
ಭಲ್ಲೆ ಖಡ್ಗ, ಕುಂತ ಈಟಿ
ಎಲ್ಲ ಇದೆ ನಮ್ಮಲಿ

ಎಂದು ಬೊಬ್ಬಿಡುವರು. ಅಷ್ಟರಲ್ಲಿ ಒಳಕೋಣೆಯಲ್ಲಿ ಬೆಳಕು ಕಾಣಿಸುವುದು. ಜೇಮ್ಸ್ ಥಟ್ಟನೆ ತನ್ನ ಸ್ಥಾನಕ್ಕೆ ಬಂದು ಸೆಟೆದು ನಿಲ್ಲುವನು. ಜೀಸಸ್ ಒಳಗೆ ದಬ್ಬಲ್ಪಟ್ಟು ರಂಗದ ನಡುವೆ ಬಂದು ಬೀಳುವನು.

(ಅವನ ಹಿಂದೆ ಕಾಯಫ ಮತ್ತು ಉರಿಯಾ ಪ್ರವೇಶಿಸುವರು)

ಕಾಯಫ : ಶ್! ಸುಮ್ಮನಿರಿ (ಗಲಭೆ ಕಡಿಮೆಯಾಗಿ ಮೌನ ಆವರಿಸುತ್ತದೆ.) ಪಾಂಟಿಯಸ್; ಹೋ ಪಾಂಟಿಯಸ್ (ಒಂದು ಕ್ಷಣ ಮೌನ)

ಉರಿಯಾ : ಹೋ ಪಾಂಟಿಯಸ್; ಪಾಂ.....................
(ಪಿಲಾತ ಪ್ರವೇಶಿಸುತ್ತಾನೆ. ಒಳಗಿನ ಬೆಳಕು ಆರುತ್ತದೆ. ಆತ ಮೂವರನ್ನು ಗಮನಿಸಿ ನೋಡಿ)

ಪಿಲಾತ : ಯಾರು ? ಓ ಮಹಾಯಾಜಕ ಕಾಯಫ, ಪುರಾಧ್ಯಕ್ಷ ಉರಿಯಾ, ನೀವು! ಇದು ಯಾರು ? ಏನಿದೆಲ್ಲ ಗಲಭೆ ಹ್ಞಂ ?

ಕಾಯಫ : ಟಿಬೇರಿಯಸ್ ಸೀಜರನಿಗೆ ಜಯವಾಗಲಿ (ಎಲ್ಲರೂ ಸೀಜರನಿಗೆ ಜಯಘೋಷ ಮಾಡುವರು. ಕಾಯಫ ಅವರಿಗೆ ಸುಮ್ಮನಿರುವಂತೆ ಸಂಜ್ಞೆ ಮಾಡುವನು)

ಉರಿಯಾ : ರಾಜಪ್ರತಿನಿಧಿ ಪಾಂಟಿಯಸ್ ಪಿಲಾತರಿಗೆ ಕೈಜೋಡಿಸುತ್ತೇವೆ.

ಪಿಲಾತ : ಹ್ಞಂ! ಹ್ಞಂ! ವಿಷಯ ಹೇಳಿ, ಯಾಕೆ ದಯಮಾಡಿಸಿದಿರಿ ?

ಕಾಯಫ : ನ್ಯಾಯದಾನ ಮಾಡಬೇಕು.

ಉರಿಯಾ : ರಾಜದ್ರೋಹಿಯನ್ನು ಶಿಲುಬೆಗೇರಿಸಬೇಕು.

| | | |
|---|---|---|
| ಪಿಲಾತ | : | ಪುರಾಧ್ಯಕ್ಷರೇ ದ್ರೋಹಿ ಯಾರು ? ಅದರ ಬಗ್ಗೆ ವಿಚಾರಿಸೋಣ; ಶಿಕ್ಷೆ ಅದು ಆ ಮೇಲೆ. ಅದನ್ನು ನಿರ್ಧರಿಸುವುದು ನಾನು, ನೀವಲ್ಲ. |
| ಕಾಯಫ | : | ಗೊತ್ತು ಪಾಂಟಿಯಸ್, ಅದಕ್ಕಾಗಿಯೇ ನಾವಿಲ್ಲಿಗೆ ಬಂದಿರುವುದು. ಅಪರಾಧಿಯನ್ನು ಬಂಧಿಸಿದ್ದೇವೆ. ಇನ್ನುಳಿದ ಕರ್ತವ್ಯ ನ್ಯಾಯಮೂರ್ತಿಯದು. |
| ಪಿಲಾತ | : | ಅಪರಾಧಿ ಯಾರು ? |
| ಉರಿಯಾ | : | ಇದೋ ಈತ |
| ಪಿಲಾತ | : | ಜೀಸಸ್! ಏನಿವನ ಅಪರಾಧ ? |
| ಜನರು | : | ಈತ ರಾಜದ್ರೋಹಿ, ಧರ್ಮದ್ರೋಹಿ |
| ಪಿಲಾತ | : | ಸದ್ದು ಗಲಭೆ ಗದ್ದಲಗಳಿಗೆ ಇಲ್ಲಿ ಅವಕಾಶವಿಲ್ಲ. |



| | | |
|---|---|---|
| ಕಾಯಫ | : | ಅವರು ಸತ್ಯವನ್ನೇ ಹೇಳುತ್ತಿದ್ದಾರೆ. ನ್ಯಾಯಕ್ಕಾಗಿ ಬೇಡುತ್ತಿದ್ದಾರೆ. |
| ಪಿಲಾತ | : | ಇರಬಹುದು ಮಹಾಯಾಜಕರೇ, ಅಪರಾಧವನ್ನು ಸಾಬೀತು ಪಡಿಸಬೇಕು. ಬರೇ ಕೂಗಾಡಿದರೆ ಸಾಲದು. |
| ಉರಿಯಾ | : | ತೋರಾನ ತತ್ವಗಳನ್ನೀತ ನಂಬುವುದಿಲ್ಲ. ಮೋಶೆಯ ಬೋಧನೆಗಳನ್ನು ಅಲ್ಲಗಳೆಯುತ್ತಾನೆ. |
| ಪಿಲಾತ | : | ಸೀಜರ್ ಕರುಣಾಮಯಿ, ರೋಮಿನ ಸತ್ಪ್ರಜೆಗಳಿಗೆ ಯಾವುದೇ ತತ್ವಗಳನ್ನು ನಂಬುವ, ಅಲ್ಲಗಳೆಯುವ ಸ್ವಾತಂತ್ರ್ಯವಿದೆ. |
| ಕಾಯಫ | : | ಫರಿಸಾಯರು, ಸದ್ದುಕಾಯರು ಹಾಗೂ ಯಾಜಕರನ್ನು ಕಪಟಿಗಳು ಡಂಭಾಚಾರಿಗಳು, ಆಷಾಢಭೂತಿಗಳು ಎಂದೆಲ್ಲ ನಿಂದಿಸುತ್ತಾನೆ. ತಾನೇ ದೇವಪುತ್ರ ಅಂತ ಹೇಳಿಕೊಳ್ಳುತ್ತಿದ್ದಾನೆ. |
| ಉರಿಯಾ | : | ವಿಶ್ರಾಂತಿಯ ದಿನವಾದ ಸಬ್ಬತಿನಂದೂ ಕೆಲಸ ಮಾಡಬೇಕು ಎನ್ನುತ್ತಾನೆ. |
| ಕಾಯಫ | : | ದೈವದೂಷಣೆ ಮಾಡಿದ ಆಸ್ತಿಕರನ್ನು ತೆಗಳಿದ |
| ಉರಿಯಾ | : | ಅತಿ ಸರಳ, ಸಾಮಾನ್ಯರ ಮನಸ್ಸಿಗೆ ವಿಷ ಬೆರೆಸಿದ |
| ಕಾಯಫ | : | ಚಿರಂತನ ಧರ್ಮದ ಮೂಲ ಬೇರನ್ನೇ ತುಂಡರಿಸಿದ. |
| ಉರಿಯಾ | : | ಅನೂಚಾನವಾದ ಆಚಾರ ವಿಚಾರಗಳನ್ನು ಖಂಡಿಸಿದ. |
| ಪಿಲಾತ | : | ಯಾಜಕರೇ, ಧಾರ್ಮಿಕ ವಿಚಾರಗಳಲ್ಲಿ ನ್ಯಾಯಸ್ಥಾನ ತಲೆ ಹಾಕುವುದಿಲ್ಲ. |
| ಉರಿಯಾ | : | ಧಾರ್ಮಿಕ ಮಾತ್ರವಲ್ಲ, ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲೂ ಈತ ಕ್ರಾಂತಿಯನ್ನು ಪ್ರಚೋದಿಸುತ್ತಾನೆ. |
| ಕಾಯಫ | : | ತೆರಿಗೆಯನ್ನು ತೆರಬಾರದೆನ್ನುತ್ತಾನೆ. ತಾನೇ ಯಹೂದಿಗಳ ಅರಸ ಅನ್ನುತ್ತಾನೆ. |
| ಉರಿಯಾ | : | ಸೀಜರನ ವಿರುದ್ಧ ಜನರನ್ನು ಎತ್ತಿ ಕಟ್ಟುತ್ತಿದ್ದಾನೆ. ರೋಮ್ ಚಕ್ರಾಧಿಪತ್ಯವನ್ನು ಪ್ರಶ್ನಿಸುತ್ತಿದ್ದಾನೆ. |
| ಪಿಲಾತ | : | ಈ ಆರೋಪಗಳಿಗೆಲ್ಲ ರುಜುವಾತೇನಿದೆ ? ಅದನ್ನು ಹೇಳಿ. |
| ಉರಿಯಾ | : | ನಾವು ಹೇಳಿದ್ದೇ ರುಜುವಾತು. |
| ಪಿಲಾತ | : | ಹ್ಹ.... ಹ್ಹ.... ಹ್ಹ.... (ಗಹಗಹಿಸಿ ನಗುವನು) |

ಕಾಯಫ : ನಗಬೇಡ ಪಾಂಟಿಯಸ್ ನಿನ್ನಿಂದ ಹೆಚ್ಚೇನನ್ನು ನಾವು ಬಯಸುವುದಿಲ್ಲ. ಅಪರಾಧಿಗಳನ್ನು ಶಿಕ್ಷಿಸುವ ಅಧಿಕಾರ ನಮ್ಮದು. ಸನ್ಹೆದ್ರಿಮ್ ಸಂಘದ ಸದಸ್ಯರದು, ಅದನ್ನು ವಿಧಿಸುವ ಕರ್ತವ್ಯ ಮಾತ್ರ ನಿನ್ನದು.

ಪಿಲಾತ : ಅದಕ್ಕೆ ಮಾತ್ರ ನಾನೇಕೆ ಬೇಕು ? ಯಾಜಕರೇ ತೀರ್ಮಾನ, ವಿಧಿ ಎರಡನ್ನೂ ನೀವೇ ಮಾಡಬಹುದಲ್ಲ.

ಕಾಯಫ : ಯಹೂದೀ ಧರ್ಮಶಾಸ್ತ್ರದಲ್ಲಿ ಹಿಂಸೆಗೆ ಎಡೆಯಿಲ್ಲ,

ಪಿಲಾತ : ಓಹೋ, ತಾನು ಮಾಡಬಾರದ್ದನ್ನು ಇನ್ನೊಬ್ಬನಿಂದ ಮಾಡಿಸುವುದಕ್ಕೆ ನಿಮ್ಮ ಧರ್ಮಶಾಸ್ತ್ರ ಒಪ್ಪಬಹುದು ಅಲ್ಲವೇ ?

ಉರಿಯಾ : ಪಾಂಟಿಯಸ್ ನೀನು ಅವಮಾನಿಸುತ್ತಿರುವುದು ಕೇವಲ ನಮ್ಮನ್ನಲ್ಲ, ನಮ್ಮ ಧರ್ಮವನ್ನು, ಸಮಗ್ರ ಯಹೂದೀ ಜನಾಂಗವನ್ನು. ನೀನು ಬರೇ ರಾಜ ಪ್ರತಿನಿಧಿ ಎಂಬುದು ನೆನಪಿರಲಿ. ಸಜ್ಜನರೇ ಯಾಕೆ ಸುಮ್ಮನಿದ್ದೀರಿ ? ಕೇಳಿದಿರಲ್ಲ ಇವನ ಮಾತುಗಳನ್ನು......

ಜನರು : "ರಾಜದ್ರೋಹಿಯನ್ನು ಶಿಲುಬೆಗೇರಿಸಿರಿ"
"ಧರ್ಮದ್ರೋಹಿಯನ್ನು ಶಿಲುಬೆಗೇರಿಸಿರಿ"
"ಜೀಸಸ್‌ನನ್ನು ಶಿಲುಬೆಗೇರಿಸಿರಿ"

ಪಿಲಾತ : ಸದ್ದು ! ಸದ್ದು !! (ಶಬ್ದ ನಿಲ್ಲುವುದು)
ಅಪರಾಧಿಯನ್ನು ನಾನು ಪ್ರಶ್ನಿಸಬೇಕಾಗಿದೆ. ಯಾಜಕರೇ ಜನರನ್ನು ಹೊರಗೆ ಕರೆದೊಯ್ಯಿರಿ.

ಕಾಯಫ : ಏನು ಬೇಕಿದ್ದರೂ ವಿಚಾರಿಸಿಕೋ ಆದರೆ ಆತನಿಗೆ ಮರಣ ದಂಡನೆಯೇ ವಿನಹ ಬೇರೇನನ್ನೂ ನಾವು ನಿನ್ನಿಂದ ಬಯಸುವುದಿಲ್ಲ.
ನೆನಪಿರಲಿ, ಪುರಾಧ್ಯಕ್ಷರೇ ಬನ್ನಿ (ಹೋಗುವರು)

ಪಿಲಾತ : (ಮೆಲುದನಿಯಲ್ಲಿ) ಜೀಸಸ್ ಇವರು ನಿನ್ನನ್ನು ನಾಸ್ತಿಕನೆಂದು ತಿಳಿದಿದ್ದಾರೆ.

ಜೀಸಸ್ : (ಪ್ರಶಾಂತವಾಗಿ) ತಂದೆದೋರಿದ ದಾರಿಯನು ನಾನು ಕಾಣಿಸಿದೆ.
ಪ್ರೇಮ ದ್ವೇಷವ ಗೆಲುವ ದಿವ್ಯಮಂತ್ರವ ಪಠಿಸಿ
ಪ್ರೇಮದಪರಂಪಾರ ಆತ್ಮಗೀತವನುಲಿದೆ,
ಪ್ರೇಮಮಯ ಸ್ವರ್ಗೀಯ ಭಾವನೆಯ ಬೋಧಿಸಿದೆ.

| | | |
|---|---|---|
| ಪಿಲಾತ | : | ಯಾಜಕರನ್ನು ಬೈದಿದ್ದೀಯಂತೆ! |
| ಜೀಸಸ್ | : | ನಿಜ. ನಾನು ತೆಗಳಿದೆನು ಡಾಂಭಿಕರ, ಸ್ವಾರ್ಥಿಗಳ, ಕುಹಕಿಗಳ, ನಿರ್ದಯರ, ಕ್ಷುದ್ರಾಭಿಮಾನಿಗಳ. |
| ಪಿಲಾತ | : | ಸೀಜರನ ವಿರುದ್ಧ ದಂಗೆಯೆದ್ದಿದೀಯಂತೆ, ಅರಸನೆಂದು ಹೇಳಿಕೊಳ್ಳುವಿಯಂತೆ, |
| ಜೀಸಸ್ | : | ಹಿಡಿಮಣ್ಣು ನೀ ರಾಜ್ಯದಧಿಕಾರ ಎನಗೇಕೇ<br>ತುಂಬ ಎತ್ತರವಿಹುದು ಎನ್ನ ಕನಸಿನ ರಾಜ್ಯ. |
| ಪಿಲಾತ | : | ಹಾಗಿದ್ದರೆ, ನೀನು ಸೀಜರನ ಸಿಂಹಾಸನವನ್ನು ಬಯಸುವುದೇ ಇಲ್ಲ. |
| ಜೀಸಸ್ | : | ದಾಸವೃಂದವನಾಳೆ ದಾಸನೇ ಕುಳಿತಿರುವ ಆಸನವ ಬಯಸಿಲ್ಲ, ಎನಗೆ ಅದು ಬೇಕಿಲ್ಲ. |
| ಪಿಲಾತ | : | ಆದರೆ ಯಹೂದಿಗಳು ನಿನ್ನನ್ನು ದ್ವೇಷಿಸುತ್ತಿದ್ದಾರೆ. |
| ಜೀಸಸ್ | : | ಇಂದು ದ್ವೇಷಿಸಬಹುದು. ನಾಳೆ ಪ್ರೀತಿಸಬಹುದು. |
| ಪಿಲಾತ | : | ಮಹಾತ್ಮ, ಸಾಮಾನ್ಯ ಮಾನವರು ನಾವು ನಿನ್ನ ವ್ಯಕ್ತಿತ್ವವನ್ನು ಅಳೆಯಲಾರೆವು. ಸತ್ಯಗಳ ಜೀರ್ಣಿಸಿಕೊಳ್ಳಲಾರೆವು. ಕ್ಷಮಿಸು, ಕ್ಷುಲ್ಲಕ ರಾಜಕೀಯದ ಕೈಗೊಂಬೆ ನಾನು; ನಿನ್ನಂಥ ಮಹಾ ಚೇತನಕ್ಕೆ ಮಾಡಬಹುದಾದ ಅಪಚಾರಗಳನ್ನು ಮನ್ನಿಸು. |
| | | (ಕಾಯಫ, ಉರಿಯಾ ಪ್ರವೇಶಿಸಿ) |
| ಕಾಯಫ | : | ಛಿ! ಇದೇನಿದು ಪಾಂಟಿಯಸ್, ಅಪರಾಧಿಯೋರ್ವನಿಗೆ ಮೊಣಕಾಲೂರಿ ವಂದಿಸುತ್ತಿರುವೆ. |
| ಪಿಲಾತ | : | ಮಹಾಯಾಜಕರೇ, ಪುರಾಧ್ಯಕ್ಷರೆ, ಅವರವರ ಮನಃಸಾಕ್ಷಿ ಅವರವರಿಗೆ ಮುಖ್ಯ. ನಿಮಗೀತ ಅಪರಾಧಿ ಎಂದು ತೋರಬಹುದು. ಆದರೆ ನಾನೀತನನ್ನು ಮಹಾತ್ಮನೆಂದು ತಿಳಿದಿರುವೆ. |
| ಉರಿಯಾ | : | ನಾವು ನಿನ್ನನ್ನು ಹುಚ್ಚನೆಂದು ತಿಳಿದಿರಲಿಲ್ಲ. |
| ಕಾಯಫ | : | ನಿನ್ನನ್ನು ರಾಜ ಪ್ರತಿನಿಧಿಯಾಗಿ ನೇಮಿಸಿದ ಸೀಜರ್ ಇಷ್ಟು ಮೂರ್ಖನೆಂದು ನಮಗೆ ಗೊತ್ತಿರಲಿಲ್ಲ. |
| ಪಿಲಾತ | : | (ಸಿಟ್ಟಿಗೆದ್ದು) ಬಾಯ್ಮುಚ್ಚಿ. ನನ್ನನ್ನು, ಹುಚ್ಚ ಅನ್ನಿ, ಸಹಿಸಿಕೊಳ್ಳಬಲ್ಲೆ, ರೋಮ್‌ನ ಚಕ್ರಾಧಿಪತಿಯನ್ನು ಹೀನೈಸುವವರ ತಲೆ ಭುಜಗಳ ಮೇಲಿರುವುದಿಲ್ಲ, ಹುಷಾರ್, |
| ಕಾಯಫ | : | ನಾವು ಯಹೂದೀ ಜನತೆ, ರೋಮನರ ದಾಸ್ಯದಲ್ಲಿದ್ದೇವೆ. ನಿಜ, ಆದರೆ ರೋಮೀಯ ಶಾಸನವು ಅಲ್ಪ ಸಂಖ್ಯಾಕರನ್ನು ಈ ರೀತಿ ನಡೆಸಿಕೊಳ್ಳುವುದೆಂದು ನಾವು ಭಾವಿಸಿರಲಿಲ್ಲ. ಚಕ್ರಾಧಿಪತ್ಯಕ್ಕೆ ಧಿಕ್ಕಾರ, ರೋಮ್‌ನ ಚಕ್ರಾಧಿಪತ್ಯಕ್ಕೆ ಧಿಕ್ಕಾರ. |

ಜನರು : ರೋಮ್‌ನ ಚಕ್ರಾಧಿಪತ್ಯಕ್ಕೆ ಧಿಕ್ಕಾರ !
ಟಿಬೇರಿಯಸ್ ಸೀಜರನಿಗೆ ಧಿಕ್ಕಾರ !
ಪಾಂಟಿಯಸ್ ಪಿಲಾತನಿಗೆ ಧಿಕ್ಕಾರ !

ಪಿಲಾತ : (ಗಾಬರಿಯಾಗಿ) ಅಯ್ಯೋ ಏನಿದು ! ನಿಲ್ಲಿಸಿ ; ನಿಲ್ಲಿಸಿ, (ಬೊಬ್ಬೆ ನಿಲ್ಲುವುದು) ಯಾಜಕರೇ ನಾನೀತನನ್ನು ಮಹಾತ್ಮ ಅಂದೆ. ತಪ್ಪಿತಸ್ಥ ಅಲ್ಲ ಅನ್ನಲಿಲ್ಲ, ರೋಮ್‌ನ ಶಾಸನದ ಪ್ರಕಾರ ಈತ ನಿರಪರಾಧಿ ! ನಿಮ್ಮ ಧರ್ಮಶ್ರದ್ಧೆಯನ್ನು ಈತ ಕಲಕಿರಬಹುದು. ನಿಮ್ಮ ಧರ್ಮಶಾಸ್ತ್ರಗಳ ಕಣ್ಣಿನಲ್ಲಿ ಈತ ನಾಸ್ತಿಕನಾಗಿರಬಹುದು. ಆದ್ದರಿಂದ ಈತನಿಗೆ ಇಪ್ಪತ್ತೈದು ಚಾಟಿಯೇಟುಗಳ ಶಿಕ್ಷೆ ನೀಡುತ್ತೇನೆ. ಯಾರಲ್ಲಿ ? ಹುಂ ?

(ಚಾಟಿಯಿಂದ ಹೊಡೆಯುವ ಶಬ್ದ. ತೃಪ್ತಿಯಾಯಿತೇ ನಿಮಗೆ ?)

ಕಾಯಫ : ಕಣ್ಣಿಗೆ ಮಣ್ಣೆರಚುವ ಪ್ರಯತ್ನ ನಮ್ಮಲ್ಲಿ ಬೇಡ ಪಾಂಟಿಯಸ್, ಈತನನ್ನು ಶಿಲುಬೆಗೇರಿಸಲು ಮನಸ್ಸಿಲ್ಲವಾದರೆ ಸ್ಪಷ್ಟವಾಗಿ ಉಸುರಿ ಬಿಡು.

ಜನರು : ಜೀಸಸ್‌ನನ್ನು ಶಿಲುಬೆಗೇರಿಸಿರಿ
ಧರ್ಮದ್ರೋಹಿಯನ್ನು ಶಿಕ್ಷಿಸಿರಿ.

ಪಿಲಾತ : ಸದ್ದು ! ಸದ್ದು ! ಯಾಜಕರೇ ನಿಮಗಿಂದು ಪಸ್ಕ ಹಬ್ಬವಲ್ಲವೇ?

ಉರಿಯಾ : ಆಗಿದ್ದರೆ ?

ಪಿಲಾತ : ಈ ಪುಣ್ಯದಿನದ ಸ್ಮರಣೆಗಾಗಿ ರಾಜ ಖೈದಿಯೊಬ್ಬನನ್ನು ಕ್ಷಮಿಸುವ ಸಂಪ್ರದಾಯವಿಲ್ಲವೇ?

ಕಾಯಫ : ಇದೆ. ಆದರೆ ಅದು ಜನತೆ ಕ್ಷಮಿಸಿದವನನ್ನು ಮಾತ್ರ.

ಪಿಲಾತ : ಹತ್ತಾರು ಕೊಲೆಗಳನ್ನು ಮಾಡಿದ ಬರಬ್ಬನೊಬ್ಬ ಸೆರೆಮನೆಯಲ್ಲಿದ್ದಾನೆ. ಕೇವಲ ಧಾರ್ಮಿಕ ಖೈದಿಯೊಬ್ಬ ಇಲ್ಲಿದ್ದಾನೆ. ನೀವು ಯಾರ ಬಿಡುಗಡೆಯನ್ನು ಬಯಸುತ್ತೀರಿ. ಕೊಲೆಗಾರನನ್ನೋ? ಈ ಸಾಧು ಜೀಸಸ್‌ನನ್ನೊ?

(ಗೊಂದಲ ಏರ್ಪಡುತ್ತದೆ)

ಕಾಯಫ : (ಉರಿಯಾನೊಂದಿಗೆ ಪಿಸುಗುಟ್ಟಿ) ಬರಬ್ಬನಿಗೇ ಬಿಡುಗಡೆಯಾಗಲಿ

| | | |
|---|---|---|
| ಪಿಲಾತ | : | ಮಾನವೀಯತೆಯ ಲವಲೇಶವೂ ನಿಮ್ಮಲ್ಲಿಲ್ಲವೇ ? ಚಾವಟಿ ಏಟಿನಿಂದ ತತ್ತರಿಸಿ ನಿಂತಿರುವ ಈ ಜೀಸಸ್‌ನನ್ನು ಒಮ್ಮೆ ನೋಡಿ. ಈ ನಿರಪರಾಧಿಯ ರಕ್ತಕ್ಕೆ ಯಾರು ಹೊಣೆ ? |
| ಉರಿಯಾ | : | ಈತನ ರಕ್ತದ ಕಲೆ ನಮ್ಮ ಮೇಲಿರಲಿ. ನಮ್ಮ ಮಕ್ಕಳ, ನಮ್ಮ ಮೊಮ್ಮಕ್ಕಳ, ನಮ್ಮ ಸಂತತಿಯ ಮೇಲಿರಲಿ. |
| ಪಿಲಾತ | : | (ದೀರ್ಘವಾಗಿ ಉಸಿರ್ಗರೆದು) ಹ್ಞಂ! ಯಾರಲ್ಲಿ ?<br>ಒಂದು ಬಟ್ಟಲು ತಣ್ಣೀರು ತಾ.<br>(ತೀರ್ಪು ಬರೆದು ಓದುವನು)<br>ರಾಜದ್ರೋಹ ಮತ್ತು ಧರ್ಮದ್ರೋಹಗಳ ಆರೋಪದಲ್ಲಿ ನಜರೇತಿನ ಜೀಸಸ್‌ಗೆ ಶಿಲುಬೆಗೇರಿಸುವ ಶಿಕ್ಷೆ ನೀಡಲಾಗಿದೆ.<br>(ಜನರ ಗುಲ್ಲು - ಹರ್ಷೋದ್ಗಾರ) |
| ಪಿಲಾತ | : | ತಾ ಇಲ್ಲಿ (ತಣ್ಣೀರಿನಲ್ಲಿ ಕೈ ತೊಳೆದುಕೊಂಡು)<br>ಓ ಜಗತ್ತೇ ದೂರದಿರು ನನ್ನನ್ನು ನಿಸ್ಸಹಾಯಕ ನಾನು<br>ಓ ಮಹಾತ್ಮ, ಜೀಸಸ್ ಈ ಶಿಲುಬೆ ನಿನಗಲ್ಲ... ನನಗೆ.<br>(ಜನರ ಹರ್ಷೋದ್ಗಾರ ಮೇರೆ ಮೀರುವುದು) |

## ದೃಶ್ಯ : ಎರಡು

ರೋಮ್ ಚಕ್ರಾಧಿಪತ್ಯಕ್ಕೆ ಜಯವಾಗಲಿ
ಟಿಬೇರಿಯಸ್ ಸೀಜರ್ ಚಿರಾಯುವಾಗಲಿ
ಪಾಂಟಿಯಸ್ ಪಿಲಾತನಿಗೆ ಒಳಿತಾಗಲಿ
ತೋರಾನ ತತ್ವಗಳು ಶಾಶ್ವತವಾಗಲಿ
ಮೋಶೆಯ ಬೋಧನೆಗಳು ಬಹುಕಾಲ ಬೆಳಗಲಿ
ಸನ್ಹೆದ್ರಿಮ್ ಸಂಘವು ಅಮರವಾಗಲಿ
ಯಹೂದೀ ಜನಾಂಗವು ಚಿರಕಾಲ ಬಾಳಲಿ

(ಎಂಬ ಘೋಷಣೆಗಳು ಮುಗಿಲು ಮುಟ್ಟುತ್ತಿದ್ದಂತೆ, ಬಳಲಿದ ಜೀಸಸ್ ಶಿಲುಬೆಯನ್ನು ಹೊತ್ತುಕೊಂಡು ಪ್ರಯಾಸದಿಂದ ನಡೆಯುತ್ತಿರುವವನು. ಯಹೂದಿ ಜನರು ಹರ್ಷೋದ್ಗಾರಗಳನ್ನು ಮಾಡುತ್ತ. ಆತನ ಸುತ್ತ ಕುಣಿಯುತ್ತ ಸಾಗುವರು. ಅವರಿಗೆ ಕಾಯಫ ಮತ್ತು ಉರಿಯಾ ನೇತೃತ್ವ ನೀಡುತ್ತಿರುವರು.)

## ದೃಶ್ಯ : ಮೂರು

(ಶಿಲುಬೆಗೇರಿಸಲ್ಪಟ್ಟ ಜೀಸಸ್‌ನ ಕೈಗಳಿಂದ ನೆತ್ತರು ಹರಿಯುತ್ತಿರುವುದು. ಅಕ್ಕಪಕ್ಕಗಳಲ್ಲಿ ಕಾಯಫ ಮತ್ತು ಉರಿಯಾ ತಿರಸ್ಕಾರದಿಂದ ನೋಡುತ್ತ ನಿಂತಿರುವರು. ಯಹೂದೀಗಳು ಒಬ್ಬೊಬ್ಬರಾಗಿ ಬಂದು ವ್ಯಂಗ್ಯವಾಗಿ 'ಯಹೂದೀಗಳ ಅರಸನಿಗೆ ಜಯವಾಗಲಿ' ಎಂದು ಮೊಣಕಾಲೂರಿ ವಂದಿಸಿ ಮೇಲೆದ್ದು ತಿರಸ್ಕಾರದಿಂದ ಅವನ ಮುಖಕ್ಕೆ ಉಗಿದು, "ಭೂಮಿಗಿಳಿದು ಬಂದ ಭಗವಂತನಿಗೆ.... ಅಲ್ಲಲ್ಲ ಮನುಷ್ಯ ಪುತ್ರನಿಗೆ ಜಯವಾಗಲಿ," ಎನ್ನುತ್ತ ತಮ್ಮ ಕೈಯಲ್ಲಿರುವ ಮರಳು, ಕಲ್ಲುಗಳನ್ನು ಜೀಸಸ್‌ಗೆ ಎಸೆಯುವರು.)

ಜೀಸಸ್ : ಓ ತಂದೆ ಕ್ಷಮಿಸಿವರ.
ತಾವೇನು ಮಾಡುವೆವು ಎಂದು ತಿಳಿಯದ ಜನರ

(ಎಂದು ಪ್ರಯಾಸದಿಂದ ಹೇಳುವನು. ಆತನ ತಲೆ ಪಕ್ಕಕ್ಕೆ ವಾಲುವುದು. ಗುಡುಗು, ಮಿಂಚು ಮುಂತಾದ ಉತ್ಪಾತಗಳು ಕಾಣಿಸಿಕೊಳ್ಳುವುವು. ಜನರು ಬೆರಗು ಕಣ್ಣುಗಳಿಂದ ಶಿಲುಬೆಯನ್ನೇ ನೋಡುತ್ತಿರುವರು.)

* * *

## ವಿಶದೀಕರಣ

| | | |
|---|---|---|
| ಜೀಸಸ್ | – | ಯೇಸು ಕ್ರಿಸ್ತ |
| ತೋರಾ | – | ಕ್ರೈಸ್ತಮತದಲ್ಲಿ ಹಳೆಯ ಒಡಂಬಡಿಕೆ (ಕ್ರಿಸ್ತಪೂರ್ವ) ಹೊಸ ಒಡಂಬಡಿಕೆ (ಕ್ರಿಸ್ತಶಕ) ಎಂಬ ಎರಡು ಧರ್ಮಗ್ರಂಥಗಳಿವೆ. ಹಳೆಯ ಒಡಂಬಡಿಕೆಯಲ್ಲಿರುವ ಐದು ಗ್ರಂಥಗಳನ್ನು ತೋರಾ ಎಂದು ಹೇಳುತ್ತಾರೆ. ಆದಿಕಾಂಡ, ವಿಮೋಚನಾಕಾಂಡ, ಯಾಜಕಕಾಂಡ, ಅರಣ್ಯಕಾಂಡ, ಧರ್ಮೋಪದೇಶಕಾಂಡ ಇವುಗಳನ್ನು ಬೈಬಲಿನ ಪಂಚ ಗ್ರಂಥಗಳೆಂದು ಹೇಳುತ್ತಾರೆ. |
| ಮೋಶೆ | – | ಓರ್ವ ಕ್ರೈಸ್ತ ಪ್ರವಾದಿ |
| ಫರಿಸಾಯರು | – | ಮೋಶೆಯ ಧರ್ಮಶಾಸ್ತ್ರವನ್ನೂ ಸಾಂಪ್ರದಾಯಿಕವಾಗಿ ಬಂದ ಆಚರಣೆ ನಿಯಮಗಳನ್ನೂ ಕಟ್ಟುನಿಟ್ಟಾಗಿ ಪಾಲಿಸಿ ಅದನ್ನೇ ಬೋಧಿಸುತ್ತಿದ್ದ ಧಾರ್ಮಿಕ ಪಂಗಡದವರು. |
| ಸದ್ದುಕಾಯರು | – | ಯಹೂದ್ಯರ ಒಂದು ಧಾರ್ಮಿಕ ಪಂಗಡ. ಇವರಲ್ಲಿ ಬಹುತೇಕ ಮಂದಿ ಯಾಜಕರಾಗಿದ್ದರು. |
| ಯಾಜಕ | – | ದೇವರಿಗೆ ಬಲಿಯನ್ನರ್ಪಿಸಲು ನಿಯಮಿತವಾದ ಗುರುವರ್ಗದವನು. ಯಹೂದ್ಯರಲ್ಲಿ 'ಪ್ರಧಾನ ಯಾಜಕ' 'ಮುಖ್ಯ ಯಾಜಕ' ಮತ್ತು 'ಯಾಜಕ' ಎಂಬ ಮೂರು ದರ್ಜೆಗಳಿದ್ದವು. |
| ಸನ್ಹೆದ್ರಿಮ್ ಸಂಘ | – | ೭೨ ಅಥವಾ ೭೦ ಮಂದಿಯ ಶಾಸಕಾಂಗ ತಂಡ. |
| ಸೀಜರ | – | ಜೂಲಿಯಸ್ ಸೀಸರ್, ರೋಮನ್ ಗಣರಾಜ್ಯದ ಚಕ್ರಾಧಿಪತಿ, ರೋಮನ್ ಗಣರಾಜ್ಯವು ರೋಮನ್ ಸಾಮ್ರಾಜ್ಯವಾಗಿ ಪರಿವರ್ತನೆಗೊಳ್ಳಲು ಈತ ಪ್ರಮುಖ ಕಾರಣ. |
| ಪಸ್ಕ ಹಬ್ಬ | – | ಯಹೂದ್ಯರು ಈಜಿಪ್ತಿನ ದಾಸ್ಯದಲ್ಲಿದ್ದಾಗ ಸರ್ವೇಶ್ವರ ಸ್ವಾಮಿ ಅವರನ್ನು ಬಿಡುಗಡೆ ಮಾಡಲು ಈಜಿಪ್ತರ ಚೊಚ್ಚಲು ಮಕ್ಕಳನ್ನು ವಧಿಸಿದರು ಮತ್ತು ಇಸ್ರೇಲಿನವರಿಗೆ ಈ ವಿಪತ್ತು ಬಾರದಂತೆ ಮೃತ್ಯುದೂತ ಅವರ ಮನೆಗಳನ್ನು ಹಾದುಹೋದನು ಎಂದು ನಂಬಲಾಗಿದೆ. ಈ ಘಟನೆಯ ಸ್ಮರಣಾರ್ಥ ಇಸ್ರೇಲಿನವರು ಪ್ರತಿವರ್ಷ 'ನಿಸಾನ್' ತಿಂಗಳ ಹದಿನಾಲ್ಕನೆಯ ದಿನ ಪಸ್ಕ ಹಬ್ಬವನ್ನು ಆಚರಿಸುತ್ತಾರೆ. |

## ಲೇಖಕರ ಪರಿಚಯ



ವೇಣುಗೋಪಾಲ ಕಾಸರಗೋಡು ಅವರು ನಾರಾಯಣ ಭಟ್ ಮತ್ತು ಅದಿತಿ ಅಮ್ಮನವರ ಪುತ್ರರಾಗಿ ೧೯೪೮ ನವೆಂಬರ್ ೧೦ ರಂದು ಕಾರಡ್ಕದಲ್ಲಿ ಜನಿಸಿದರು. ನೀರ್ಚಾಲು ಮಹಾಜನ ಸಂಸ್ಕೃತ ಕಾಲೇಜು ಹೈಸ್ಕೂಲಿನಲ್ಲಿ ಪ್ರೌಢಶಾಲಾ ಶಿಕ್ಷಣ, ಕಾರ್ಕಳ ಭುವನೇಂದ್ರ ಕಾಲೇಜಿನಲ್ಲಿ ಪದವಿಪೂರ್ವ, ಮೂಡಬಿದಿರೆ ಮಹಾವೀರ ಕಾಲೇಜಿನಲ್ಲಿ ಪದವಿ ಶಿಕ್ಷಣ ಪಡೆದರು. ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿ ಪೂರೈಸಿ ಬಳಿಕ ಅದೇ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.

'ಗರಿ ಮುರಿದ ಹಕ್ಕಿಗಳು' ಅವರ ಪ್ರಥಮ ಕವನ ಸಂಕಲನ. ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ. 'ಬೊಗಸೆ ಮೀರಿದ ಬದುಕು' ಕವನ ಸಂಕಲನಕ್ಕೆ ಮುದ್ದಣ ಸ್ಮಾರಕ ಪ್ರಶಸ್ತಿ ಲಭಿಸಿದೆ. 'ಗೆರಿಲ್ಲಾ' ಅವರ ಇನ್ನೊಂದು ಪ್ರಸಿದ್ಧ ಕವನ ಸಂಕಲನ. ನಿಮಗೆ ಕ್ಷಮೆಯಿಲ್ಲ, ಕಾಸರಗೋಡು ಕವಿತೆಗಳು ಅವರ ಇತರ ಕವನ ಸಂಕಲನಗಳು.

ಮಣ್ಣಿನ ಬೊಂಬೆ, ನಾಯಿಬಾಲ, ದೃಷ್ಟಿ, ಪ್ರಶ್ನೆ, ಬಂಗಾರಾಂ, ಶಿಲುಬೆ, ರಾಮಾಯಣ, ಮಹಾಭಾರತ ಮೊದಲಾಗಿ ಹದಿನೈದು ನಾಟಕಗಳನ್ನು ವೇಣುಗೋಪಾಲ ಕಾಸರಗೋಡು ರಚಿಸಿದ್ದಾರೆ. ಆಹುತಿ, ಕಲ್ಯಾಣಿಯ ಕರುಣಕಥೆ, ಬಯಲಾಟ ಎಂಬವು ಕಾದಂಬರಿಗಳು. ಯುರ್ಮುಂಜ ರಾಮಚಂದ್ರ, ಬದುಕು ಬರಹ, ಮರೆಯಬಾರದ ಬರಹಗಾರ ಯುರ್ಮುಂಜ ಎಂಬಿವು ಇವರ ವಿಮರ್ಶಾ ಕೃತಿಗಳು. ಈಚಿನ ಮಲೆಯಾಳ ಕವಿತೆಗಳು ಮತ್ತು ಬಂಜರು ಭೂಮಿ ಅನುವಾದ ಕೃತಿಗಳು. ೨೫-೫-೨೦೦೫ ರಂದು ಅವರು ನಿಧನ ಹೊಂದಿದರು.

ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಯವರ ಗೊಲ್ಗೊಥಾ ಖಂಡಕಾವ್ಯದ ಸ್ಫೂರ್ತಿಯಿಂದ ರಚಿತವಾದ ಈ ನಾಟಕವನ್ನು ವೇಣುಗೋಪಾಲ ಕಾಸರಗೋಡು ಅವರ 'ಹತ್ತು ನಾಟಕಗಳು' ಎನ್ನುವ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಜೇಮ್ಸ್ ಪಹರೆ ನಡೆಸುತ್ತಿದ್ದಾಗ ಹೊರಗೆ ಜನರು ಏನೆಂದು ಘೋಷಣೆ ಕೂಗುತ್ತಿದ್ದರು?
2. ಯಾಕೆ ದಯಮಾಡಿಸಿದಿರಿ? ಎಂದು ಪಿಲಾತನು ಕೇಳಿದಾಗ ಕಾಯಫ ಮತ್ತು ಉರಿಯಾ ಏನು ಹೇಳಿದರು?
2. ಪಿಲಾತನು ಇವರು ನಿನ್ನನ್ನು ನಾಸ್ತಿಕನೆಂದು ತಿಳಿದಿದ್ದಾರೆ ಎಂದು ಹೇಳಿದಾಗ ಜೀಸಸ್ ಏನು ಹೇಳಿದನು?
3. ತನ್ನ ತೀರ್ಪಿನಲ್ಲಿ ಪಿಲಾತನು ಜೀಸಸ್ ಗೆ ನೀಡಿದ ಶಿಕ್ಷೆ ಯಾವುದು?
4. ಶಿಲುಬೆಗೇರಿಸಲ್ಪಟ್ಟ ಜೀಸಸ್ ಕೊನೆಯಲ್ಲಿ ಹೇಳಿದ ಮಾತುಗಳು ಯಾವುವು?

## ವೈಶಿಷ್ಟ್ಯ ಬರೆಯಿರಿ

ಕೆಳಗೆ ನೀಡಿರುವ ವಾಕ್ಯಗಳ ವಿಶೇಷತೆಯನ್ನು ಬರೆಯಿರಿ.

- ಇಂದು ದ್ವೇಷಿಸಬಹುದು ನಾಳೆ ಪ್ರೀತಿಸಬಹುದು
- ಓ ಮಹಾತ್ಮ, ಜೀಸಸ್ ಈ ಶಿಲುಬೆ ನಿನಗಲ್ಲ... ನನಗೆ

## ರೂಪಾಂತರಿಸಿ ಬರೆಯಿರಿ

'ಶಿಲುಬೆ' ನಾಟಕದ ಕತೆಯನ್ನು ಗದ್ಯರೂಪದಲ್ಲಿ ಬರೆಯಿರಿ.

## ಪಾತ್ರಚಿತ್ರಣ ಮಾಡಿರಿ

- ಪ್ರೇಮಮಯ ಸ್ವರ್ಗೀಯ ಭಾವನೆಯ ಬೋಧಿಸಿದೆ
- ತುಂಬ ಎತ್ತರವಿಹುದು ಎನ್ನ ಕನಸಿನ ರಾಜ್ಯ
- ಓ ತಂದೆ ಕ್ಷಮಿಸಿವರ – ಈ ಮಾತುಗಳ ಆಧಾರದಲ್ಲಿ ಶಿಲುಬೆ ನಾಟಕದಲ್ಲಿ ಬಂದಿರುವ 'ಜೀಸಸ್'ನ ಪಾತ್ರಚಿತ್ರಣ ಮಾಡಿರಿ.

## ಭಿತ್ತಿಪತ್ರ ತಯಾರಿಸಿರಿ

ನಿಮ್ಮ ಶಾಲಾ ವಾರ್ಷಿಕೋತ್ಸವದಂದು ಪ್ರದರ್ಶನಗೊಳ್ಳಲಿರುವ 'ಶಿಲುಬೆ' ನಾಟಕದ ಪ್ರಚಾರಾರ್ಥವಾಗಿ ಐಸಿಟಿಯ ಸಹಾಯದಿಂದ ಒಂದು ಭಿತ್ತಿಪತ್ರ ರಚಿಸಿರಿ.

## ಪ್ರಬಂಧ ಬರೆಯಿರಿ

'ಶಿಲುಬೆ' ನಾಟಕದಲ್ಲಿ ತನ್ನನ್ನು ಶಿಲುಬೆಗೇರಿಸಿದವರನ್ನು ಜೀಸಸ್ 'ಓ ತಂದೆ ಕ್ಷಮಿಸಿವರ. ತಾವೇನು ಮಾಡುವೆವು ಎಂದು ತಿಳಿಯದ ಜನರ' ಎಂದು ಹೇಳಿ ಅವರನ್ನು ಕ್ಷಮಿಸಿ ಹೃದಯ ವೈಶಾಲ್ಯವನ್ನು ಮೆರೆದುದನ್ನು ಓದಿರುವಿರಲ್ಲವೇ? ಈ ಹಿನ್ನೆಲೆಯಲ್ಲಿ ಶಾಂತಿ, ತಾಳ್ಮೆ, ಕ್ಷಮಾಗುಣ ಇತ್ಯಾದಿಗಳ ಮಹತ್ವವನ್ನು ವಿವರಿಸಿಕೊಂಡು 'ನಮ್ಮಲ್ಲಿರಬೇಕಾದ ಮಾನವೀಯ ಗುಣಗಳು' ಎಂಬ ವಿಷಯದ ಕುರಿತು ಒಂದು ಪ್ರಬಂಧ ಬರೆಯಿರಿ.

## ಅಭಿನಯಿಸಿರಿ

'ಶಿಲುಬೆ' ನಾಟಕದಲ್ಲಿ ಬಂದಿರುವ ಪಾತ್ರಗಳನ್ನು ಹಂಚಿಕೊಂಡು ನಾಟಕವನ್ನು ತರಗತಿಯಲ್ಲಿ ಅಭಿನಯಿಸಿರಿ.

* * *

# ಅರ್ಥಕೋಶ

## ಅ

ಅಗ್ಗ – ಕಡಿಮೆ ಬೆಲೆಯ

ಅಜ್ಞಾನ – ಅರಿವಿಲ್ಲದಿರುವಿಕೆ

ಅಣಕಿಸು – ಕುಚೋದ್ಯ ಮಾಡು, ಚೇಷ್ಟೆ ಮಾಡು

ಅತ್ಯುತ್ಕೃಷ್ಟ – ಉತ್ತಮ ದರ್ಜೆಯ, ಅತಿ ಶ್ರೇಷ್ಠ

ಅದುಮು – ಒತ್ತು

ಅನೂಚಾನ – ಪರಂಪರೆಯಾಗಿ ಚಾಚೂ ತಪ್ಪದೆ ನಡೆದು ಬಂದುದು

ಅಪಥ್ಯ – ಹಿತವಲ್ಲದ್ದು

ಅಪರಂಪಾರ – ಎಲ್ಲೆ ಮೀರಿದುದು

ಅಪ್ಪಚ್ಚಿ – ರೊಟ್ಟಿ ಮುಂತಾದ ತಿಂಡಿ ತಿನಸು

ಅರಳು – ಹೂವು

ಅರಿ – ಶತ್ರು

ಅರಿವು – ಜ್ಞಾನ

ಅಲಕ್ಷ್ಯ - ಗಮನ ಕೊಡದಿರುವ

ಅಸ್ತ್ರ – ಆಯುಧ

ಅಸ್ಪೃಶ್ಯತೆ – ಸ್ಪರ್ಶದಿಂದ ದೂರವಿರಿಸುವಿಕೆ

ಅಸ್ಸಿಮನಸ್ಸು – ಆಸ್ಟ್ರೇಲಿಯಾದ ಜನರ ಮನಸ್ಸು

ಅಶರಣತೆ – ಶರಣಾಗದಿರುವುದು

## ಆ

ಆಣತಿ – ಆಜ್ಞೆ

| | | |
|---|---|---|
| ಆವೃತ್ತಿ | – | ಮತ್ತೆ ಮತ್ತೆ ಬರುವುದು, ಸುತ್ತುವುದು, ತಿರುಗುವುದು. |
| ಆಶಿಸದೆ | – | ಬಯಸದೆ |
| ಆಷಾಢಭೂತಿ | – | ಮೋಸಗಾರ, ಬೂಟಾಟಿಕೆಯವನು |
| ಆಸ್ತಿಕ | – | ದೇವರ ಅಸ್ತಿತ್ವವನ್ನು ಒಪ್ಪಿಕೊಳ್ಳುವವ |
| ಆಹುತಿ | – | ಬಲಿ |

## ಉ

| | | |
|---|---|---|
| ಉತ್ಕಂಪಿಸು | – | ಅತಿಯಾಗಿ ಕಂಪನಗೊಳ್ಳು |
| ಉತ್ಕೃಷ್ಟ | – | ಶ್ರೇಷ್ಠ |
| ಉತ್ಪಾತ | – | ಭೂಕಂಪ, ಉಲ್ಕಾಪಾತ ಮುಂತಾದ ಆಕಸ್ಮಿಕಗಳು, ಅಪಶಕುನ |
| ಉದ್ವಿಗ್ನ | – | ಅಪ್ರಸನ್ನ, ಮುನಿಸಿಕೊಂಡ, ತಳಮಳಗೊಂಡ |
| ಉರುಬು | – | ವೇಗ , ತೀವ್ರತೆ |

## ಊ

| | | |
|---|---|---|
| ಊರ್ಧ್ವ | – | ಮೇಲ್ಮುಖ |

## ಋ

| | | |
|---|---|---|
| ಋತುಮಾನ | – | ತಿಂಗಳುಗಳ ಲೆಕ್ಕ, ಕಾಲಮಾನ |

## ಎ

| | | |
|---|---|---|
| ಎಮ್ಮ | – | ನಮ್ಮ |
| ಎರಚು | – | ಚೆಲ್ಲು |

## ಒ

| | | |
|---|---|---|
| ಒಗಚು | – | ಆರು ವಿಧವಾದ ರಸಗಳಲ್ಲಿ ಒಂದು, ಒಗರು |
| ಒಸರು | – | ಸುರಿಯು, ನೀರಿನ ಒರತೆ |

## ಔ

ಔತ್ಸುಕ್ಯ – ಕುತೂಹಲ, ಗಾಬರಿ

## ಅಂ

ಅಂಗುಳು – ಬಾಯಿಯ ಒಳಗಿನ ಮೇಲ್ಭಾಗ

ಅಂಚು – ಬದಿ

ಅಂಜಿಕೆ – ಭಯ

ಅಂತರ್ಮುಖಿ – ತನ್ನದೇ ಆದ ಭಾವನೆಗಳಲ್ಲಿ ಮುಳುಗಿ ಹೋದವ

ಅಂತ್ಯಕಾಲ – ಕೊನೆಗಾಲ

## ಕ

ಕಕ್ಕಿದ – ವಾಂತಿ ಮಾಡಿದ

ಕಣ್ಮರೆ – ಮಾಯ, ಕಣ್ಣಿಂದ ದೂರವಾಗು

ಕಪಟಿ – ವಂಚಕ

ಕಪ್ಪೆಚಿಪ್ಪು – ಚಿಪ್ಪು, ಸಮುದ್ರದಲ್ಲಿ ವಾಸಿಸುವ ಜೀವಿಯಿಂದ ಸೃಷ್ಟಿಸಲ್ಪಟ್ಟ ಗಟ್ಟಿಯಾದ ರಕ್ಷಣಾತ್ಮಕ ಹೊರ ಕವಚ.

ಕರ್ತಾರ – ದೇವರು, ಪೂಜ್ಯವೆಂದು ಭಾವಿಸಲಾದ

ಕಾಡ್ಗಿಚ್ಚು – ಕಾಡಿನ ಬೆಂಕಿ

ಕಾರ್ಗತ್ತಲು – ದಟ್ಟವಾದ ಕತ್ತಲೆ

ಕುಗ್ರಾಮ – ಅಭಿವೃದ್ಧಿ ಕಾಣದ ಹಳ್ಳಿ

ಕುಪಿತ – ಕೋಪಗೊಂಡ

ಕುಪ್ರಸಿದ್ಧ – ಅಪಖ್ಯಾತಿಗೆ ಗುರಿಯಾದ, ಕೆಟ್ಟ ಹೆಸರು ಬಂದ.

ಕುಹಕಿ – ಮೋಸಗಾರ

ಕೇಕೆ – ಕೂಗು, ಅಪಹಾಸ್ಯದ ಕೂಗು

ಕೈಗಡ – ಕೈಸಾಲ

ಕೊಳಗ – ಅಳತೆಯ ಪಾತ್ರೆ, 4 ಬಳ್ಳದ ಅಳತೆ

ಕ್ಲುಪ್ತ – ಸಮಯಕ್ಕೆ ಸರಿಯಾಗಿ

ಕ್ಷುದ್ರ – ತುಚ್ಛ, ನೀಚ

ಕ್ಷುಲ್ಲಕ – ಸಣ್ಣ, ಚಿಕ್ಕ

ಕಂಬನಿ – ಕಣ್ಣೀರು

ಕುಂತ – ಭರ್ಚಿ, ಈಟಿ

ಕೆಂಡಾಮಂಡಲ – ಕೆಂಡದ ವರ್ತುಲ, ತುಂಬಾ ಸಿಟ್ಟುಗೊಳ್ಳು

ಕೊಂಡಿ – ಕೊಕ್ಕೆ, ಸಂಪರ್ಕ ಕಲ್ಪಿಸುವುದಕ್ಕಾಗಿ ಜೋಡಿಸಿಕೊಂಡ.

## ಖ

ಖಾತೆ – ಸಂಸ್ಥೆ ಅಥವಾ ವಿಷಯಕ್ಕೆ ಮೀಸಲಾದ ಲೆಕ್ಕದ ವಿಭಾಗ.

## ಗ

ಗಣಿಸದೆ – ಲೆಕ್ಕಿಸದೆ

ಗದ್ಗದಿತ – ದುಃಖದಿಂದ ನಡುಗುವ ಮಾತು, ಕಂಠ ನಡುಗುವ ಧ್ವನಿ.

ಗರಿಮೆ – ಹಿರಿಮೆ

ಗೂನು – ಮುಂದಕ್ಕೆ ಬಾಗಿದ ಬೆನ್ನು

ಗೇಲಿ – ಹಾಸ್ಯ

ಗೌಪ್ಯ – ಗುಟ್ಟು, ರಹಸ್ಯ.

ಗುಂಡಿಗೆ – ಎದೆ, ಹೃದಯ, ಧೈರ್ಯ

## ಚ

ಚಪಲ – ಆಸೆ

ಚರಾಚರ – ಚಲಿಸುವ ಮತ್ತು ಚಲಿಸದ, ಜಂಗಮ - ಸ್ಥಾವರ

ಚಾಲನೆ – ಚಲನಶಕ್ತಿ, ಆರಂಭ

ಚಾವಟಿ – ಚಾಟಿ

ಚಾವಡಿ – ಪಡಸಾಲೆ, ಹಜಾರ

ಚಿರಾಯು – ದೀರ್ಘಾಯುಸ್ಸು

ಚೂರ್ಣ – ಹುಡಿ, ಸುವಾಸನೆಯ ಪುಡಿ

ಚೆದರು – ಬೇರೆ ಬೇರೆಯಾಗು, ಚೆಲ್ಲಾಪಿಲ್ಲಿಯಾಗು

## ಜ

ಜಿಪುಣ – ಲೋಭಿ

ಜಿಹ್ವೆ – ನಾಲಿಗೆ

ಜೀತ – ಗುಲಾಮಗಿರಿ, ಕೂಲಿ

## ಟ

ಟಾಂಗಾ – ಒಂಟಿ ಕುದುರೆಯ ಗಾಡಿ

## ಡ

ಡಂಭಾಚಾರ – ತೋರಿಕೆಯ ಆಚಾರ – ವಿಚಾರ

ಡಾಂಭಿಕ – ಒಣ ಹೆಮ್ಮೆಯುಳ್ಳವನು

## ತ

ತಮಟೆ – ಒಂದು ಬಗೆಯ ಚರ್ಮ ವಾದ್ಯ

ತವಕಿಸು – ಆತುರ ಪಡು, ಬಯಸು

ತಾರತಮ್ಯ – ಕೈಸನ್ನೆ ಮಾಡಿ ಇಲ್ಲವೆನ್ನುವುದು

ತುಚ್ಛ – ಕಡಿಮೆ, ಸಣ್ಣ, ಹೀನ

ತುರುಬು – ಕೂದಲಿನ ಗಂಟು

ತೆಳ್ಳಗೆ – ತೆಳುವಾಗಿ, ಬಡಕಲು

ತೊಡರು – ಸಿಲುಕು

## ದ

ದಟ್ಟೈಸಿ – ದಟ್ಟವಾಗಿ, ಒತ್ತೊತ್ತಾಗಿ

ದಬ್ಬು – ದೂಡು, ನೂಕು

ದರ್ಪ – ಅಹಂಕಾರ

ದಲಿತ – ಹಿಂದುಳಿದವನು

ದಾತಾರ – ಒಡೆಯ, ಕೊಡುವವನು

ದಾಸ್ಯ – ಸೇವಕತನ

ದಿಗ್ಭ್ರಮೆ – ಗಾಬರಿ

ದಿಶಾ – ದಿಕ್ಕು

ದುರ್ಬಳಕೆ – ಕೆಟ್ಟ ಉಪಯೋಗ

ದುರ್ಬುದ್ಧಿ – ಕೆಟ್ಟ ಬುದ್ಧಿ, ಅವಿವೇಕ.

ದುರ್ವ್ಯವಹಾರ – ಕೆಟ್ಟಕೆಲಸ

ದೇಹಾಲಸ್ಯ – ಅನಾರೋಗ್ಯ, ಸೋಮಾರಿತನ, ದಣಿವು

## ಧ

ಧೂಮಸ್ತೋಮ – ದಟ್ಟವಾಗಿ ವ್ಯಾಪಿಸಿರುವ ಹೊಗೆ

ದೃಢ – ಧೈರ್ಯಗೆಡದ

## ನ

ನವೆ – ಕೃಶವಾಗು, ದುಃಖಿಸು

ನಾಭಿ – ಹೊಕ್ಕುಳು,

ನಿಖರ – ಕರಾರುವಕ್ಕಾಗಿ, ನಿರ್ದಿಷ್ಟವಾಗಿ, ಸ್ಪಷ್ಟವಾಗಿ

ನಿಗಾ – ಲಕ್ಷ್ಯ

ನಿರ್ಭಯ – ಭಯವಿಲ್ಲದ

ನಿಷ್ಕ್ರಿಯಗೊಳಿಸು – ಯಾವ ಕೆಲಸವನ್ನು ಮಾಡದಿರುವಿಕೆ, ಜಡಗೊಳಿಸು, ತಟಸ್ಥಗೊಳಿಸು

## ಪ

| | | |
|---|---|---|
| ಪಹರೆ | – | ಕಾವಲು |
| ಪಾಶ | – | ಹಗ್ಗ |
| ಪೀಕಲಾಟ | – | ಉಪದ್ರವ, ತೊಂದರೆ. |
| ಪೂರ್ವಾನುಮತ | – | ಮೊದಲೇ ನೀಡಿರುವ ಅನುಮತಿ |
| ಪೊರೆ | – | ಸಲಹು, ಕಾಪಾಡು, ರಕ್ಷಿಸು |
| ಫಾಲ | - | ಹಣೆ |
| ಫಾಲನೇತ್ರ | - | ಹಣೆಯಲ್ಲಿ ಕಣ್ಣುಳ್ಳವ, ಶಿವ |

## ಬ

| | | |
|---|---|---|
| ಬಸರು | – | ಉದರ, ಹೊಟ್ಟೆ, ಗರ್ಭ |
| ಬಳ್ಳ | – | ಅಕ್ಕಿ ಮೊದಲಾದ ಧಾನ್ಯಗಳನ್ನು ಅಳೆಯುವ ಮಾಪಕ |
| ಬಿಳುಚು | – | ಕಳಾಹೀನವಾಗು |
| ಬೆತ್ತಲೆ | – | ವಿವಸ್ತ್ರ, ನಗ್ನ |
| ಬೆದರಿಸು | – | ಹೆದರಿಸು |
| ಬೆನ್ನಟ್ಟು | – | ಓಡಿಸಿಕೊಂಡು ಹೋಗು |
| ಬೆರಗು | – | ಆಶ್ಚರ್ಯ |
| ಬೋನು | – | ಪಂಜರ |
| ಬೋರಲು | – | ಅಂಗಾತ |
| ಬ್ಯಾರಿಸ್ಟರ್ | – | ನ್ಯಾಯವಾದಿ |

## ಭ

| | | |
|---|---|---|
| ಭಲ್ಲೆ | – | ಈಟಿ, ಭರ್ಜಿ |
| ಭೂಪ | – | ರಾಜ |

| | | |
|---|---|---|
| ಭೂಮಂಡಲ | – | ವೃತ್ತಾಕಾರದ ಭೂಮಿ |
| ಭೇಷ್ | – | ಚೆನ್ನ, ಒಂದು ಮೆಚ್ಚುಗೆಯ ಮಾತು |

### ಮ

| | | |
|---|---|---|
| ಮಗ್ನ | – | ತಲ್ಲೀನ |
| ಮಣ್ಣಾಗು | – | ಸತ್ತು ಹೋಗು, ದಫನಗೊಳ್ಳು |
| ಮಹಾಚೇತನ | – | ಮಹಾಪುರುಷ |
| ಮಾಗಿದ | – | ಹಣ್ಣಾದ, ಪ್ರಬುದ್ಧವಾದ |
| ಮಾಮರ | – | ಮಾವಿನ ಮರ |
| ಮಾರವಾಡಿ | – | ಚಿನ್ನ ಮತ್ತು ಬಟ್ಟೆಗಳ ವ್ಯಾಪಾರಿ (ಉತ್ತರ ಭಾರತದವರು) |
| ಮುಕ್ತಿ | – | ಬಿಡುಗಡೆ, ವಿಮೋಚನೆ, ಮೋಕ್ಷ. |
| ಮೂಕ | – | ಮಾತಿಲ್ಲದ |
| ಮುಂಜಾನೆ | – | ಬೆಳಗ್ಗೆ, ಬೆಳಗಿನ ಜಾವ |
| ಮೊಂಡುತನ | – | ಹಠಮಾರಿತನ |

### ಯ

| | | |
|---|---|---|
| ಯಥೇಷ್ಟ | – | ಬೇಕಾದಷ್ಟು |

### ರ

| | | |
|---|---|---|
| ರುಜುವಾತು | – | ಸಾಕ್ಷ್ಯ, ಪುರಾವೆ |
| ರೇಗು | – | ಸಿಟ್ಟುಗೊಳ್ಳು |
| ರೋಗ ಗ್ರಸ್ತ | – | ಸದಾ ರೋಗಿಯಾಗಿರುವ |

### ಲ

| | | |
|---|---|---|
| ಲಕ್ಷ್ಯ | – | ಗಮನ |
| ಲಂಗೋಟಿ | – | ಕೌಪೀನ, ಕೋವಣ |

### ವ

| | | |
|---|---|---|
| ವಚನ | – | ಮಾತು |
| ವಾಗ್ವಿಭವ | – | ಮಾತಿನ ವೈಭವ, ಮಾತಿನ ವೈಖರಿ |
| ವಿದ್ಯಾರ್ಜನೆ | – | ವಿದ್ಯೆಯ ಸಂಪಾದನೆ |
| ವಿಧಿ | – | ಸೃಷ್ಟಿಕರ್ತ |
| ವೀರಭದ್ರ | – | ಶಿವನ ಅಂಶದಿಂದ ಹುಟ್ಟಿದವನು |
| ವ್ಯಾಸಂಗ | – | ಆಸಕ್ತಿಯಿಂದ ಮಾಡುವ ವಿದ್ಯಾಭ್ಯಾಸ |

### ಶ

| | | |
|---|---|---|
| ಶುಶ್ರೂಷೆ | – | ಉಪಚಾರ |
| ಶ್ರೋತೃ | – | ಕೇಳುವವರು, ಕೇಳುವ |
| ಶ್ಲೇಷ್ಮ | – | ಮೂಗಿನ ನಾಸಿಕ ನಾಳದ ಲೋಳೆ |

### ಸ

| | | |
|---|---|---|
| ಸನ್ನೆ | – | ಸಂಜ್ಞೆ, ಸಂಕೇತ |
| ಸರಾಬರಾಯಿ | – | ಪೂರೈಕೆ, ಒದಗಿಸುವಿಕೆ |
| ಸಾಧಕ | – | ಸಾಧನೆ ಮಾಡಿದವನು |
| ಸಾಬೀತುಪಡಿಸು | – | ದೃಢಪಡಿಸು, ರುಜುವಾತು ಮಾಡು |
| ಸಾರಥಿ | – | ಟಾಂಗಾ ಓಡಿಸುವವನು, ರಥ ನಡೆಸುವವನು |
| ಸಾರ್ಥಕ್ಯ | – | ಅರ್ಥಪೂರ್ಣತೆ, ಪ್ರಯೋಜನ, ಸಾರ್ಥಕತೆ, ಸಫಲತೆ |
| ಸಿರಿ | – | ಸಂಪತ್ತು |
| ಸುಜ್ಞಾನ | – | ಉತ್ತಮ ತಿಳುವಳಿಕೆ |
| ಸೆಟೆದು ನಿಲ್ಲು | – | ನೆಟ್ಟಗೆ ನಿಲ್ಲು |
| ಸೋನೆ | – | ಜಿನುಗುಮಳೆ |
| ಸೌಹಾರ್ದ | – | ಹೊಂದಾಣಿಕೆ, ಹೃದಯವಂತಿಕೆ |
| ಸ್ಥೈರ್ಯ | – | ಧೈರ್ಯ |

| | | |
|---|---|---|
| ಸ್ನಾತಕೋತ್ತರ ಪದವಿ | – | ಪದವಿ ಶಿಕ್ಷಣದ ಬಳಿಕದ ಉನ್ನತ ಪದವಿ |
| ಸ್ವಚ್ಛಂದ | – | ಕಟ್ಟುಪಾಡಿಲ್ಲದ, ಮುಕ್ತ |
| ಸಂಕಲ್ಪ | – | ಮನಸ್ಸಿನ ದೃಢ ನಿರ್ಧಾರ |
| ಸಂಗರ | – | ಯುದ್ಧ, ಕಾಳಗ |
| ಸಂದಿಗ್ಧ | – | ಜಟಿಲವಾದ |

**ಹ**

| | | |
|---|---|---|
| ಹವಣಿಸು | – | ಪ್ರಯತ್ನಿಸು |
| ಹಸನು | – | ಹದವಾದುದು, ಮನೋಹರವಾದುದು, ಸರಿಯಾದುದು |
| ಹಸ್ತ | – | ಕೈ |
| ಹೀನೈಸು | – | ಹೀಯಾಳಿಸು, ತಿರಸ್ಕರಿಸು, ಹಳಿ |
| ಹೊಂಬಿಸಿಲು | – | ಬಂಗಾರದ ಬಣ್ಣದ ಬಿಸಿಲು, ಎಳೆಯ ಬಿಸಿಲು |
| ಹೊನಲು | – | ಪ್ರವಾಹ, ಬೆಂಕಿ ಕಿಡಿಗಳ ಪ್ರವಾಹ |
| ಹೊಸಲು | – | ಹೊಸ್ತಿಲು |
| ಹಂತಕ | – | ಕೊಲೆಗಾರ |
| ಹಂಬು | – | ಬಳ್ಳಿಯಂತೆ ಹರಡು, ವಿಸ್ತಾರವಾಗಿ ಹರಡಿದ ಬಳ್ಳಿ |

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in